
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಏಪ್ರಿಲ್ 15, 2009 ರೂ. 12/-



ಲಿಂಗದೇವು ಹಳೆಮನೆ ಅರವತ್ತು



ದೆಲ್ಲಿ ಗದ್ದುಗೆ ಯಾರಿಗೆ?

ಎಚ್ಚೆತ್ತ ಕಾಂಗ್ರೆಸ್! ಹಳ್ಳಕ್ಕೆ ಬಿಜೆಪಿ!

ಹಣಾಹಣಿ ೨೦೦೯

ಬೆಂ.ಗ್ರಾ. : ತೇಜಸ್ವಿನಿ ಡೀಲು ಜೆಡಿಎಸ್‌ಗೆ ಮೊದಲ ಗೆಲುವು

ಹಾವೇರಿ: ಸಲಿಂ ಅಹ್ಮದ್ ಎಂಟ್ರೀ ಉದಾಸಿ ಮಗನಿಗೆ ಡಿಸೆಂಟ್ರಿ!

ಚಿತ್ರದುರ್ಗ: ಕಾಂಗ್ರೆಸ್ ಅಭ್ಯರ್ಥಿ ಜೆ.ಜೆ.ಹಟ್ಟಿ ತಿಪ್ಪೇಸ್ವಾಮಿ ಎಂಬ ಶಾಕ್

ಕೋಡಿಮಠ ಭವಿಷ್ಯ: ಯಡ್ಡಿ ಪರಾರಿ!




ಸರಣಿ ಕೊಲೆಗಳ ಕೂಲಿ ಮಾಫಿಯಾ

ಲ್ಲೆಯಾ ಇದು ಕಲಾಸಿಪಾಳ್ಯ

ಪ್ರಜಾತಂತ್ರವನ್ನೇ ಸೋಲಿಸುವ ಚುನಾವಣೆಗಳು!!

"ಆಪರೇಷನ್ ಸಕ್ಸಸ್, ಪೇಷಂಟ್ ಡೈಡ್" ಎನ್ನುವುದಕ್ಕೆ ಅತ್ಯುತ್ತಮ ಉದಾಹರಣೆ ಭಾರತೀಯ ಚುನಾವಣೆಗಳು ಮತ್ತು ಭಾರತೀಯ ಪ್ರಜಾತಂತ್ರ. ವಾಸ್ತವದಲ್ಲಿ ಚುನಾವಣೆಗಳು ಪ್ರಜಾತಂತ್ರಕ್ಕೆ ಮತ್ತಷ್ಟು ಜೀವವನ್ನು ಎರೆಯಬೇಕು. ಪ್ರಜಾತಂತ್ರವನ್ನೂ ಜೀವಂತವಾಗಿಡಬೇಕು. ಆದರೆ ಈ ಚುನಾವಣೆಗಳು ಪ್ರಜಾತಂತ್ರವನ್ನು ಪೊರೆಯುತ್ತಿವೆಯೋ? ಕೊಲ್ಲುತ್ತಿವೆಯೋ?


ಚುನಾವಣೆಯು ಒಂದು ದೇಶದಲ್ಲಿ ಪ್ರಜಾತಂತ್ರ ಜೀವಂತವಾಗಿರುವುದಕ್ಕೆ ದೊಡ್ಡ ಸಾಕ್ಷಿ ಎಂದು ಹೇಳುವ ಮುತ್ಸದ್ದಿಗಳು ಪಕ್ಕದ ಪಾಕಿಸ್ತಾನಕ್ಕೆ ಹೋಲಿಸಿದರೆ ಭಾರತ ಪ್ರಜಾತಂತ್ರ ಎಷ್ಟು ಮಾಗಿದೆ ನೋಡಿ ಎಂದು ಸಮಾಧಾನದ ನಿಟ್ಟುಸಿರು ಬಿಡುತ್ತಾರೆ. ಭಾರತದ ಪ್ರಜಾತಂತ್ರದಲ್ಲಿ ದೋಷಗಳಿವೆ ಎಂದು ಒಪ್ಪಿಕೊಳ್ಳುವವರೂ ಚುನಾವಣೆ ಈ ದೇಶದ ಪ್ರಜಾತಂತ್ರವನ್ನು ಹೆಚ್ಚಿಸುತ್ತಿದೆ ಎಂದೇ ಅಭಿಪ್ರಾಯ ಪಡುತ್ತಾರೆ. ಅದಕ್ಕೆ ಅವರು ಪ್ರಜಾತಂತ್ರದ ಬಗ್ಗೆ ಅಬ್ರಹಾಂ ಲಿಂಕನ್‌ನ ಪ್ರಖ್ಯಾತ 'ಪ್ರಜೆಗಳಿಂದ, ಪ್ರಜೆಗಳಿಗಾಗಿ ಮತ್ತು ಪ್ರಜೆಗಳೇ ಆಳುವ ವ್ಯವಸ್ಥೆ' ಎಂಬ ವ್ಯಾಖ್ಯಾನವನ್ನು ಉದ್ಧರಿಸುತ್ತಾರೆ. ತಮ್ಮನ್ನು ಯಾರು ಆಳಬೇಕೆಂದು ಈ ಚುನಾವಣೆಗಳ ಮೂಲಕ ಜನರೇ ನಿರ್ಧರಿಸುವುದರಿಂದ ಇದಕ್ಕಿಂತ ಉತ್ತಮ ಪ್ರಜಾತಂತ್ರವಾಗಲೀ, ಚುನಾವಣೆಗಿಂತ ಉತ್ತಮ ಪ್ರಜಾತಾಂತ್ರಿಕ ಪ್ರಕ್ರಿಯೆಯಾಗಲೀ ಮತ್ತೊಂದಿಲ್ಲವೆಂಬುದು ಬಹುತೇಕ ಗಾಂಧಿವಾದಿಗಳಿಂದ ಹಿಡಿದು, ಸಮಾಜವಾದಿ, ಸ'ಮಜಾ'ವಾದಿಗಳ ತನಕ ಎಲ್ಲರ ಅಭಿಪ್ರಾಯ. ಇಲ್ಲಿ 'ಪ್ರಜೆ'ಯೆನ್ನುವವರು ಯಾರು? ಓಟು ಹಾಕುವ ಪ್ರಜೆ, ಚುನಾವಣೆಗೆ ನಿಂತು ಗೆಲ್ಲುವ ಪ್ರಜೆ, ಗೆದ್ದ ಸರ್ಕಾರಗಳಿಂದ ಅನುಕೂಲ ಪಡೆಯುವ ಪ್ರಜೆ ಒಬ್ಬರೆಯೇ? ಅಥವಾ ಬೇರೆ ಬೇರೆಯೇ? ಪ್ರಜೆಗಳೇ ಆಳುವ ವ್ಯವಸ್ಥೆ ಎಂದರೆ ಯಾವ ಪ್ರಜೆ ಬೇಕಾದರೂ ಚುನಾವಣೆಗೆ ನಿಲ್ಲುವ ಅವಕಾಶಗಳು ಈ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಇರಬೇಕಿತ್ತಲ್ಲವೇ? ಈ ಬಾರಿ ಚುನಾವಣೆಗೆ ನಿಲ್ಲುತ್ತಿರುವ ಅಭ್ಯರ್ಥಿಗಳು ಎಂಥಾ 'ಪ್ರಜೆ'ಗಳು?



ಮೊನ್ನೆ ಆಂಧ್ರ ಪ್ರದೇಶದಲ್ಲಿ ತೆಲಂಗಾಣ ರಾಷ್ಟ್ರ ಸಭಾ (ಟಿ.ಆರ್.ಎಸ್) ಕಚೇರಿಯಲ್ಲಿ ಪಕ್ಷದ ಟಿಕೆಟ್ ಪಡೆದ ಅಭ್ಯರ್ಥಿಯನ್ನು ಆ ಪಕ್ಷದ ಸದಸ್ಯರೇ ಅಟ್ಟಾಡಿಸಿಕೊಂಡು ಹೊಡೆದಿದ್ದಾರೆ. ಕಾರಣ? ಈವರೆಗೆ ಈ ಮನುಷ್ಯ ಯಾರೆಂಬುದೇ ಆ ಪಕ್ಷದ ಸದಸ್ಯರಿಗೆ ತಿಳಿದಿರಲಿಲ್ಲ. ಅಷ್ಟೇ ಅಲ್ಲ ಪಕ್ಷದ ಕಾರ್ಯಕರ್ತರು ಈ ಅಪರಿಚಿತನಿಗೆ ಟಿಕೆಟ್ ಕೊಡಬಾರದು ಎಂದು ಹಠ ಹಿಡಿದಾಗ ಆತ "10 ಕೋಟಿ ರೂಪಾಯಿಗಳನ್ನು ಪಕ್ಷಕ್ಕೆ ಕೊಟ್ಟು ಟಿಕೆಟ್ ಖರೀದಿಸಿದ್ದೇನೆ" ಎಂದು ಅಬ್ಬರಿಸಿದ. ಇದನ್ನು ಕೇಳಿ ಸಿಟ್ಟಿಗೆದ್ದ ಕಾರ್ಯಕರ್ತರು ಆತ ತೆಲಂಗಾಣವನ್ನೇ ಬಿಟ್ಟು ಓಡಿಹೋಗುವಂತೆ ಅವನನ್ನು ತದಕಿದ್ದಾರೆ. ಈವರೆಗೆ ಈ ಟಿಆರ್‌ಎಸ್ ಪಕ್ಷದ ಹೋರಾಟಗಳಲ್ಲಾಗಲೀ, ಸಿದ್ಧಾಂತಗಳಲ್ಲಾಗಲೀ ಎಂದೂ ಭಾಗವಹಿಸದ ಈ 'ಪ್ರಜೆ' ಕೇವಲ ತನ್ನ ಹಣದ ಬಲದಿಂದ ಉಮೇದುವಾರಿಕೆಯನ್ನು ಅರ್ಥಾತ್ ಲೋಕಸಭೆಯಲ್ಲಿ ಪ್ರಜೆಗಳ ಹೆಸರಲ್ಲಿ ಶಾಸನ ಮಾಡುವ ಅಧಿಕಾರವನ್ನು ಖರೀದಿ ಮಾಡುತ್ತಾನೆ. ಕಳೆದ ಚುನಾವಣೆಯಲ್ಲಿ ಮದ್ಯ ಜೂಜು, ಮಾನಿನಿ ಮದಿರೆಯರನ್ನು ಬಿಟ್ಟರೆ ಬೇರೇನೂ ಗೊತ್ತಿಲ್ಲದ ವಿಜಯ್ ಮಲ್ಯನಂಥ 'ಪ್ರಜೆ' ಸಹ ಈ ದೇಶದಲ್ಲಿ 'ಜನತಾ ಪಕ್ಷದ' ರಾಜ್ಯಾಧ್ಯಕ್ಷನಾಗಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದೂ ಸಹ ಈ ದೇಶದ ಪ್ರಜಾತಂತ್ರ ಮೆಚೂರ್ ಆಗಿರುವ ಲಕ್ಷಣವೇ ಇರಬೇಕು.

ಇದು ಕೇವಲ ಒಂದು ಪಕ್ಷದ ಕಥೆಯಲ್ಲ, ಇಂದು ಕರ್ನಾಟಕದಲ್ಲಿ ಪ್ರತಿ ಪಕ್ಷವೂ 'ಗೆಲ್ಲಬಲ್ಲ' ಸಮರ್ಥ 'ಪ್ರಜೆ'ಗಾಗಿ ಹುಡುಕಾಡುತ್ತಿದೆ. ಈವರೆಗೆ ಪಕ್ಷದ ಬಗ್ಗೆ, ಜನರ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲದ, ಕೇವಲ ಹಣದ ಥೈಲಿ ಮಾತ್ರ ಇರುವ ದೊಡ್ಡ ದೊಡ್ಡ ಕುಳಗಳು ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳ ಅಭ್ಯರ್ಥಿಯಾಗುತ್ತಿದ್ದಾರೆ. ವಿಜಯ ಕರ್ನಾಟಕದಂತ ಪಕ್ಕಾ ಚೆಡ್ಡಿ ಪತ್ರಿಕೆ ಸಹ "ಬಿಜೆಪಿ ಪಕ್ಷವು ಬೆಂಗಳೂರು ಉತ್ತರ ವಿಭಾಗಕ್ಕೆ ಗೆಲ್ಲಬಲ್ಲ 'ತಾಕತ್ತು' - ಅರ್ಥಾತ್ ಹಣದ ತಾಕತ್ತು - ಇರುವ ವ್ಯಕ್ತಿ ಯಾವುದೇ ಪಕ್ಷದಲ್ಲಿದ್ದರೂ ಕರೆದು ತರುವ ಪ್ರಯತ್ನದಲ್ಲಿದೆ" ಎಂದು ವರದಿ ಮಾಡಿತ್ತು.

ಈಗ ಚುನಾವಣೆಗೆ ನಿಲ್ಲುವ ಪ್ರತಿ ಅಭ್ಯರ್ಥಿಯೂ ತಮ್ಮ ಹಣಕಾಸು ಹಿನ್ನೆಲೆಯ ಬಗ್ಗೆ ಚುನಾವಣಾ ಆಯೋಗಕ್ಕೆ ವರದಿ ಸಲ್ಲಿಸುವುದು ಕಡ್ಡಾಯ. ಅವರು ಆಯೋಗಕ್ಕೆ ಸಲ್ಲಿಸುವ ಲೆಕ್ಕಾಚಾರವೆಲ್ಲಾ ಕೇವಲ ರಾಮನ ಲೆಕ್ಕ. ಕೃಷ್ಣನ ಲೆಕ್ಕ ಹುಡುಕಿ ತೆಗೆಯುವುದು ಸಾಕ್ಷಾತ್ ಕೃಷ್ಣ ಪರಮಾತ್ಮನಿಗೂ ಸಾಧ್ಯವಿಲ್ಲ. ಹಾಗಿದ್ದರೂ ಸಹ ಆ ಪಟ್ಟಿಯಲ್ಲಿ ಒಬ್ಬನೂ/ಳೂ ಬಿಪಿಎಲ್ (ಬಿಲೋ ಪಾವರ್ಟಿ ಲೈನ್ - ಬಡತನ ರೇಖೆಗಿಂತ ಕೆಳಗಿರುವವರು) ಪಕ್ಷದ ಸದಸ್ಯನಿಲ್ಲ! ಅಂದರೆ ಈ ಚುನಾವಣೆಯಲ್ಲಿ ನಿಂತಿರುವ ಯಾವ 'ಪ್ರಜೆ'ಯೂ ಬಡತನರೇಖೆಗಿಂತ ಕೆಳಗಿಲ್ಲ. ಹೀಗಾಗಿಯೇ ರಾಜಕೀಯದಲ್ಲೂ ಸಹ ಅವರು ಬಡವರು ಮತ್ತು ಶ್ರೀಮಂತರ ನಡುವೆ ವ್ಯವಸ್ಥೆ ಎಳೆದಿರುವ ಲಕ್ಷ್ಮಣ ರೇಖೆಯನ್ನು ದಾಟಿ ಬರುವುದಿಲ್ಲ. ಜನಪರ ಹೋರಾಟದಲ್ಲಿರುವ ಕೆಲವರು ಈ ರೇಖೆಯನ್ನು ದಾಟಲು ಯತ್ನಿಸಿದರೆ ಈ ಲಕ್ಷ್ಮಣ ರೇಖೆಯನ್ನು ಕಾಯುತ್ತಿರುವ ರಾಮ ಅವರನ್ನು ಕಾಡಿಗಟ್ಟಿ ಬಿಡುತ್ತಾರೆ!



ನಮ್ಮ ಸಂವಿಧಾನದಲ್ಲಿ ಭಾರತವನ್ನು ಒಂದು ಸ್ವತಂತ್ರ, ಸಾರ್ವಭೌಮಿ, ಸಮಾಜವಾದಿ, ಜಾತ್ಯತೀತ ಗಣ ರಾಜ್ಯವನ್ನಾಗಿ ಕಟ್ಟಿಕೊಳ್ಳಬೇಕೆಂದು ಬರೆದುಕೊಳ್ಳಲಾಗಿದೆ. ಆದರೆ ಅದು ಅಂಬೇಡ್ಕರ್ ಬರೆದ ನಿರ್ದೇಶನ ತತ್ವದಲ್ಲಿರುವ ಆದರ್ಶ ಮಾತ್ರ. ಸಂವಿಧಾನದ ಉಳಿದ ಭಾಗಗಳು ನಿರ್ದೇಶನ ತತ್ವಗಳು ಆಚರಣೆಗೆ ಬರದಂತೆ ರೂಪಿತಗೊಂಡಿವೆ. ಅದಕ್ಕೆ ಜಡಗಟ್ಟಿದ ಹಿಂದೂ ಸಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆ ತರಬಹುದಾದ ಹಿಂದೂ ಕೋಡ್ ಬಿಲ್‌ಅನ್ನು ಜಾರಿಗೆ ತರಲಾಗದೆ ಅಂಬೇಡ್ಕರ್ ಹತಾಶೆಯಿಂದ ರಾಜೀನಾಮೆ ಕೊಟ್ಟಿದ್ದು. "ಇಂದು ನಾವು ರಾಜಕೀಯವಾಗಿ ಸಮಾನವಾಗಿರುವ ಆದರೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಸಮಾನವಾಗಿರುವ ಅಂತರ್ ವೈರುಧ್ಯಗಳಿಂದ ಕೂಡಿದ ಕಾಲಘಟ್ಟವನ್ನು ಪ್ರವೇಶಿಸುತ್ತಿದ್ದೇವೆ. ಆದಷ್ಟು ಬೇಗ ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ತರುವೆಡೆ ಪ್ರಭುತ್ವ ಗಮನ ಹರಿಸದಿದ್ದರೆ ರಕ್ತಪೂರಿತ ಕ್ರಾಂತಿಯಿಂದಲೇ ಜನ ಇದನ್ನು ಬದಲಾಯಿಸುತ್ತಾರೆ" ಎಂದು ದಾರ್ಶನಿಕವಾಗಿ ನುಡಿದದ್ದು.

ಅಂಬೇಡ್ಕರ್ ಬರೆದ ನಿರ್ದೇಶನಾ ತತ್ವದ ಕಲಂ 39 (ಸಿ)ಯು ಸರ್ಕಾರಗಳು ಈ ದೇಶದ ಸಂಪತ್ತು ಒಂದೆಡೆ ಕೇಂದ್ರೀಕರಣವಾಗದಂತೆ ನೀತಿಗಳನ್ನು ರೂಪಿಸಬೇಕೆಂದು ಹೇಳುತ್ತದೆ. ಆದರೆ 91ರಿಂದ ಜಾರಿಯಲ್ಲಿರುವ ಆರ್ಥಿಕ ನೀತಿಗಳು ಈ ದೇಶದ ಸಂಪತ್ತೆಲ್ಲಾ ಕೆಲವೇ ಕೆಲವು ವ್ಯಕ್ತಿಗಳ ಕೈಯಲ್ಲಿ ಕೇಂದ್ರೀಕರಣವಾಗುವಂತೆ ಮಾಡಿದೆ. ಆದ್ದರಿಂದಲೇ ಕಳೆದ 20 ವರ್ಷಗಳಲ್ಲಿ ಅಂಬಾನಿಗಳ ಆಸ್ತಿ 300 ಕೋಟಿ ರೂ. ಗಳಿಂದ 3 ಲಕ್ಷ ಕೋಟಿರೂ.ಗಳಿಗೇರಿದರೆ ಅದೇ ಅವಧಿಯಲ್ಲಿ 2 ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಾರಣ? ಚುನಾವಣೆ ಮೂಲಕ ಅಧಿಕಾರಕ್ಕೆ ಬಂದ ಎಲ್ಲಾ ಪಕ್ಷಗಳಲ್ಲಿ ಮತ್ತವರ ಅಭ್ಯರ್ಥಿಗಳಲ್ಲಿ ಯಾರೂ ಬಿಪಿಎಲ್ 'ಪ್ರಜೆ'ಗಳಿಲ್ಲ. ಯಾವ ಬಿಪಿಎಲ್ ಪ್ರಜೆ ಕೂಡ ಚುನಾವಣೆಯ ಮೂಲಕ ಅಧಿಕಾರವನ್ನು ಪಡೆಯುವ ಕನಸನ್ನೂ ಇಟ್ಟುಕೊಳ್ಳಲು ಸಾಧ್ಯವಿಲ್ಲ.


ಆದ್ದರಿಂದ ಒಂದರ್ಥದಲ್ಲಿ ಈಗಿರುವ ಚುನಾವಣಾ ಪದ್ಧತಿಗಳು ಮತ್ತು ಪಕ್ಷಗಳು ಪ್ರಜಾತಂತ್ರವನ್ನೇ ಕೊಲ್ಲುತ್ತಿದೆ ಎನಿಸುವುದಿಲ್ಲವೇ? ■

No Comments



"ನನಗೆ ಹಿಂದೂಗಳ ಮತಗಳೆ ಸಾಕು. ಅಲ್ಪಸಂಖ್ಯಾತರ ಮತಗಳು ನನಗೆ ಬೇಕಾಗಿಲ್ಲ. ಬೇಕಿದ್ದರೆ ಚುನಾವಣಾ ಆಯೋಗ ನನ್ನ ಮೇಲೆ ಪ್ರಕರಣ ದಾಖಲಿಸಿಕೊಳ್ಳಲಿ."

- ಅನಂತ್‌ಕುಮಾರ್ ಹೆಗಡೆ




"ಪ್ರಚೋದನಾತ್ಮಕ ಭಾಷಣ ಮಾಡಿರುವ ಕಾರವಾರ ಸಂಸದರೂ ಆದ ಬಿಜೆಪಿ ಅಭ್ಯರ್ಥಿ ಅನಂತ್ ಕುಮಾರ್ ಹೆಗಡೆಯವರು ನೀತಿಸಂಹಿತೆ ಉಲ್ಲಂಘಿಸಿರುವುದು ನಿಜ."

- ವಿದ್ಯಾಶಂಕರ್, ಮುಖ್ಯ ಚುನಾವಣಾಧಿಕಾರಿ



"ಶಿವಮೊಗ್ಗ ಜಿಲ್ಲೆಯಲ್ಲಿ ನಾನೂ ಪ್ರಚಾರ ಮಾಡಲ್ಲ. ನೀವೂ ಮಾಡಬೇಡಿ."

- ಯಡಿಯೂರಪ್ಪ



"ಶೇ.1.5ಕ್ಕಿಂತ ಹೆಚ್ಚಿನ ಬಡ್ಡಿ ವಸೂಲು ಮಾಡಿದರೆ ನಮಗೆ ತಿಳಿಸಿ. ಅವರಿಗೆ ಕಾನೂನು ಪ್ರಕಾರ 3 ವರ್ಷ ಶಿಕ್ಷೆಯಾಗುತ್ತದೆ."

- ಶಂಕರ್ ಬಿದರಿ

"ಕಳೆದ ನಾಲ್ಕು ವರ್ಷಗಳಲ್ಲಿ ಕೂಲಿ ಕೆಲಸಗಾರರಿಗೆ ಊಟ ಮಾರುವ ನಮ್ಮ ಉದ್ಯಮದಲ್ಲಿ ಇಷ್ಟೊಂದು ಕುಸಿತ ಕಂಡಿರಲಿಲ್ಲ. ಬೆಂಗಳೂರಿನ ನಿರ್ಮಾಣ ವಲಯದಲ್ಲೀಗ ಕೆಲಸಗಳಿಲ್ಲ, ದೇಶ ಬಿಟ್ಟು ಹೊಟ್ಟೆ ಹೊರೆದುಕೊಳ್ಳಲು ಬಂದ ಕೂಲಿಗಳಿಗೆ ಈಗ ಬೆಂಗಳೂರು ಅನ್ನ ಹಾಕುತ್ತಿಲ್ಲ."

- ಶ್ರೀರಾಂಪ್ರಸಾದ್, ಸಣ್ಣದಾಬಾ ಮಾಲೀಕ

ನಂಬಿದ್ರೆನಂಬಿ ಬಿಟ್ರೆಬಿಡಿ

"ನಾನಿಲ್ಲದಿದ್ದರೆ ಯಡಿಯೂರಪ್ಪ ಮುಖ್ಯಮಂತ್ರಿಯೇ ಆಗುತ್ತಿರಲಿಲ್ಲ. ಸರ್ಕಾರಕ್ಕೆ ಬೆಂಬಲ ನೀಡಿದ್ದಕ್ಕೆ ಈಗ ಪಶ್ಚಾತ್ತಾಪ ಪಟ್ಟುಕೊಳ್ಳುತ್ತಿರುವೆ."

- ಗೂಳಿಹಟ್ಟಿ ಶೇಖರ್, ಪಕ್ಷೇತರ ಮಂತ್ರಿ

"ನಾನು, ಯಡಿಯೂರಪ್ಪ ಕೋಟಿ-ಚೆನ್ನಯರಂತೆ ಒಟ್ಟಿಗೆ ಚುನಾವಣಾ ಕಣಕ್ಕಿಳಿದಿದ್ದೇವೆ."

- ಅನಂತಕುಮಾರ್

"ದೊಡ್ಡ ಗುಂಪು ಒಂದೆಡೆ ಸೇರಿದಾಕ್ಷಣ ಜನತೆ ಅವರನ್ನು ಬೆಂಬಲಿಸುತ್ತಾರೆ ಎಂದು ಹೇಳಲಾಗದು. ಪಕ್ಷದ ಅಂಗಪಕ್ಷಗಳ ನಡವಳಿಕೆ ಮತ್ತು ಮುಖಂಡರುಗಳ ವರ್ತನೆಯ ಮೇಲೆ ತೃತೀಯ ರಂಗದ ಭವಿಷ್ಯ ನಿಂತಿದೆ."



- ದೇವೇಗೌಡ

"ಸರ್ಕಾರ ದೇಶದಲ್ಲಿ ಇನ್ನೂ 4000 ಕೋರ್ಟುಗಳನ್ನು ಸ್ಥಾಪಿಸಲಿದೆ. ಅದರಲ್ಲಿ 150 ಕೋರ್ಟುಗಳು ಕರ್ನಾಟಕದಲ್ಲೇ ಸ್ಥಾಪಿತಗೊಳ್ಳಲಿದೆ."


- ಮುಖ್ಯ ನ್ಯಾಯಮೂರ್ತಿ ದಿನಕರನ್



"ಡಿಕೆಶಿ ಇನ್ನು ನನ್ನ ಗೆಲುವಿಗೆ ಶ್ರಮಿಸುತ್ತಾರೆ."

- ತೇಜಸ್ವಿನಿ ಗೌಡ

ಯೂ ಸೇಡ್ ಇಟ್!



"ಜೇಡ್‌ಗೂಡಿ ಸಾಯುತ್ತಿರುವುದನ್ನು ಮಾಧ್ಯಮಗಳು ಲೈವ್ ಟೆಲಿಕಾಸ್ಟ್ ಮಾಡಿದ್ದು ಸರ್ವಿಕಲ್ ಕ್ಯಾನ್ಸರ್ ಬಗ್ಗೆ ಜನರಿಗೆ ಅರಿವು ಮೂಡಿಸಲೆಂದೇನೂ ಅಲ್ಲ. ಜೇಡ್ ಗೂಡಿ ಅಣುಅಣುವಾಗಿ ಸಾಯುವುದನ್ನು ನೋಡಲಿಕ್ಕೂ ಜನರು ಇದ್ದರಿಂದ ಅವಳ ಸಾವಿನ ಸಮಯವೂ ಲಾಭದಾಯಕ ಸರಕಾಯಿತು. ನೋಡಬೇಕೋ ಬೇಡವೋ ಎಂಬುದನ್ನು ಜನ ತೀರ್ಮಾನ ಮಾಡಲಿ, ಜನ ನೋಡದಿದ್ದರೆ ಮಾಧ್ಯಮಗಳು ಪ್ರಸಾರ ಮಾಡುವುದಿಲ್ಲ ಎನ್ನುವ ತರ್ಕ ಮಾರುಕಟ್ಟೆಗೆ ನ್ಯಾಯಾಧೀಶನ ಸ್ಥಾನವನ್ನು ಕೊಟ್ಟುಬಿಡುತ್ತದೆ. ಆದರೆ ಮಾರುಕಟ್ಟೆಗೆ ಸಾಮರ್ಥ್ಯ ಇರಬಹುದೇ ವಿನಃ ನ್ಯಾಯಸಮ್ಮತ ವಿವೇಕ ಇರುವುದಿಲ್ಲ."

- ಸಂತೋಷ್ ದೇಸಾಯಿ, ಮಾಧ್ಯಮ ವಿಶ್ಲೇಷಕ

ಅಧರ್ಮದ ಕಡೆ ಪಕ್ಷಾಂತರವೂ ಧರ್ಮ ಭ್ರಷ್ಟತೆಯೇ!

"ನನಗೆ ನನ್ನ ಅಪ್ಪನಿಗಿಂತ ಯಡಿಯೂರಪ್ಪನೇ ಮುಖ್ಯ. ಈಗ ನಾನೇನಾದರೂ ಯಡಿಯೂರಪ್ಪನವರಿಗೆ ಮೋಸ ಮಾಡಿದರೆ ಧರ್ಮ ಭ್ರಷ್ಟನಾಗುತ್ತೇನೆ. ಕರ್ತವ್ಯ ಭ್ರಷ್ಟನಾಗುತ್ತೇನೆ."


- ಜೆ. ನರಸಿಂಹಸ್ವಾಮಿ, ಜಾಲಪ್ಪನ ಪುತ್ರ, ಪಕ್ಷಾಂತರಿ ಶಾಸಕ

ಔರ್ ಬಿಜೆಪಿ ಭೀ ಹೋ!

"ಭಯ್ ಹೋ, ಭೂಕ್ ಹೋ, ಆತಂಕ್ ಹೋ, ಮಹಂಗಾಯಿ ಹೋ, ಫಿರ್ ಭಿ ಜೈ ಹೋ!"

- ಕಾಂಗ್ರೆಸ್‌ನ ಪ್ರಚಾರ ಗೀತೆ 'ಜೈ ಹೋ' ಅಣಕ ಮಾಡುತ್ತಾ ಬಿಜೆಪಿಯ ಗೀತೆ

ಸ್ವಿಸ್ ಬ್ಯಾಂಕಿನಲ್ಲಿರುವ ಬಿಜೆಪಿ ಹವಾಲಾ ಹಣವೂ ಬರುತ್ತಾ?



"ಸ್ವಿಸ್ ಬ್ಯಾಂಕಿನಲ್ಲಿರುವ 25 ಲಕ್ಷ ಕೋಟಿ ರೂ. ವಾಪಸ್ ತಂದರೆ ಎಲ್ಲಾ ಹಳ್ಳಿಗಳಿಗೂ ನೀರು ಮತ್ತು 4 ಕೋಟಿ ರೂ. ಸಹ ನೀಡಬಹುದು."

- ಅದ್ವಾನಿ


ತುಪ್ಪ ತಿಂದವರಿಗೇ ಜೇನುತುಪ್ಪವೂ ಸಿಗುತ್ತದೆ!



"ಜೆಡಿಎಸ್ ಜೇನುತುಪ್ಪ ಇದ್ದಂತೆ. ಆದರೆ ಆಗದ ಕೆಲವರು ಅದಕ್ಕೆ ವಿಷದ ಲೇಬಲ್ ಅಂಟಿಸಿಬಿಟ್ಟಿದ್ದಾರೆ. ಆದ್ದರಿಂದ ನೀವು ಹೆದರುತ್ತೀರಿ ಅಷ್ಟೆ!"

ವೈ.ಎಸ್.ವಿ. ದತ್ತ ಬ್ರಾಹ್ಮಣರ ಸಭೆಯಲ್ಲಿ ಒಂದೇ ಭಾಷಣದಲ್ಲೂ ಎರಡೆರಡು ನಾಲಿಗೆ!

"ವರುಣ್ ಗಾಂಧಿ? ಕ್ರಿಮಿನಲ್ ಅಲ್ಲ, ಭಯೋತ್ಪಾದಕನೂ ಅಲ್ಲ, ಇತರ ರಾಷ್ಟ್ರಗಳ ಏಜೆಂಟೂ ಅಲ್ಲ. ಕೇವಲ ಪ್ರಚೋದನಾಕಾರಿ ಭಾಷಣ ಮಾಡಿದ್ದಕ್ಕೇ ಅವರನ್ನು ಸದೆಬಡಿಯಲು ಹೊರಟಿರುವುದು ಸರಿಯಲ್ಲ."



"ವರುಣ್ ಗಾಂಧಿಯವರ ಭಾಷಣದಲ್ಲಿ ಪ್ರಚೋದನಾಕಾರಿ ಅಂಶಗಳಿರುವುದು ಸಾಬೀತಾಗಿಲ್ಲ."

- ವೆಂಕಯ್ಯ ನಾಯ್ಡು

ಚಿಂತಕರ ಚಾವಡಿ

ಶ್ರೀಲಂಕಾದಲ್ಲಿ ನಡೆಯುತ್ತಿರುವ ತಮಿಳರ ನರಮೇಧದ ಬಗ್ಗೆ ನಮ್ಮ ಮೌನವೂ ರೇಸಿಸ್ಟ್ ಅಲ್ಲವೇ?

"ಶ್ರೀಲಂಕಾದಲ್ಲಿ ನಡೆಯುತ್ತಿರುವ ತಮಿಳರ ನರಮೇಧದ ಬಗ್ಗೆ ಹರಿದುಬರುತ್ತಿರುವ ಅಷ್ಟಿಷ್ಟು ಸುದ್ದಿಗಳನ್ನೇ ಆಧಾರವಾಗಿಟ್ಟುಕೊಂಡು ಹೇಳುವುದಾದರೆ ಶ್ರೀಲಂಕಾ ಸರ್ಕಾರವು 'ಭಯೋತ್ಪಾದನೆಯ ಮೇಲಿನ ಯುದ್ಧ' ಎಂಬ ನೆಪದಲ್ಲಿ ದೇಶದಲ್ಲಿ ಅಳಿದುಳಿದಿರುವ ಪ್ರಜಾತಂತ್ರದ ಸೋಗನ್ನೂ ಕಳಚಿ ಹಾಕಿ ತಮಿಳರ ಮೇಲೆ ಹೇಳಲಾಗದಂಥ ಅಪರಾಧಗಳನ್ನು ಎಸಗುತ್ತಿದೆ. ತಾನು ಭಯೋತ್ಪಾದಕನಲ್ಲವೆಂದು ರುಜುವಾತು ಮಾಡಿಕೊಡದ ತನಕ ಪ್ರತಿಯೊಬ್ಬ ತಮಿಳನೂ ಭಯೋತ್ಪಾದಕನೇ ಎಂಬ ನಿಯಮದ ಮೇಲೆ ಯುದ್ಧ ನಡೆಸುತ್ತಿರುವ ಶ್ರೀಲಂಕಾ ಸರ್ಕಾರ ಅಲ್ಲಿನ ಆಸ್ಪತ್ರೆ, ಶಾಲೆ, ನಾಗರಿಕರ ವಸತಿ ಪ್ರದೇಶ ಎಲ್ಲದರ ಮೇಲೂ ಬಾಂಬ್ ದಾಳಿ ನಡೆಸುತ್ತಿದೆ. ಈಗಾಗಲೇ ವಿಶ್ವ ಸಂಸ್ಥೆಯ ವರದಿಯ ಪ್ರಕಾರ ಸಾವಿರಾರು ತಮಿಳು ನಾಗರಿಕರನ್ನು ಹೀಗೆ ಕೊಂದುಹಾಕಲಾಗಿದೆ. ಮುಕ್ತ ಮಾಧ್ಯಮಕ್ಕೆ ಅವಕಾಶವೇ ಇಲ್ಲದೆ, ವಿಶ್ವದ ಕಣ್ಣು ಮರೆಯಲ್ಲಿ ಶ್ರೀಲಂಕಾದಲ್ಲಿ ನಡೆಯುತ್ತಿರುವುದು ಒಂದು ಸ್ಪಷ್ಟ ಜನಾಂಗೀಯ ನರಮೇಧ. ಕೆಲವು ವರದಿಗಳ ಪ್ರಕಾರ ಭಾರತ ಸರ್ಕಾರ ಈ ನರಮೇಧಕ್ಕೆ ಶಸ್ತ್ರಾಸ್ತ್ರಗಳ ಸಹಾಯ ಮಾಡುತ್ತಿದೆ. ಇದು ನಿಜವೇ ಆಗಿದ್ದರೆ ನಮ್ಮೆಲ್ಲರ ಮೌನ ಒಂದು ದೊಡ್ಡ ಅಪರಾಧವೇ ಸರಿ."

- ಅರುಂಧತಿ ರಾಯ್


ಟಿಬೆಟ್ ಮತ್ತು ಕವಿ ಟೆಂಜಿನ್ ಬಗ್ಗೆ......



ಕಂಡಹಾಗೆ

ಗೌರಿ ಲಂಕೇಶ್

...ೀಗ ಎಲ್ಲಿ ನೋಡಿದರಲ್ಲಿ ಚುನಾವಣೆಗಳ ...ೀ ಚರ್ಚೆ, ಬಾಜಿ, ಲೆಕ್ಕಾಚಾರ ಇತ್ಯಾದಿಗಳು. ...ಚಾನೆಲ್‌ಗಳಲ್ಲಿ, ದಿನಪತ್ರಿಕೆಗಳಲ್ಲಿ, ಅಷ್ಟೇ ಏಕೆ, ...ಮ್ಮ ಪತ್ರಿಕೆಯ ಹಲವಾರು ಪುಟಗಳಲ್ಲೂ ...ವಣೆಗಳ ಬಗೆಗಿನ ವರದಿಗಳೇ ತುಂಬಿವೆ. ...ದ ನನಗೂ, ನಿಮಗೂ ಒಂದು ಪುಟ್ಟ ... ಸಿಗಲೆಂದು ಚುನಾವಣಾ ಹೊರತಾಗಿರುವ ...ದ ಬಗ್ಗೆ ...ಬೇಕೆನಿಸುತ್ತದೆ. ...ಪ್ರೇರಣೆ ... ಟಿಬೆಟ್‌ನ ...ಮತ್ತು ...ಾಟಗಾರ ... ಟ್ಸಂಡು ... ಇತ್ತೀಚೆಗೆ ...ುವ ಲೇಖನ. ...ಜಿನ್ ...ಪದ ...ಾಟಗಾರ. ...ನ್ನಡಿಗರ ...ವನ್ನು ...ದ 2005 ...ವತ್ತು ...ಾರಿನ ...ಯನ್ ...ಟ್ಯೂಟ್ ಆಫ್ ...(ಐಐಎಸ್‌ಸಿ)ಗೆ ... ಪ್ರಧಾನಿ ...ಜಿಯಾಬೋ ...ದ್ದರು. ಅವರ ...ವನ್ನು ...ರೋಧಿಸಿ



...ಕದಲ್ಲಿರುವ ಟಿಬೆಟಿಯನ್ನರು ಹಲವು ...ನೆಗಳನ್ನೂ ನಡೆಸಿದ್ದರು. ಆದರೆ ಈ ... ಅವರೆಲ್ಲರಿಗಿಂತ ಹಲವು ಹೆಜ್ಜೆ ಮುಂದೆ ...ದ್ದರು. ಒಂದೆರಡು ದಿನಗಳ ಹಿಂದೆಯೇ ...ಸಿಯ ಮುಖ್ಯ ಕಟ್ಟಡದಲ್ಲಿ ಅವಿತುಕೊಂಡ ... ಚೀನಾದ ಜಿಯಾಬೋ ತಮ್ಮ ...ವನ್ನು ಪ್ರಾರಂಭಿಸುತ್ತಿದ್ದಂತೆಯೇ ಕಟ್ಟಡದ ...ಗಡೆ ಪ್ರತ್ಯಕ್ಷವಾಗಿ ಜಿಯಾಬೋ ಅವರ ... ಮೇಲೆ ಟಿಬೆಟ್‌ನ ಧ್ವಜವನ್ನು ...ರಲ್ಲದೆ, ಅವರ ವಿರುದ್ಧ ...ೆಗಳನ್ನೂ ಕೂಗಿದರು. ಟೆಂಜಿನ್ ಅವರ ... ಚೀನಾದ ಪ್ರಧಾನಿ ಮೇಲೆ ಭಯೋತ್ಪಾದಕ ... ಎಸಗುವುದಾಗಿರಲಿಲ್ಲ. ಬದಲಾಗಿ ತನ್ನ ... ಸಮಾಜದ ಮೇಲೆ ಚೀನಾ ಎಸಗುತ್ತಿರುವ ...ತ್ಪಾದಕ ಕೃತ್ಯಗಳತ್ತ ಜಗತ್ತಿನ ಗಮನವನ್ನು ...ವುದಾಗಿತ್ತು.

...ಜಿನ್ ಅವರ ಈ ಅಪರೂಪದ ...ನೆಯಿಂದಾಗಿ ಭಾರತದ ಭದ್ರತಾಪಡೆ ... ಮುಜುಗರವಾಗಿತ್ತಲ್ಲದೆ, ಚೀನಾಕ್ಕೆ ...ಂಗವಾಗಿತ್ತು. ಟೆಂಜಿನ್ ಅವರ ವಿರುದ್ಧ ...ಸು ಕಾನೂನು ಕ್ರಮಗಳನ್ನು ಜರುಗಿಸಿದ ... ಸರ್ಕಾರ ಅವಮಾನಗೊಂಡಿದ್ದ ...ನ್ನು ಸಂತೈಸಲು ಆ ದೇಶದ ಸರ್ಕಾರದ ... ದೊಗ್ಗು ಸಲಾಮು ಹೊಡೆದಿತ್ತು.

...06 ರಲ್ಲಿ ಚೀನಾದ ಅಧ್ಯಕ್ಷ ಹು ಜಿಂಟಾವೊ ... ಭೇಟಿ ನೀಡಿದಾಗ ಚೀನಾದ ಸರ್ಕಾರದ ...ಮುಂತೆ ಟೆಂಜಿನ್ ಅವರ ಚಲನವಲನಗಳನ್ನು ...ಗಳ ಕಾಲ ಧರ್ಮಶಾಲಾ ಪ್ರದೇಶಕ್ಕೆ ...ಗೊಳಿಸಿ ಅವರ ಮೇಲೆ ಕಟ್ಟೆಚ್ಚರ ...ತ್ತು.

...ಟ್ ವಿಚಾರ ಕುರಿತಂತೆ ನಮ್ಮ ರಾಷ್ಟ್ರೀಯ ... ಇರುವ ದ್ವಂದ್ವವನ್ನು ನೋಡಿ. 1959 ...ಗೆ ಸರಿಯಾಗಿ 50 ವರ್ಷಗಳ ಹಿಂದೆ) ... ಜನರ ಪರಮಗುರು ದಲೈಲಾಮಾರನ್ನು ... ಅವರಿಗೆ ಮತ್ತು ಅವರ ಜನರಿಗೆ ಈ ... ಆಶ್ರಯ ನೀಡಿದ್ದ ಜವಾಹರಲಾಲ್ ನೆಹರೂರವರ ಕಾಂಗ್ರೆಸ್ ಪಕ್ಷ ಇವತ್ತು ಆ ಸಮುದಾಯದ ಬಗ್ಗೆ ಕಿಂಚಿತ್ತೂ ಕಾಳಜಿ ಹೊಂದಿಲ್ಲ. ಆ ಸಮುದಾಯ ಈ ದೇಶದ ಪ್ರಜೆಗಳಾಗಿಲ್ಲವಾದ್ದರಿಂದ ಬಿಜೆಪಿಗೆ ಅವರು ತೃಣಮಾತ್ರಕ್ಕೆ ಸಮಾನ. ಇನ್ನು ನಮ್ಮಲ್ಲಿನ ಎಡಪಕ್ಷಗಳ ನಿಲುವಂತೂ ಹಾಸ್ಯಾಸ್ಪದವಾಗಿದೆ. ಸದಾಕಾಲ ಮಾರ್ಕ್ಸ್, ಇಲ್ಲವೆಂದರೆ ಮಾವೋ, ಆತನಲ್ಲವೆಂದರೆ ಸ್ಟಾಲಿನ್‌ನಂತಹ ಗತಕಾಲದ ನಾಯಕರ ಬಗ್ಗೆಯೇ ಜಪ ಮಾಡುವ ನಮ್ಮ ಕಮ್ಯೂನಿಸ್ಟರು ಒಂದೆಡೆ ನಮ್ಮ ದೇಶದಲ್ಲಿರುವ ವಿವಿಧ ಸಮುದಾಯಗಳ ರಾಷ್ಟ್ರೀಯತೆ ಪ್ರಜ್ಞೆಯನ್ನು ಹೆಚ್ಚಿಸಬೇಕು ಎನ್ನುತ್ತಿರುತ್ತಾರೆ. ಆದರೆ ಅದೇ ಹೊತ್ತಿಗೆ ಟಿಬೆಟ್ ಜನರ ರಾಷ್ಟ್ರೀಯತಾ ಪ್ರಜ್ಞೆಯನ್ನು ನಿರಾಕರಿಸುತ್ತಾ ಈಗ ಚೀನಾದ ಕಪಿಮುಷ್ಠಿಯಲ್ಲಿರುವ ಟಿಬೆಟ್ ಪ್ರದೇಶಕ್ಕೆ ಸ್ವಾತಂತ್ರ್ಯ ದೊರಕಿದರೆ ದಲೈಲಾಮಾರ ನೇತೃತ್ವದಲ್ಲಿ ಮತ್ತೆ ಅಲ್ಲಿ ಊಳಿಗಮಾನ್ಯ ಮತ್ತು ಜೀತವ್ಯವಸ್ಥೆ ಅಸ್ತಿತ್ವಕ್ಕೆ ಬರುತ್ತೆ ಎಂದು ವಾದಿಸುತ್ತಾರೆ. ಮಾತ್ರವಲ್ಲ, ಟಿಬೆಟ್ ಅನ್ನು ಚೀನಾ ತನ್ನ ವಶಕ್ಕೆ ತೆಗೆದುಕೊಂಡ ನಂತರ ಅಲ್ಲಿ ಅಭಿವೃದ್ಧಿಯಾಗಿದೆ ಎಂದೂ ಹೇಳುತ್ತಾರೆ. ಆ ಮೂಲಕ ಟಿಬೆಟ್ ಜನರ ರಾಷ್ಟ್ರೀಯತಾ ಭಾವನೆಯನ್ನು ಮತ್ತು ಮಾನವ ಹಕ್ಕುಗಳನ್ನು ನಿರಾಕರಿಸುತ್ತಾರೆ.


ಹದಿಮೂರನೆ ಶತಮಾನದಿಂದ ಮಂಗೋಲರ ಹಲವಾರು ದಾಳಿಗಳಿಗೆ ತುತ್ತಾಗುತ್ತಾ ಬಂದ ಟಿಬೆಟ್ 19ನೇ ಶತಮಾನದಲ್ಲಿ ಭಾರತದ ದಿಕ್ಕಿನಿಂದ ಬ್ರಿಟಿಷರ ವಸಾಹುತಶಾಹಿಗಳಿಗೂ, ಮಧ್ಯ ಏಷ್ಯಾ ಕಡೆಯಿಂದ ರಷ್ಯಾದ ತ್ಸಾರ್‌ನ ಸೈನ್ಯದ ಆಕ್ರಮಣಕ್ಕೂ ಗುರಿಯಾಗಲಾರಂಭಿಸಿತು. ಅಷ್ಟೇ ಅಲ್ಲದೆ, 20ನೇ ಶತಮಾನದ 1949 ರಲ್ಲಿ ಆರಂಭವಾದ ಚೀನಾದ ಕ್ರಾಂತಿಯಿಂದಲೂ ಟಿಬೆಟ್ ತತ್ತರಿಸಿತ್ತು. ಅಂದು ಚೀನಾದ ಸೈನಿಕರು ಟಿಬೆಟ್ ಮೇಲೆ ದಾಳಿ ಇಟ್ಟಾಗ ಅಲ್ಲಿನ ಧರ್ಮ ಗುರುಗಳು, ರೈತರು ಮತ್ತು ಅಲೆಮಾರಿ ಸಮುದಾಯದವರು ಶಸ್ತ್ರಾಸ್ತ್ರಗಳನ್ನು ಕೈಗೆತ್ತಿಕೊಂಡು ಹೋರಾಡಿದ್ದರು.

ಚೀನಾದ ಸಾಂಸ್ಕೃತಿಕ ಕ್ರಾಂತಿ ಅಂತ್ಯಗೊಂಡು ಆ ದೇಶ ಮಾವೋನ ಹಿಡಿತಕ್ಕೆ ಸಿಕ್ಕ ನಂತರ ಆತ ಟಿಬೆಟ್ ಅನ್ನು ಚೀನಾದ ವಶಕ್ಕೆ ತೆಗೆದುಕೊಳ್ಳಲು ಯತ್ನಿಸಲಾರಂಭಿಸಿದ. ಆಗ ಟಿಬೆಟ್ ಜನರ ನೆರವಿಗೆ ಮುಂದಾಗಿದ್ದು ಅಮೆರಿಕದ ಸಿಐಎ ಮತ್ತು ಭಾರತದ ಸರ್ಕಾರ. ಇದರಿಂದಾಗಿ ಟಿಬೆಟ್ ಸೈನ್ಯ ರೂಪಗೊಂಡಿತಾದರೂ ಚೀನಾದ ದಬ್ಬಾಳಿಕೆ ನಿಲ್ಲಲಿಲ್ಲ. ಆಗ ಟಿಬೆಟ್ ಜನ ದಂಗೆ ಎದ್ದರು. ಇದಕ್ಕೆ ಪ್ರತಿಯಾಗಿ ಟಿಬೆಟಿಯನ್ನರ ಪರಮಗುರು ದಲೈ ಲಾಮಾರನ್ನೇ ಮುಗಿಸಲು ಚೀನಾ ಸಂಚು ರೂಪಿಸಿತು. ಆಗ ಅನಿವಾರ್ಯವಾಗಿ ದಲೈಲಾಮಾ ಅವರು ಭಾರತಕ್ಕೆ ಓಡಿಬಂದು ಇಲ್ಲಿ ರಕ್ಷಣೆ ಪಡೆಯಬೇಕಾಯಿತು. ಹೀಗೆ ದಲೈಲಾಮಾ ತಪ್ಪಿಸಿಕೊಂಡ ನಂತರ ಟಿಬೆಟ್ ಮೇಲೆ ಚೀನಾ ತನ್ನ ಕ್ರೌರ್ಯವನ್ನು ಹೆಚ್ಚಿಸಿ ಲಕ್ಷಾಂತರ ಜನರನ್ನು ಕೊಂದು ಹಾಕಿತು.

ದಲೈಲಾಮಾರೊಂದಿಗೆ ಸಾವಿರಾರು ಟಿಬೆಟಿಯನ್ನರು ಭಾರತದಲ್ಲಿ ವಾಸಿಸಲಾರಂಭಿಸಿದರು. ಮಾತ್ರವಲ್ಲ, ಅವರಲ್ಲಿ ನೂರಾರು ಜನ ಬೆಟ್ಟಗುಡ್ಡಗಳ ಪ್ರದೇಶಗಳಲ್ಲಿ ರಸ್ತೆ ನಿರ್ಮಾಣ ಕಾರ್ಯದಲ್ಲಿ ಕೂಲಿಗಳಾಗಿ ದುಡಿಯಲಾರಂಭಿಸಿದರು. ಹಾಗೆ ದುಡಿಯುತ್ತಾ ಟೆಂಟ್‌ನಲ್ಲಿ ವಾಸಿಸುತ್ತಿದ್ದ ದಂಪತಿಗಳಿಗೆ ಒಂದು ದಿನ ರಸ್ತೆಬದಿಯಲ್ಲಿ ಜನಿಸಿದ ಕವಿಯೇ ಈ ಟೆಂಜಿನ್ ಟ್ಸಂಡು.

ಚೆನ್ನೈನಲ್ಲಿರುವ ಲಯೋಲಾ ಕಾಲೇಜಿನಿಂದ ಪದವಿ, ಮುಂಬೈನಲ್ಲಿ ಸ್ನಾತಕೋತ್ತರ ಪದವಿ ಪಡೆದ ಟೆಂಜಿನ್ ಶೇಕ್ಸ್‌ಪಿಯರ್‌ನೊಂದಿಗೆ ಕನ್ನಡದ ಎ.ಕೆ. ರಾಮಾನುಜನ್ ಅವರನ್ನು ಅನುಸರಿಸುತ್ತ ಕವಿಯಾಗಿ ರೂಪಗೊಂಡರು. ಜೊತೆಗೆ ಟಿಬೆಟ್‌ನ ಸ್ವಾತಂತ್ರ್ಯದ ಕಿಚ್ಚನ್ನೂ ತಮ್ಮ ಎದೆಯಲ್ಲಿ ಹೊತ್ತಿಸಿಕೊಂಡರು. ಆತನೇ ಹೇಳುವಂತೆ "ಟಿಬೆಟ್‌ನಲ್ಲಿ ಕ್ರಾಂತಿಯನ್ನು ಪ್ರಾರಂಭಿಸಲು ಅಲ್ಲಿಗೆ ಹೋದೆ. ಆದರೆ ಕೆಲದಿನಗಳಲ್ಲೇ ಈ ರೋಮಾಂಚಕ ಬಂಡಾಯಗಾರನನ್ನು ಬಂಧಿಸಿ, ಹೊಡೆದು, ಲಾಸಾದಲ್ಲಿನ ಜೈಲಿಗೆ ದೂಡಿದರು. ಜೈಲಿನಲ್ಲಿ ಜೊತೆಗಿದ್ದ ಬಂಧಿಯೊಬ್ಬ 'ಸ್ವತಂತ್ರ ಟಿಬೆಟ್‌ಗಾಗಿ ನಿನ್ನ ಎದೆ ಬೆಂಕಿ ಹತ್ತಿ ಉರಿದರೂ ಅದರ ಹೊಗೆ ಕಾಣಿಸಿಕೊಳ್ಳದಂತೆ ಎಚ್ಚರ ವಹಿಸು' ಎಂದು ಉಪದೇಶ ನೀಡಿದ. ಆದರೆ ಭಗತ್ ಸಿಂಗ್‌ನ ಅಭಿಮಾನಿಯಾದ ಈ ಅನನುಭವಿ ಕ್ರಾಂತಿಕಾರಿ ಅಷ್ಟೊತ್ತಿಗಾಗಲೇ ತಾನು ಟಿಬೆಟ್ ಅನ್ನು ಬಿಡುಗಡೆಗೊಳಿಸಲು ಬಂದಿರುವುದಾಗಿ ಕೊಚ್ಚಿಕೊಂಡಿದ್ದ."

ಟಿಬೆಟ್‌ಗೆ ಬೇಕಿರುವ ಸ್ವಾತಂತ್ರ್ಯದ ಬಗ್ಗೆ ದಲೈಲಾಮಾರವರು ಕಳೆದ ಐದು ದಶಕಗಳಿಂದ ಜಗತ್ತಿನಾದ್ಯಂತ ಅರಿವು ಮೂಡಿಸುತ್ತ ಚೀನಾದೊಂದಿಗೆ ಮಾತುಕತೆ ನಡೆಸುತ್ತಾ ಬಂದಿದ್ದಾರೆ. ಆದರೆ ಚೀನಾ ಮಾತ್ರ ತನ್ನ ಮೊಂಡುತನವನ್ನು ಬಿಡುತ್ತಿಲ್ಲ. ಇಂತಹ ಮಾತುಕತೆಗಳು 2002ರಲ್ಲಿ ಮತ್ತೆ ಪ್ರಾರಂಭವಾದಾಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಚೀನಾ ವಿರುದ್ಧದ ಪ್ರತಿಭಟನೆಗಳಿಗೆ ಮತ್ತು ಟಿಬೆಟ್ ಯುವ ಕಾಂಗ್ರೆಸ್ ಎಂಬ ಸಂಘಟನೆಯ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕೆಂದು ಚೀನಾದ ಸರ್ಕಾರ ದಲೈಲಾಮಾರ ಪ್ರತಿನಿಧಿಗಳಿಗೆ ದೂರಿತ್ತು. ಆದರೆ ಟಿಬೆಟಿಯನ್ನರು ಗಡಿಪಾರಾಗಿದ್ದರೂ ತಮ್ಮ ಸಮುದಾಯದ ಪ್ರಜಾತಾಂತ್ರಿಕ ಸರ್ಕಾರವನ್ನು ನಿರ್ಮಿಸಿಕೊಂಡಿರುವಾಗ, ಬೀಜಿಂಗ್ ತನ್ನ ದೇಶಕ್ಕೆ ಆದೇಶಿಸುವಂತೆ ದಲೈ ಲಾಮಾರು ಟಿಬೆಟ್ಟಿಯನ್ನರಿಗೆ ಆದೇಶಿಸಲಾಗುವುದಿಲ್ಲ ಎಂದು ದೂತರು ಉತ್ತರಿಸುವ ಮೂಲಕ ಚೀನಾದ ಸರ್ವಾಧಿಕಾರ ವ್ಯವಸ್ಥೆಗೆ ಮುಖಭಂಗ ಮಾಡಿದ್ದರು.



ಆಗ ಚೀನಾ ಒಂದು ಪರತ್ತನ್ನು ಹಾಕಿತು. ದಲೈಲಾಮಾರೊಂದಿಗೆ ಮಾತುಕತೆಗಳು ಮುಂದುವರೆಯಬೇಕಿದ್ದರೆ ಚೀನಾದ ರಾಜಕಾರಣಿಗಳು ವಿದೇಶಗಳಿಗೆ ಭೇಟಿ ನೀಡಿದಾಗ ಅವರ ವಿರುದ್ಧ ಪ್ರತಿಭಟಿಸಬಾರದು ಅದರಂತೆ. ದಲೈಲಾಮಾರು ಟಿಬೆಟ್ ಸಮುದಾಯದವರಿಗೆ ಹಾಗೆಯೇ ಮನವಿ ಮಾಡಿಕೊಂಡಿದ್ದರು.

ಆದರೆ ಟೆಂಜಿನ್ ತರಹದ ಜನರಿಗೆ ಭ್ರಷ್ಟಗೊಂಡಿರುವ ಚೀನಾದ ಕಮ್ಯುನಿಸ್ಟ್ ಸರ್ಕಾರದ ಬಗ್ಗೆ ಈಗ ಯಾವ ವಿಶ್ವಾಸವೂ ಉಳಿದಿರಲಿಲ್ಲ. ಆದ್ದರಿಂದ ಅವರು ತಮ್ಮ ಪ್ರತಿಭಟನೆಗಳನ್ನೂ ಮುಂದುವರೆಸುತ್ತಲೇ ಇದ್ದಾರೆ. ಹಾಗೆ ಮಾಡುತ್ತಿರುವುದರಿಂದ ಕೆಲ ಟಿಬೆಟಿಯನ್ನರು ಟೆಂಜಿನ್ ತರಹದ ಜನರಿಗೆ "ದಲೈಲಾಮಾರ ವಿರೋಧಿಗಳು" ಎಂಬ ಹಣೆಪಟ್ಟಿಯನ್ನು ಕಟ್ಟಿದ್ದಾರೆ.

"ಹೆಚ್ಚಿನ ಟಿಬೆಟಿಯನ್ ಯುವಕರು ಸ್ವಾತಂತ್ರ್ಯ ಪಡೆಯುವ ಮೂಲಕ ಮಾತ್ರ ತಾವು ತಮ್ಮ ಅಸ್ತಿತ್ವ ಮತ್ತು ಘನತೆಯನ್ನು ಪಡೆಯಬಹುದು ಎಂದೇ ನಂಬಿದ್ದಾರೆ. ನಾಳೆ ಟಿಬೆಟಿಗೆ ಸ್ವಾಯತ್ತತೆ ದೊರಕಿದರೂ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ನಾವು ನಮ್ಮ ಹೋರಾಟವನ್ನು ಮುಂದುವರೆಸುತ್ತೇವೆ. ಕಳೆದುಕೊಂಡಿರುವ ನಮ್ಮ ಸ್ವಾತಂತ್ರ್ಯವನ್ನು ಮರು ಸ್ಥಾಪಿಸುವ ಟಿಬೆಟಿಯನ್ನರ ಹೋರಾಟ ಖಂಡಿತವಾಗಿಯೂ ಪ್ರತ್ಯೇಕವಾದಿ ಹೋರಾಟವಲ್ಲ.

ಟಿಬೆಟ್ ಜನರು ಗಡಿಪಾರಾಗಿದ್ದರೂ ದಲೈಲಾಮಾರವರು ಒಂದು ಸಮರ್ಥ ಪ್ರಜಾತಾಂತ್ರಿಕ ಸರ್ಕಾರವನ್ನು ನಿರ್ಮಿಸುವಲ್ಲಿ ಯಶಸ್ವಿಯಾಗಿದ್ದಾರೆ. ಟಿಬೆಟ್‌ಗೆ ಸ್ವಾತಂತ್ರ್ಯ ದೊರಕಿದಾಗ ಈ ವ್ಯವಸ್ಥೆಯೇ ನಮ್ಮ ಕೊಡುಗೆಯಾಗಲಿದೆ. ಹೀಗಿದ್ದಾಗಲೂ ಟಿಬೆಟಿಗೆ ದಲೈಲಾಮಾರು ಹಿಂದಿರುಗುವುದರೊಂದಿಗೆ ಅಲ್ಲಿ ಊಳಿಗಮಾನ್ಯ ವ್ಯವಸ್ಥೆ ಮತ್ತು ಜೀತ ಪದ್ಧತಿ ಹಿಂದಿರುಗುತ್ತದೆಂದು ಚೀನಾ ವಾದಿಸುತ್ತಿರುವುದು ಬಾಲಿಶತನ" ಎನ್ನುತ್ತಾರೆ ಟೆಂಜಿನ್.


ಟಿಬೆಟ್ ಮೇಲೆ ಚೀನಾ ದಾಳಿ ಮಾಡಿ ಅಲ್ಲಿನ ಜನರನ್ನು ತನ್ನ ಸರ್ವಾಧಿಕಾರಿ ಧೋರಣೆಗೆ ಗುರಿ ಮಾಡಿ ಈಗ್ಗೆ ಐವತ್ತು ವರ್ಷಗಳಾಗಿವೆ. ಈ ಐದು ದಶಕಗಳಲ್ಲಿ ಟಿಬೆಟ್‌ನಲ್ಲಿರುವ ಆರು ಮಿಲಿಯನ್ ಜನರು ಮತ್ತು ಗಡಿಪಾರಾಗಿ ಭಾರತ ಸೇರಿದಂತೆ ವಿವಿಧ ದೇಶಗಳಲ್ಲಿ ಇಂದು ಬದುಕುತ್ತಿರುವ ಲಕ್ಷಾಂತರ ಟಿಬೆಟಿಯನ್ನರು ಹಂಬಲಿಸುತ್ತಿರುವುದು ತಮ್ಮ ದೇಶದ ಸ್ವಾತಂತ್ರಕ್ಕಾಗಿ, ಸ್ವಾಭಿಮಾನದ ಬದುಕಿಗಾಗಿ. ಬೌದ್ಧ ಧರ್ಮೀಯರಾದ ಟಿಬೆಟಿಯನ್ನರು ತಮ್ಮ ಕನಸನ್ನು ನನಸಾಗಿಸಲು ಅನುಸರಿಸುತ್ತಿರುವುದು ಅಹಿಂಸಾತ್ಮಕ ಹಾದಿಯನ್ನು. ಆದರೆ ಆ ಹಾದಿ ಎಷ್ಟು ಕಷ್ಟಕರವಾಗಿದೆ ಎಂಬುದನ್ನು ಟೆಂಜಿನ್ ಅವರ ಈ ಪದ್ಯ ಬಿಂಬಿಸುತ್ತದೆ.

ನನ್ನ ಅಪ್ಪ ಸತ್ತ
ತನ್ನ ಮನೆ, ತನ್ನ ಹಳ್ಳಿ
ತನ್ನ ದೇಶಕ್ಕಾಗಿ ಹೋರಾಡುತ್ತಾ.
ನನಗೂ ಹೋರಾಡಬೇಕೆನಿಸಿತು.
ಆದರೆ ನಾವು ಬೌದ್ಧರು.
ಜನ ಹೇಳುತ್ತಾರೆ ನಾವು
ಶಾಂತರಾಗಿರಬೇಕೆಂದು,
ಅಹಿಂಸಾವಾದಿಗಳಾಗಿರಬೇಕೆಂದು.
ಆದ್ದರಿಂದ ನಾನು ನನ್ನ ವೈರಿಗಳನ್ನು
ಕ್ಷಮಿಸಿದೆ.
ಹಲವೊಮ್ಮೆ ಅನ್ನಿಸುತ್ತೆ
ಹಾಗೆ ಕ್ಷಮಿಸುವ ಮೂಲಕ
ನಾನು ನನ್ನ ತಂದೆಗೆ
ದ್ರೋಹ ಬಗೆದೆನೆಂದು.



ಸುತ್ತ ಮುತ್ತ


▶ಕುಮಾರ್ ಬುರಡಿಕಟ್ಟಿ



ಕುಮಾರಸ್ವಾಮಿ ಕೇಂದ್ರದಲ್ಲಿ ಮಂತ್ರಿ ಏಕಾಗಬಾರದು?

ಇದು ದೇವೇಗೌಡರ ಪ್ರಶ್ನೆ. ಹೇಗೂ ರಾಜ್ಯದಲ್ಲಿ ಬಿಜೆಪಿ ಬಹುಮತ ಪಡೆದುಕೊಂಡು ಭದ್ರವಾಗಿದೆ. ಈ ಹಿಂದೆ ಕಾಂಗ್ರೆಸ್ ಮತ್ತು ಬಿಜೆಪಿಗಳೊಂದಿಗೆ ಮೈತ್ರಿಕೂಟ ಸರ್ಕಾರದಲ್ಲಿ ಆಡಿದಂತೆ ಆಟವಾಡುವುದಕ್ಕೆ ಗೌಡರಿಗೆ ಇನ್ನೂ ಐದು ವರ್ಷ ಸಾಧ್ಯವಿಲ್ಲ. ಆದರೆ, ರಾಜಕೀಯದ ಆಟ ಇಲ್ಲದಿದ್ದರೆ, ಅಧಿಕಾರವಿಲ್ಲದಿದ್ದರೆ, ಚುನಾವಣೆಗಳು ಇಲ್ಲದಿದ್ದರೆ ಗೌಡರಿಗೆ ನಿದ್ದೆ ಬರುವುದಿಲ್ಲವಲ್ಲ? ಐದು ವರ್ಷಗಳ ಕಾಲ ಸುಖಾಸುಮ್ಮನೆ ಮನೆಯಲ್ಲಿ ಮುದ್ದೆ ತಿಂದು ನಿದ್ದೆ ಮಾಡುವ ಜಾಯಮಾನ ಅವರದ್ದಲ್ಲವಲ್ಲ? ಹಾಗಾಗಿಯೇ ಅವರು ಈಗ ಕೇಂದ್ರದಲ್ಲಿ ಆಟವಾಡುವುದಕ್ಕೆ ಪ್ರಯತ್ನ ಶುರುವಿಟ್ಟುಕೊಂಡಿದ್ದಾರೆ.

ಇದರ ಭಾಗವಾಗಿಯೇ ತಾವೇ ಮುತುವರ್ಜಿ ವಹಿಸಿ ಕರ್ನಾಟಕದಲ್ಲೇ ಸ್ಥಳೀಯ ಪಕ್ಷಗಳ ತೃತೀಯ ರಂಗವನ್ನು ಲಾಂಚ್ ಮಾಡಿದ್ದಾರೆ. ಗೌಡರ ಪಕ್ಷಕ್ಕೆ ಬೇರೆ ರಾಜ್ಯಗಳಲ್ಲಿ ನೆಲೆಯೂ ಇಲ್ಲ, ಒಂದು ಸೀಟೂ ಬರುವುದಿಲ್ಲ. ಏನಿದ್ದರೂ ಇಲ್ಲಿ ಎಷ್ಟು ಗೆಲ್ಲುತ್ತಾರೋ ಅಷ್ಟೇ ಕಾಯಂ. ಹಾಗಾಗಿ ಈ ಇಳಿವಯಸ್ಸಿನಲ್ಲಿ ತಾವೂ ಕಣಕ್ಕಿಳಿಯುತ್ತಿದ್ದಾರೆ, ಮಗ ಕುಮಾರಸ್ವಾಮಿಯನ್ನೂ ಕಣಕ್ಕಿಳಿಸುತ್ತಿದ್ದಾರೆ. ಗೆಲ್ಲುವ ಅಭ್ಯರ್ಥಿಗಳನ್ನು ಹುಡುಕಿ, ಗೆಲ್ಲಬಲ್ಲ ಕ್ಷೇತ್ರಗಳಲ್ಲಿ ಇಳಿಸಿ ಅಲ್ಲಿ ಮಾತ್ರವೇ ಸೆಣಸಾಡುತ್ತಿದ್ದಾರೆ.



ಜೆಡಿಎಸ್‌ನ ಇಂದಿನ ಪರಿಸ್ಥಿತಿಯನ್ನು ನೋಡಿದರೆ ಕನಿಷ್ಠ ಐದು ಕಡೆಯಾದರೂ ಗೆಲ್ಲುವ ಪರಿಸ್ಥಿತಿಯಿದೆ. ಹಾಗೇನಾದರೂ ಆದರೆ ಗೌಡರು ಕೇಂದ್ರದಲ್ಲಿ ಆಟವಾಡುವುದಕ್ಕೆ ಬೇಕಿರುವ ಸರಳ ಸಂಖ್ಯೆ ಸಿಕ್ಕಂತಾಗುತ್ತದೆ. ತೃತೀಯ ರಂಗವಂತೂ ಅಧಿಕಾರಕ್ಕೇರುವುದಿಲ್ಲವೆಂಬುದು ಅವರಿಗೂ ಗೊತ್ತು, ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ರಚಿಸಲು ಮುಂದಾದರೆ ಅವರ ಐದು ಸೀಟುಗಳನ್ನಿಟ್ಟುಕೊಂಡು ಕುಮಾರಸ್ವಾಮಿಗೆ ಬಹುಮುಖ್ಯ ಸಚಿವಾಲಯವನ್ನು ಬಿಟ್ಟುಕೊಡುವಂತೆ ಬಾರ್ಗೇನ್ ಶುರು ಮಾಡುತ್ತಾರೆ.

ಎಲ್ಲರಿಗೂ ಆನೆ ಭಯ!

ಆನೆ ಭಯ ಎಂದರೆ ಜಯಲಲಿತಾ ಭಯ ಅಂತ ಅರ್ಥವಲ್ಲ, ಮಾಯಾವತಿ ಭಯ ಅಂತ ಅರ್ಥ. ವಾಸ್ತವದಲ್ಲಿ ಜಯಲಲಿತಾರ ಎಐಎಡಿಎಂಕೆ 39 ಸ್ಥಾನಗಳನ್ನು ಹೊಂದಿರುವ ತಮಿಳುನಾಡು ಎಂಬ ದೊಡ್ಡ ರಾಜ್ಯದ ದೊಡ್ಡ ಪಕ್ಷ ಎಂಬುದು ನಿಜವೆ. ಹಲವಾರು ಬಾರಿ ತಮಿಳುನಾಡಿನಲ್ಲಿ ಅಧಿಕಾರಕ್ಕೇರಿದ ಪಕ್ಷ ಅದು. ಕೇಂದ್ರದಲ್ಲಿ ಎನ್‌ಡಿಎಗೆ ಬೆನ್ನೆಲುಬಾಗಿ ನಿಂತ ಪಕ್ಷ ಅದು. ಆದರೆ, ಕಳೆದ ಲೋಕಸಭಾ ಚುನಾವಣೆಯಲ್ಲಿ ಜಯಲಲಿತಾ ಶೂನ್ಯ ಸಂಪಾದನೆ ಮಾಡಿದ್ದನ್ನು ನೋಡಿ ಇದ್ದಬದ್ದ ಭಯವೂ ಹೊರಟುಹೋಗಿದೆ. ಹಾಗಾಗಿ ಈಗ ಏನಿದ್ದರೂ 'ಆನೆ ಭಯ' ಎಂದರೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಬಿಎಸ್‌ಪಿಯ ಮಾಯಾವತಿ ಭಯ ಮಾತ್ರ.

ಕಳೆದ ಲೋಕಸಭಾ ಚುನಾವಣೆಯಲ್ಲಿ 19 ಸ್ಥಾನಗಳನ್ನು ಗೆದ್ದಿದ್ದ ಮಾಯಾವತಿಗೂ ಭಯಪಡುವ ಅವಶ್ಯಕತೆಯಿರಲಿಲ್ಲವೇನೋ? ಆದರೆ ಇತ್ತೀಚಿಗೆ ಉತ್ತರ ಪ್ರದೇಶದ ವಿಧಾನಸಭಾ ಚುನಾವಣೆಯಲ್ಲಿ ಅವರ ಪಕ್ಷ ಭಾರೀ ಬಹುಮತದೊಂದಿಗೆ ಗೆದ್ದು ಅಧಿಕಾರಕ್ಕೇರಿರುವುದರಿಂದ ಕಾಂಗ್ರೆಸ್ ಮತ್ತು ಬಿಜೆಪಿಗಳು ಬಿಎಸ್ಪಿಗೆ ಹೆದರುವ ಪರಿಸ್ಥಿತಿ ನಿರ್ಮಾಣವಾಗಿದೆ.



ವಾಸ್ತವದಲ್ಲಿ ಮಾಯಾವತಿಯ ಸಾಧನೆ ಮೆಚ್ಚತಕ್ಕದ್ದೆ. 1991ರ ನಂತರದಲ್ಲಿ 2007 ವಿಧಾನಸಭಾ ಚುನಾವಣೆಗಳತನಕ ಉತ್ತರ ಪ್ರದೇಶ ಎಂಬ ಆನೆ ಗಾತ್ರದ ರಾಜ್ಯದಲ್ಲಿ ಯಾವೊಂದೂ ಪಕ್ಷವೂ ನಿಚ್ಚಳ ಬಹುಮತ ಪಡೆದದ್ದಿಲ್ಲ. ಅಂಥಾದ್ದರಲ್ಲಿ ಮಾಯಾವತಿ ದಲಿತ-ಹಿಂದುಳಿದವರನ್ನೊಳಗೊಂಡ 'ಬಹುಜನೋದ್ಧಾರ' ಎಂಬ ಬಿಎಸ್‌ಪಿಯ ಸೈದ್ಧಾಂತಿಕ ನೆಲೆಗಟ್ಟನ್ನೇ ಬದಲಿಸಿ ಬ್ರಾಹ್ಮಣರು, ಮುಂದುವರಿದ ಜಾತಿಗಳವರನ್ನೂ ಒಳಗೊಂಡಂತೆ 'ಸರ್ವಜನೋದ್ಧಾರ'ದ ಸಿದ್ಧಾಂತವನ್ನು ಅಳವಡಿಸಿಕೊಂಡು, 'ಹಾತಿ ನಹಿ, ಬ್ರಹ್ಮ, ವಿಷ್ಣು ಮಹೇಶ್ ಹೈ' ಎನ್ನುತ್ತಾ 2007ರ ವಿಧಾನಸಭಾ ಚುನಾವಣೆಗಳನ್ನೆದುರಿಸಿದರು. ಸತೀಶ್ಚಂದ್ರ ಮಿಶ್ರ ಎಂಬ ಬ್ರಾಹ್ಮಣ ಮಿದುಳು ಮಾಯಾವತಿಯ ಬೆನ್ನಿಗಿತ್ತು. ಈ ಜೋಡಿಯ ಈ ಸೋಷಿಯಲ್ ಎಂಜಿನಿಯರಿಂಗ್ ಚೆನ್ನಾಗಿಯೇ ಕೆಲಸ ಮಾಡಿತು. ಪರಿಣಾಮವಾಗಿ 402 ಸ್ಥಾನಗಳಲ್ಲಿ 206 ಸ್ಥಾನಗಳನ್ನು ಗೆಲ್ಲುವ ಮೂಲಕ ಮಾಯಾವತಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಗಾದಿಗೇರಿದರು; ಹದಿನಾರು ವರ್ಷಗಳ ನಂತರ ಏಕೈಕ ಪಕ್ಷವೊಂದು ಅಧಿಕಾರಕ್ಕೆ ಬರುವಂತಾಯಿತು.



ಉತ್ತರ ಪ್ರದೇಶದಾದ್ಯಂತ ಈಗಲೂ ಮಾಯಾವತಿಯ ಅಲೆ ಬೀಸುತ್ತಿದೆ. ತನಗಿರುವ ಶಕ್ತಿಯ ಅರಿವೂ ಅವರಿಗಿದೆ. ಆದ್ದರಿಂದಲೇ ಆರಂಭದಲ್ಲಿ ಅಧಿಕೃತವಾಗಿ ತೃತೀಯ ರಂಗವನ್ನು ಸೇರಿದರೂ ತನ್ನನ್ನು ಪ್ರಧಾನಿ ಅಭ್ಯರ್ಥಿ ಎಂದು ಘೋಷಿಸಿ ಎಂದು ಪಟ್ಟು ಹಿಡಿದರು. ಅದು ಸಾಧ್ಯವಾಗದಿದ್ದಾಗ ಈಗ ಸ್ವತಂತ್ರವಾಗಿ ಕಣಕ್ಕಿಳಿದಿದ್ದಾರೆ. ಅವರ ಹಠಮಾರಿತನವನ್ನು ಚೆನ್ನಾಗಿ ಬಲ್ಲ ಕಾಂಗ್ರೆಸ್-ಬಿಜೆಪಿಗಳೆರಡೂ ಅವರನ್ನು ಸಾಕಷ್ಟು ದೂರವಿಡುವುದಕ್ಕೆ ಪ್ರಯತ್ನಿಸುತ್ತಿವೆ. ಆದರೆ ಮಾಯಾವತಿಯೇನಾದರೂ 80 ಸೀಟುಗಳಲ್ಲಿ 40 ಅಥವಾ 50 ಸೀಟುಗಳನ್ನು ಗೆದ್ದರೆ ಯಾರೂ ಅವರನ್ನು ಕಡೆಗಣಿಸಲು ಸಾಧ್ಯವಾಗುವುದಿಲ್ಲ.

ಜಯಲಲಿತಾಗಾಗಲೀ, ಮಾಯಾವತಿಗಾಗಲೀ ತತ್ವ-ಸಿದ್ಧಾಂತಗಳ ಬೇಲಿಯಿಲ್ಲ. ಅರ್ಹತೆಗಿಂತಲೂ ಜಾಸ್ತಿ ಲಾಭವನ್ನು ಯಾರು ಕೊಡುತ್ತಾರೋ - ಮಾಯಾವತಿಯ ವಿಚಾರದಲ್ಲಾದರೆ ತನ್ನನ್ನು ಯಾರು ಪ್ರಧಾನಿ ಮಾಡುತ್ತಾರೋ - ಅವರೊಂದಿಗೆ ಹೋಗಲು ಸಿದ್ಧರಾಗಿರುತ್ತಾರೆ. ಇದಕ್ಕೆ ಈ ಹಿಂದಿನ ಅನೇಕ ಉದಾಹರಣೆಗಳು ಸಾಕ್ಷಿಯಾಗಿ ನಿಂತಿವೆ. ಎನ್‌ಡಿಎ ಮತ್ತು ಯುಪಿಎಗಳು ವಿಶ್ವಾಸಾರ್ಹ ಮಿತ್ರಪಕ್ಷಗಳೆಂದು ಇಬ್ಬರನ್ನೂ ಪರಿಗಣಿಸುವುದಿಲ್ಲ.


ಒಟ್ಟಿನಲ್ಲಿ ಕಾಂಗ್ರೆಸ್-ಬಿಜೆಪಿಗಳೆರಡಕ್ಕೂ ಈಗ ಆನೆ ಭಯವಿರುವುದು ಮಾತ್ರ ಸತ್ಯ.

'ಬಂದರೆ ಗುಡ್ಡ, ಹೋದರೆ....'

'ಗುಡ್ಡಕ್ಕೆ ಕೂದಲು ಕಟ್ಟಿ ಎಳೆಯೋದು. ಬಂದರೆ ಬೃಹತ್ ಗುಡ್ಡ ಹೋದರೆ ತೃಣ ಸಮಾನವಾದ ಒಂದು ಕೂದಲು ಮಾತ್ರ' ಎಂಬುದೊಂದು ಮಾತಿದೆ. ವಾಸ್ತವದಲ್ಲಿ ಬಿಹಾರ ಮತ್ತು ಉತ್ತರ ಪ್ರದೇಶಗಳ ಸ್ಥಾನ ಹೊಂದಾಣಿಕೆಯ ವಿಚಾರದಲ್ಲಿ ಕಾಂಗ್ರೆಸ್ ಇದೇ ತಂತ್ರವನ್ನು ಅನುಸರಿಸುತ್ತಿದೆ.




80 ಸ್ಥಾನಗಳನ್ನು ಹೊಂದಿರುವ ಉತ್ತರ ಪ್ರದೇಶ ಮತ್ತು 40 ಸ್ಥಾನಗಳನ್ನು ಹೊಂದಿರುವ ಬಿಹಾರ್ ಮೈತ್ರಿಕೂಟ ರಾಜಕೀಯದಲ್ಲಿ ಬಹುಮುಖ್ಯ ಪಾತ್ರವನ್ನು ನಿರ್ವಹಿಸುವ ಎರಡು ಪ್ರಮುಖ ರಾಜ್ಯಗಳು. ಆದರೆ, ದುರಂತ ಎಂದರೆ ಈ ಎರಡೂ ರಾಜ್ಯಗಳಲ್ಲಿ ಕಾಂಗ್ರೆಸ್‌ಗಾಗಲೀ, ಬಿಜೆಪಿಗಾಗಲೀ ನಿಂತುಕೊಳ್ಳುವುದಕ್ಕೆ ನೆಲೆಯಿಲ್ಲ, ಕಳೆದ ಚುನಾವಣೆಯಲ್ಲಿ ಬಿಹಾರದಲ್ಲಿ ಬಿಜೆಪಿ 5 ಸೀಟುಗಳನ್ನು ಗೆದ್ದಿದ್ದರೆ ಕಾಂಗ್ರೆಸ್ಸಿಗೆ ದಕ್ಕಿದ್ದು ಕೇವಲ 3 ಸೀಟುಗಳು ಮಾತ್ರ. ಅಂತೆಯೇ ಉತ್ತರ ಪ್ರದೇಶದಲ್ಲಿ ಬಿಜೆಪಿಗೆ 10 ಸೀಟುಗಳು ಸಿಕ್ಕಿದ್ದರೆ ಕಾಂಗ್ರೆಸ್ ಕೇವಲ 9 ಸೀಟುಗಳನ್ನು ಪಡೆದಿತ್ತು, ಈ ಅಂಕಿಅಂಶಗಳೇ ಆ ಎರಡೂ ರಾಜ್ಯಗಳಲ್ಲಿ ಈ ಎರಡೂ ರಾಷ್ಟ್ರೀಯ ಪಕ್ಷಗಳಿಗೆ ನೆಲೆಯಿಲ್ಲದಿರುವುದನ್ನು ಎತ್ತಿ ತೋರುತ್ತವೆ.




ಇನ್ನೊಂದೆಡೆ ಉತ್ತರ ಪ್ರದೇಶದಲ್ಲಿ ಮಾಯಾವತಿಯ ಬಿಎಸ್‌ಪಿ ಮತ್ತು ಮುಲಾಯಂಸಿಂಗ್ ಯಾದವ್ ಅವರ ಎಸ್ಪಿ ಪಕ್ಷಗಳು, ಬಿಹಾರದಲ್ಲಿ ಲಾಲೂ ಅವರ ಆರ್‌ಜೆಡಿ, ಪಾಸ್ವಾನ್ ಅವರ ಲೋಕ ಜನಶಕ್ತಿ ಪಾರ್ಟಿ ಹಾಗೂ ನಿತೀಶ್ ಅವರ ಜನತಾದಳ (ಯುನೈಟೆಡ್) ಬಲವಾದ ಬೇಸ್ ಹೊಂದಿವೆ. ಆದ್ದರಿಂದಲೇ ಈ ಪ್ರಾದೇಶಿಕ ಪಕ್ಷಗಳು ರಾಷ್ಟ್ರೀಯ ಪಕ್ಷಗಳನ್ನು ಬೆರಳಲ್ಲಿ ಆಟವಾಡಿಸುತ್ತಿರುವುದು. ಈ ಕಾರಣಕ್ಕೇನೇ ಉತ್ತರ ಪ್ರದೇಶ ಮತ್ತು ಬಿಹಾರಗಳೆರಡರಲ್ಲೂ ಕಾಂಗ್ರೆಸ್‌ನೊಂದಿಗಿನ ಸ್ಥಾನಹೊಂದಾಣಿಕೆ ಮುರಿದು ಬದ್ದಿದೆ.

ಉತ್ತರ ಪ್ರದೇಶದಲ್ಲಿ ಮುಲಾಯಂಸಿಂಗ್ ಯಾದವ್ ಕಾಂಗ್ರೆಸ್‌ಗೆ ಕೇವಲ ನಾಲ್ಕು ಸ್ಥಾನಗಳನ್ನು ಬಿಟ್ಟುಕೊಡುವುದಾಗಿ ಹೇಳಿದರೆ ಬಿಹಾರದಲ್ಲಿ ಲಾಲೂ ಅದಕ್ಕೆ ಕೇವಲ ಮೂರು ಸ್ಥಾನಗಳನ್ನು ಮಾತ್ರ ಕೊಡುವುದಾಗಿ ಹೇಳಿದರು. ಇದರಿಂದ ಕುಪಿತಗೊಂಡಿರುವ ಕಾಂಗ್ರೆಸ್ ಮೈತ್ರಿ ಮಾಡಿಕೊಳ್ಳದೇ ನೇರವಾಗಿ ಸ್ಪರ್ಧಿಸುವ ತೀರ್ಮಾನ ಮಾಡಿದೆ.

ವಾಸ್ತವದಲ್ಲಿ ಇದರಿಂದ ಕಾಂಗ್ರೆಸ್‌ಗೆ ಲಾಭವಾಗುತ್ತೋ ನಷ್ಟವಾಗುತ್ತೋ ಅಂತ ನೋಡಿದರೆ ಲಾಭವೇ ಜಾಸ್ತಿ ಕಾಣುತ್ತೆ. ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಹಿಂದಿನ ಚುನಾವಣೆಯಲ್ಲಿಯೇ 9 ಸ್ಥಾನಗಳನ್ನು ಗೆದ್ದುಕೊಂಡಿದೆ. ಈ ಬಾರಿ ಮುಲಾಯಂಗೆ ಮಣಿದು ಕೇವಲ ನಾಲ್ಕು ಸ್ಥಾನಗಳಿಗೆ ಒಪ್ಪಿಕೊಂಡರೆ ತನ್ನಲ್ಲಿದ್ದ ಉಳಿದ ಐದು ಸ್ಥಾನಗಳನ್ನೂ ಕಳೆದುಕೊಂಡಂತಾಗುತ್ತಿತ್ತು, ಬಿಹಾರದಲ್ಲಿ ಲಾಲೂಗೆ ಮಣಿದು ಕೇವಲ ಮೂರು ಸ್ಥಾನಗಳಲ್ಲಿ ಮಾತ್ರ ಸ್ಪರ್ಧಿಸಿದ್ದರೆ ಆ ಮೂರನ್ನು ಉಳಿಸಿಕೊಳ್ಳಬಹುದಷ್ಟೆ ಹೊರತು ಒಂದನ್ನೂ ಹೆಚ್ಚು ಗೆಲ್ಲಲು ಸಾಧ್ಯವಾಗುತ್ತಿರಲಿಲ್ಲ.




ಈಗ ಸ್ವತಂತ್ರವಾಗಿ ಸ್ಪರ್ಧಿಸುತ್ತಿರುವುದರಿಂದ ಕಳೆದ ಚುನಾವಣೆಯಲ್ಲಿ ಉತ್ತರ ಪ್ರದೇಶದಲ್ಲಿ ಗೆದ್ದ ಒಂಭತ್ತು ಸ್ಥಾನಗಳ ಜೊತೆಗೆ ಇನ್ನೂ ಒಂದೆರಡು ಜಾಸ್ತಿ ಸಿಕ್ಕರೂ ಆಶ್ಚರ್ಯವಿಲ್ಲ, ಸಿಗದಿದ್ದರೆ ಪರವಾಗಿಲ್ಲ, ಇದ್ದ ಒಂಭತ್ತನ್ನಾದರೂ ಉಳಿಸಿಕೊಳ್ಳಬಹುದು. ಒಂದೆರಡನ್ನು ಕಳೆದುಕೊಂಡರೂ ಸಮಸ್ಯೆಯೇನಿಲ್ಲ, ಮುಲಾಯಂಗೆ ಮಣಿದರೆ ಕನಿಷ್ಠ ಐದನ್ನು ಕಳೆದುಕೊಳ್ಳಬೇಕಾಗುತ್ತಿತ್ತು.




ಎಲ್ಲಕ್ಕಿಂತ ಮುಖ್ಯ ವಿಚಾರ ಎಂದರೆ ಕಾಂಗ್ರೆಸ್ ಎಲ್ಲಿಯತನಕ ಈ ಎರಡು ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳ ಆಣತಿಗೆ ಮಣಿಯುತ್ತಾ ಹೋಗುತ್ತದೆಯೋ ಅಲ್ಲಿಯತನಕ ಆ ಪಕ್ಷಗಳು ಕಾಂಗ್ರೆಸ್‌ನ ದುರ್ಬಲತೆಯ ಲಾಭ ಪಡೆದು ಬೆಳೆಯುತ್ತವೆಯೇ ಹೊರತು ಕಾಂಗ್ರೆಸ್ ಖುದ್ದಾಗಿ ಬೆಳೆಯಲು ಸಾಧ್ಯವಾಗುವುದಿಲ್ಲ, ಸ್ವತಂತ್ರವಾಗಿ ಸ್ಪರ್ಧಿಸುವ ಮೂಲಕವೇ ಅದು ತನ್ನ ನೆಲೆಯನ್ನು, ಪ್ರಭಾವವನ್ನು ವಿಸ್ತರಿಸಿಕೊಳ್ಳಲು ಸಾಧ್ಯ. ಇದು ಸೋನಿಯಾ ಗಾಂಧಿಯ ಲೆಕ್ಕಾಚಾರ.

ಅದಕ್ಕೆ ಹೇಳಿದ್ದು ಹೋದರೆ ಕೂದಲು, ಬಂದರೆ ಗುಡ್ಡ ಅಂತ!




ನಾನೇಕೆ ಪ್ರಧಾನಿಯಾಗಬಾರದು?

ಇದು ಮಹಾರಾಷ್ಟ್ರದ ರಾಜಕೀಯ ದಿಗ್ಗಜ, ರಾಷ್ಟ್ರವಾದಿ ಕಾಂಗ್ರೆಸ್ ಪಾರ್ಟಿಯ ನೇತಾರ ಶರದ್ ಪವಾರ್ ಅವರ ಪ್ರಶ್ನೆ. ಇದನ್ನೇ ಅವರು "ಮರಾಠಿಗನೊಬ್ಬ ಪ್ರಧಾನಿ ಏಕಾಗಬಾರದು?" ಎಂದು ಕೇಳುತ್ತಿದ್ದಾರೆ. ಮರಾಠಿ ಸ್ವಾಭಿಮಾನ ಭಾವನೆಯನ್ನೆ ಬಂಡವಾಳ, ಜೀವಾಳ ಮಾಡಿಕೊಂಡಿರುವ ಶಿವಸೇನೆಗೆ ಈ ಪ್ರಶ್ನೆ ಸಹಜವಾಗಿ ಸರಿಯಾಗಿದೆ ಎನ್ನಿಸುತ್ತಿದೆ. ಈ ಕಾರಣಕ್ಕೆ ಶಿವಸೇನೆ ಬಿಜೆಪಿಯ ಸಖ್ಯ ತೊರೆದು ಶರದ್ ಪವಾರ್‌ನೊಂದಿಗೆ ನಿಂತಿದೆ. ಪವಾರ್ ಹೆಚ್ಚು ಸೀಟು ಗೆದ್ದಷ್ಟೂ ಮರಾಠಿಯೊಬ್ಬ ಪ್ರಧಾನಿಯಾಗುವ ಸಾಧ್ಯತೆ ಜಾಸ್ತಿಯಾಗುತ್ತದೆಯಲ್ಲವೆ?



ಈ ಹಿನ್ನೆಲೆಯಲ್ಲಿ ನೋಡಿದರೆ ತೃತೀಯ ರಂಗವೇನಾದರೂ ಹೆಚ್ಚು ಸ್ಥಾನಗಳನ್ನು ಗೆದ್ದು ಸರ್ಕಾರ ರಚನೆಗೆ ಕಸರತ್ತು ಪ್ರಾರಂಭಿಸಿದರೆ ಪವಾರ್ ಯುಪಿಎನಲ್ಲೇ ಉಳಿಯಬೇಕೆಂದು ಬೇಲಿ ಹಾಕಿಕೊಳ್ಳುವುದಿಲ್ಲ, ಮೂಲತಃ ಕಾಂಗ್ರೆಸ್ ಮನುಷ್ಯನೇ ಆಗಿರುವ ಪವಾರನನ್ನು ಪ್ರಧಾನಿ ಮಾಡುವುದಕ್ಕೆ ಖುದ್ದು ಕಾಂಗ್ರೆಸ್ಸೇ ಒಪ್ಪಿಕೊಂಡರೆ ಯುಪಿಎನಲ್ಲೇ ಉಳಿಯುತ್ತಾರೆ. ಈ ಬಾರ್ಗೇನ್ ಮಾಡುವಷ್ಟು ಸೀಟುಗಳನ್ನು ಗೆಲ್ಲದಿದ್ದರೆ ಬಾಲ ಮುದುಡಿಕೊಂಡು ಯುಪಿಎ ಜೊತೆಗಿರುತ್ತಾರೆ. ಎಲ್ಲಾ ನಿಂತಿರುವುದು ಗೆಲ್ಲುವ ಸೀಟುಗಳ ಮೇಲೆ.



ಕೆರೆದುಕೊಂಡು ಹುಣ್ಣು ಮಾಡಿಕೊಂಡ!

"ಸುಮ್ಮನಿರಲಾರದೇ ಅದೆಲ್ಲೋ ಕೆರೆದುಕೊಂಡು ...ಣ್ಣು ಮಾಡಿಕೊಂಡ" ಅಂತ ಗಾದೆ ಮಾತೊಂದಿದೆ. ಬಿಜೆಪಿಯ ಫಿಲಿಬಿಟ್ ಲೋಕಸಭಾ ಅಭ್ಯರ್ಥಿ ...ಣ್ ಗಾಂಧಿಗೆ ಚೆನ್ನಾಗಿ ಒಪ್ಪುತ್ತದೆ. ಮುಸ್ಲಿಮರನ್ನು ...ಯುತ್ತೇನೆ, ಕೆತ್ತುತ್ತೇನೆ, ಓಡಿಸುತ್ತೇನೆ, ಭಗವದ್ಗೀತೆಯ ...ಲೆ ಆಣೆ, ಅದೂ ಇದೂ ಅಂತ ಅರಚಾಡಿ ಈಗ ...ಜೈಲು ಪಾಲಾಗಿದ್ದಾನೆ. ಸದ್ಯಕ್ಕೆ ಹೊರಬರಲಾರದಷ್ಟು ...ಗಳನ್ನು ಮೈತುಂಬಾ ಹಾಕಿಸಿಕೊಂಡಿದ್ದಾನೆ.

...ತ್ತ ಬಿಜೆಪಿ ಮತ್ತು ಅಧ್ವಾನಿಯೂ ಮುಸ್ಲಿಮರ ...ದ್ಧ ಕೆಂಡಕಾರುವ ಹುಮ್ಮಸ್ಸಿನಲ್ಲಿದ್ದಿದ್ದರೆ ಪ್ರಾಯಶಃ ...ಣ್ ಮಾತಿಗೆ ಬಿಜೆಪಿ ಮತ್ತು ಸಂಘಪರಿವಾರದ ...ಯದಲ್ಲಾದರೂ ಒಂದಿಷ್ಟು ವೇಟೇಜ್ ಸಿಗುತ್ತಿತ್ತು. ...ತ ಎಂದರೆ ಬಿಜೆಪಿಗಾಗಲೀ, ಅಧ್ವಾನಿಗಾಗಲೀ ...ಹುಮ್ಮಸ್ಸಿಲ್ಲ. ಯಾರೊಬ್ಬರೂ ವರುಣ್ ಅವರ ...ತುಗಳನ್ನು ಬಹಿರಂಗವಾಗಿ ಸಮರ್ಥಿಸಿಕೊಂಡಿಲ್ಲ. ...ಗಿ ಸಂಘಪರಿವಾರ, ಬಿಜೆಪಿ ಮತ್ತು ಅಧ್ವಾನಿ - ಯಾರಿಂದಲೂ ಬೆಂಬಲ ಸಿಗದೇ ವರುಣ್ ಅಕ್ಷರಶಃ ಅನಾಥನಾಗಿದ್ದಾನೆ.

...ಸ್ತವದಲ್ಲಿ ವರುಣ್ ಬಹುಬೇಗನೇ ಮಿಂಚ ...ಬ, ಎತ್ತರದ ಅಧಿಕಾರ ಸ್ಥಾನಕ್ಕೆ ಏರಬೇಕೆಂಬ ...ತ್ವಾಕಾಂಕ್ಷಿಯುಳ್ಳ ಮನುಷ್ಯ. 2004ರ ಲೋಕಸಭಾ ...ವಣೆಯ ಪೂರ್ವದಲ್ಲಿ ಇನ್ನೇನು ಬಿಜೆಪಿ ನೇತೃತ್ವದ ...ಡಿಎ ಗೆದ್ದು ಅಧಿಕಾರಕ್ಕೇರುತ್ತದೆ ಎಂಬ ದಟ್ಟ ...ಷಣೆಗಳು ನಡೆಯುತ್ತಿದ್ದವು. ವರುಣ್ ಗಾಂಧಿ ಮತ್ತು ... ತಾಯಿ ಮೇನಕಾ ಗಾಂಧಿಯಿಬ್ಬರೂ ಉನ್ನತ ...ನಾರಕ್ಕೇರುವುದಕ್ಕೆ ಇದೇ ಸಮಯವೆಂದು ತಿಳಿದು ... ಸೇರಿಕೊಂಡರು. ನೆಹರೂ ಕುಟುಂಬದ ಕುಡಿ ...ದು ತನ್ನ ಪಾಳೆಯದಲ್ಲಿದ್ದರೆ ಅಸ್ತ್ರವಾಗಿ ಬಳಸಿ ...ಬಹುದೆಂದು, ಯುವ ಜನರ ಪ್ರತಿನಿಧಿಯೆಂದು ...ತಗೊಳ್ಳುತ್ತಿದ್ದ ರಾಹುಲ್ ಗಾಂಧಿಗೆ ಮುಖಾಮುಖಿ ... ವರುಣ್ ಗಾಂಧಿಯನ್ನು ನಿಲ್ಲಿಸಬಹುದೆಂದು ...ಚಾರ ಹಾಕಿದ ಬಿಜೆಪಿಗಳೂ ಅವರನ್ನು ಸಂತಸದಿಂದ ...ಬಾಡಿಕೊಂಡರು. ಅವರ ಅದೃಷ್ಟ ಕೈಕೊಟ್ಟಿತ್ತು. ...ಡಿಎ ಮಕಾಡೆ ಮಲಗಿ ಯುಪಿಎ ಅಧಿಕಾರಕ್ಕೆ ...).

...ಜೆಪಿ ಕೇಂದ್ರದಲ್ಲಿ ಅಧಿಕಾರಕ್ಕಂತೂ ಏರಲಿಲ್ಲ. ... ವರುಣ್‌ಗೆ ಪಕ್ಷದ ಬಹುಮುಖ್ಯ ಸ್ಥಾನವಾದ ...ಲ್ ಸೆಕ್ರೆಟರಿ ಹುದ್ದೆಯನ್ನಾದರೂ ಕೊಡಬೇಕೆಂದು ...—ಮಗ ಹಠಕ್ಕೆ ಬಿದ್ದರು. ದಶಕಗಳ ಕಾಲ ಪಕ್ಷಕ್ಕಾಗಿ ...ದ ಹಿರಿಯರಿಗೆ ಕೊಡುವ ಈ ಹುದ್ದೆಯನ್ನು ...ದು ದಿನ ಮುಂಚೆ ಬಂದ ವರುಣ್‌ಗೆ ಕೊಡು...ದು? ಆ ಸ್ಥಾನದ ನಿರಾಕರಣೆಯೊಂದಿಗೆ ವರುಣ್‌ನ ...ನೇ ಕನಸೂ ಛಿದ್ರವಾಯಿತು. 2006ರಲ್ಲಿ ...ಪ್ರದೇಶದ ವಿದಿಶಾ ಲೋಕಸಭಾ ಕ್ಷೇತ್ರದ ...ಚುನಾವಣೆಯ ಟಿಕೆಟ್ಟನ್ನಾದರೂ ಕೊಡಬೇಕೆಂದು ... ಹಠ ಹಿಡಿದ. ಈ ಕ್ಷೇತ್ರ ಬಿಜೆಪಿಯ ಭದ್ರಕೋಟೆ. ...ಬಿಜೆಪಿಯಿಂದ ಯಾರು ನಿಂತರೂ ಗೆಲ್ಲುತ್ತಾರೆಂಬ ...ದ್ದ ಕಾರಣದಿಂದಲೇ ವರುಣ್ ಈ ಹಠ ಹಿಡಿದಿದ್ದ (...ಬಾರಿ ಅಲ್ಲಿಂದ ಸುಷ್ಮಾ ಸ್ವರಾಜ್ ನಿಂತಿದ್ದಾರೆ). ...ನ್ನು ನಿರಾಕರಿಸಲಾಯಿತು. ಕೊನೆಗೆ ಆತನ ಸಹಾಯಕ್ಕೆ ...ದಳು ಅವನ ತಾಯಿ ಮನೇಕಾ ಗಾಂಧಿ. ಆಕೆ ...ರಿಂದ ಒಟ್ಟು ... ಬಾರಿ ಸ್ಪರ್ಧಿಸಿ ಐದು ...ಗೆದ್ದ ಉತ್ತರ ಪ್ರದೇಶದ ಫಿಲಿಬಿಟ್ ಲೋಕಸಭಾ ...ನ್ನು ಮಗನಿಗಾಗಿ ತ್ಯಾಗ ಮಾಡಿದಳು.

...ಲ್ಲಾದರೂ ಗೆದ್ದು ಬರುತ್ತಾನೆಂದರೆ ಈಗ ಮುಸ್ಲಿಮರ ...ದ್ಧ ವಿಷಕಾರಿ ತಾನೂ ಜೈಲುಪಾಲಾಗಿದ್ದಾನೆ. ...—ಅಧ್ವಾನಿಗೂ ಗೂಟ ಬಡಿದಿದ್ದಾನೆ.

...ಮ್ಮನಿರಲಾರದೇ ಅದೆಲ್ಲೋ ಕೆರೆದುಕೊಂಡು ಹುಣ್ಣು ...ಕೊಂಡರು' ಎಂದರೆ ಇದೇ ಅಲ್ಲವೆ? ■


ಗುಂಡಿತೋಡಿಕೊಂಡ ಬಿಜೆಪಿ, ಎಚ್ಚೆತ್ತ ಕಾಂಗ್ರೆಸ್!

ಬಿಜೆಪಿ ತಾನೇ ತೋಡಿಕೊಂಡ ಗುಂಡಿಗೆ ಬೀಳಹೊರಟಿದೆ. ರಾಜ್ಯದಲ್ಲಿ 20 ಕ್ಷೇತ್ರಗಳಲ್ಲಿ ಗೆಲ್ಲುತ್ತೇವೆ ಎಂದು ಅಬ್ಬರದ ಪ್ರಚಾರ ಆರಂಭಿಸಿದ್ದ ಕೇಸರಿ ಪಕ್ಷಕ್ಕೆ ಕೆಲ ಕ್ಷೇತ್ರಗಳಲ್ಲಿ ಕಣಕ್ಕಿಳಿಸಲು ಅಭ್ಯರ್ಥಿಗಳೇ ಇಲ್ಲ ಎಂಬುದು ಗೊತ್ತಿರಲಿಲ್ಲವೇನೋ? ಕೊನೆಗೂ ಕಾಂಗ್ರೆಸ್ ಕಾರ್ಯಕ್ಕೆ ಬಾರದವರು ಎಂದು ನಿರ್ಲಕ್ಷಿಸಿದವರನ್ನು ದುಡ್ಡು ಕೊಟ್ಟು ಖರೀದಿಸಿ, ಮಾನ ಉಳಿಸಿಕೊಳ್ಳ ಹೊರಟಿದೆ. ಆದರೆ ಇದರ ಪರಿಣಾಮ ಲೆಕ್ಕ ಹಾಕುವುದರಲ್ಲಿ ಮತ್ತೆ ಎಡವಿದೆ.

ಇತ್ತ ಕಾಂಗ್ರೆಸ್ ಈ ಹಿಂದಿನ ಚುನಾವಣೆಗಳಿಗಿಂತ ಹೆಚ್ಚು ಸೀರಿಯಸ್ ಆಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದು, ಬಿಜೆಪಿ ನಾಯಕರು ನಿದ್ರೆಗೆಡುವಂತೆ ಮಾಡಿದೆ. ಕೇವಲ ದುಡ್ಡಿನ ಬಲದಿಂದ ಮೆರೆದಾಡುತ್ತಿರುವ ಬಿಜೆಪಿ ಅಭ್ಯರ್ಥಿಗಳನ್ನು ಪಟ್ಟುಹಾಕಿ ಉರುಳಿಸಬಲ್ಲ ಪಟುಗಳನ್ನೇ ಕಾಂಗ್ರೆಸ್ ಹುಡುಕಿ, ಹುಡುಕಿ ಕಣಕ್ಕೆ ಬಿಟ್ಟಿದೆ.

ನಾಯಕರ ಪ್ರತಿಷ್ಠೆ, ಗೊಡ್ಡು ಬೆದರಿಕೆಗಳಿಗೆ ಹೈಕಮಾಂಡ್ ತಲೆಕೆಡಿಸಿಕೊಂಡಿಲ್ಲ. ಹೀಗಾಗಿ ಕೆಪಿಸಿಸಿ ಕಾರ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್ ಎಷ್ಟೇ ವಿರೋಧಿಸಿದರೂ ಬೆಂಗಳೂರು ಗ್ರಾಮಾಂತರದಲ್ಲಿ ತೇಜಸ್ವಿನಿ ಗೌಡರನ್ನು ಕಣಕ್ಕಿಳಿಸಲಾಗಿದೆ. ಮಗನಿಗೆ ಟಿಕೆಟ್ ನೀಡಿ ಎಂದು ಕೆಪಿಸಿಸಿ ಅಧ್ಯಕ್ಷ ದೇಶಪಾಂಡೆ ಗೋಗರೆದರೂ ಪ್ರಯೋಜನವಾಗಿಲ್ಲ. ಪಕ್ಷ ತೆಗೆದುಕೊಂಡ ಬುದ್ಧಿವಂತಿಕೆಯ ತೀರ್ಮಾನಕ್ಕೆ ಉದಾಹರಣೆ ಎಂದರೆ ಬೆಂಗಳೂರು ದಕ್ಷಿಣ ಮತ್ತು ಉಡುಪಿ-ಚಿಕ್ಕಮಗಳೂರ ಕ್ಷೇತ್ರಗಳ ಅಭ್ಯರ್ಥಿಗಳು.


ಅನಂತು ವರ್ಸಸ್ ಕೃಷ್ಣ ಬೈರೇಗೌಡ



ಬೆಂಗಳೂರು ದಕ್ಷಿಣ ಕ್ಷೇತ್ರದಿಂದ ಕಣಕ್ಕಿಳಿದಿರುವ ಬಿಜೆಪಿ ನಾಯಕ ಅನಂತ್ ಕುಮಾರ್ ನಿದ್ರೆಗೆಡಿಸುವಲ್ಲಿ ಕಾಂಗ್ರೆಸ್ ಯಶಸ್ವಿಯಾಗಿದೆ. ಇನ್ನು ಅವರನ್ನು ಮನೆಗೆ ಕಳುಹಿಸುವುದಷ್ಟೇ ಬಾಕಿ ಇದೆ ಎಂದು ಬಿಜೆಪಿ ಕಾರ್ಯಕರ್ತರೇ ಮಾತನಾಡಿಕೊಳ್ಳಲಾರಂಭಿಸಿದ್ದಾರೆ. ಮೊದಲಿಗೆ ಎಸ್.ಎಂ. ಕೃಷ್ಣ ಸ್ಪರ್ಧಿಸಲು ಮುಂದಾದಾಗಲೇ ಅನಂತು ಗಾಬರಿ ಬಿದ್ದಿದ್ದರು. ಕೊನೆಗೆ ಯಡ್ಡಿಯ ಕಾಲಿಗೆ ಬಿದ್ದು, ಸೋಮಣ್ಣನನ್ನು ಮುಂದಿಟ್ಟುಕೊಂಡು ಕೃಷ್ಣರನ್ನು ಹೆದರಿಸಿ, ಹಿಂದಕ್ಕೆ ಕಳುಹಿಸಿದ್ದರು. ಆದರೆ ಕಾಂಗ್ರೆಸ್ ಹೈಕಮಾಂಡ್ ಲೆಕ್ಕ ತಪ್ಪಲಿಲ್ಲ.



ಆ ಕೃಷ್ಣ ಅಲ್ಲದಿದ್ದರೆ ಈ ಕೃಷ್ಣ ಎಂದು ಹೇಳಿ ಯುವ ನಾಯಕ ಕೃಷ್ಣ ಬೈರೇಗೌಡರನ್ನು ಕಣಕ್ಕೆ ಬಿಟ್ಟಿದೆ. ಬೆಂಗಳೂರಿನ ಪ್ರಜ್ಞಾವಂತರ ನಡುವೆ, ಯುವ ಜನರ ನಡುವೆ ಪಾಪ್ಯುಲರ್ ಆಗಿರುವ ಕೃಷ್ಣ ಬೈರೇಗೌಡರ ಪರವಾಗಿ ಪಕ್ಷ ಕೂಡ ಒಗ್ಗಟ್ಟಿನಿಂದ ಪ್ರಚಾರ ಆರಂಭಿಸಿದೆ. ಇವತ್ತು ಬಿಜೆಪಿ ಸೇರುತ್ತೇನೆ, ನಾಳೆ ಸೇರುತ್ತೇನೆ ಎಂದು ಬಿಜೆಪಿಯ ಅನಂತು ಬಣಕ್ಕೆ ಯಾಮಾರಿಸುತ್ತಿರುವ ಗೋವಿಂದ ರಾಜ್ ನಗರದ ಶಾಸಕ ಸೋಮಣ್ಣ ಚುನಾವಣೆ ಮುಗಿಯುವವರೆಗೂ ಬಿಜೆಪಿ ಸೇರದಿರುವ ಸಾಧ್ಯತೆಗಳಿವೆ. ಹೀಗಾಗಿ ಅವರು ಕೂಡ ಒಳಗೊಳಗೇ ಕೃಷ್ಣ ಬೈರೇಗೌಡರ ಪರ ಪ್ರಚಾರ ಮಾಡಲಿದ್ದಾರೆ ಎಂದು ಅವರ ಆಪ್ತರೇ ಮಾತನಾಡಿಕೊಳ್ಳುತ್ತಿದ್ದಾರೆ.




ಈ ಬೆಳವಣಿಗೆಯಿಂದ ಅನಂತು ಕಂಗೆಟ್ಟಿದ್ದು, ನನಗೆ ಮತ್ತು ನನ್ನ ಬೆಂಬಲಿಗರಿಗೆ ಯಾವ ಅಧಿಕಾರವೂ ಬೇಡ. ಹೇಗಾದರೂ ಮಾಡಿ ನನ್ನನ್ನು ಸೋಲಿನ ಸುಳಿಯಿಂದ ತಪ್ಪಿಸಿ ಎಂದು ಯಡ್ಡಿಯ ಮೊರೆ ಹೋಗಿದ್ದಾರಂತೆ. ಯಡ್ಡಿ ಅನಂತು ಕೈ ಹಿಡಿಯುತ್ತಾರೋ, 'ಕೃಷ್ಣ' ಪರಮಾತ್ಮನ ಸೇವೆ ಮಾಡುತ್ತಾರೋ ಕಾದು ನೋಡಬೇಕು.


ನಗು ಕಿತ್ತ ಹೆಗಡೆ



ಇನ್ನು ಮಂಗಳೂರಿನಲ್ಲಿ ಗುರು ರಾಮ ಭಟ್ಟರಿಗೆ ಹೆದರಿ ಚಿಕ್ಕಮಗಳೂರು-ಉಡುಪಿ ಕ್ಷೇತ್ರಕ್ಕೆ ಓಡಿಬಂದಿರುವ ಹಲ್ಮುಖಿ ಗೌಡನ ಮುಖದಲ್ಲಿನ ನಗುವನ್ನು ಜಯಪ್ರಕಾಶ್ ಹೆಗಡೆ ಎಂಬ ಸಜ್ಜನ ಕಿತ್ತುಕೊಂಡಿದ್ದಾರೆ. ಬ್ರಹ್ಮಾವರ, ಕುಂದಾಪುರ ಭಾಗದಲ್ಲಿ ಜನಪ್ರಿಯರಾಗಿರುವ ಜಯಪ್ರಕಾಶ್ ಹೆಗಡೆ ಹೆಸರನ್ನು ಕಾಂಗ್ರೆಸ್ ಪ್ರಕಟಿಸುತ್ತಿದ್ದಂತೆಯೇ ಬಿಜೆಪಿ ಮಂದಿ ಬೆಚ್ಚಿ ಬಿದ್ದಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ಶೇ.60 ರಷ್ಟು ಒಕ್ಕಲಿಗರು, ಶೇ.85 ರಷ್ಟು ಬ್ರಾಹ್ಮಣರು ಬಿಜೆಪಿ ಬೆಂಬಲಿಸಿದರೂ, ಜಿಲ್ಲೆಯಲ್ಲಿ ಭಾರೀ ಪ್ರಮಾಣದಲ್ಲಿರುವ ಹಿಂದುಳಿದ ವರ್ಗದವರು ಮತ್ತು ದಕ್ಷಿಣ ಕನ್ನಡ ಮೂಲದವರು ಜಯಪ್ರಕಾಶ್ ಹೆಗಡೆಯನ್ನು ಬೆಂಬಲಿಸಲಿದ್ದಾರೆ. ಇದರಿಂದ ಅವರ ಗೆಲುವು ಖಚಿತ ಎಂದು ವಿಶ್ಲೇಷಿಸಲಾಗುತ್ತಿದೆ. ಇನ್ನು ಶೃಂಗೇರಿ ಕ್ಷೇತ್ರದಿಂದ ಡಿ.ಬಿ.ಚಂದ್ರೇಗೌಡ ತೊಲಗಿರುವುದು ಪಕ್ಷದ ಇತರ ನಾಯಕರಲ್ಲಿ ಹುರುಪು ಮೂಡಿಸಿದ್ದು, ಪಕ್ಷಕ್ಕಾಗಿ ಒಗ್ಗಟ್ಟಿನಿಂದ ದುಡಿಯುವ ವಾತಾವರಣ ನಿರ್ಮಾಣವಾಗಿದೆ.



ಸದಾನಂದ ಗೌಡ ಸ್ಪರ್ಧಿಸುವುದು ರಾಜಕೀಯವಾಗಿ ಮಹತ್ವಾಕಾಂಕ್ಷೆ ಹೊಂದಿರುವ ಸಿ.ಟಿ.ರವಿ ಮತ್ತು ಜೀವರಾಜ್‌ಗೆ ಇಷ್ಟವಿರಲಿಲ್ಲ. ಗೌಡರು ಬಿಜೆಪಿ ಅಧ್ಯಕ್ಷರಾಗಿರುವುದರಿಂದ ಜಿಲ್ಲೆಯ ಬಿಜೆಪಿ ನಾಯಕರು ಮುಂದೆ ಅವರ ಸುತ್ತಮುತ್ತ ಓಡಾಡಲಿದ್ದಾರೆ. ತಮಗೆ ಬೆಳೆಯುವ ಅವಕಾಶವೇ ತಪ್ಪಿ ಹೋಗುತ್ತದೆ ಎಂಬುದು ಇವರಿಬ್ಬರ ಲೆಕ್ಕಾಚಾರವಾಗಿದೆ. ಹೀಗಾಗಿ ಗೌಡರ ಕಾಲೆಳೆದರೂ ಆಶ್ಚರ್ಯವಿಲ್ಲ ಎಂದು ಬಿಜೆಪಿ ಮಂದಿ ಮಾತನಾಡಿಕೊಳ್ಳುತ್ತಿದ್ದಾರೆ.



ಈ ನಡುವೆ ಶಿಷ್ಯನನ್ನು ಸೋಲಿಸುವ ಪಣತೊಟ್ಟಿರುವ ಉರಿಮಜಲು ರಾಮ ಭಟ್ ಬಿಜೆಪಿ ಮತಗಳನ್ನು ಒಡೆಯುವ ತಂತ್ರ ರೂಪಿಸಿದ್ದಾರೆ. ಮತ್ತೆ ಜನಸಂಘಕ್ಕೆ ಚಾಲನೆ ನೀಡಿರುವ ಅವರು ಹಲ್ಮುಖಿ ಗೌಡರ ಎದುರು ತಮ್ಮ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಸಾಧ್ಯತೆಗಳಿವೆ.

ಅಲ್ಲದೆ, ಶ್ರೀರಾಮ ಸೇನೆ ಮತ್ತು ಭಜರಂಗದಳ ಇದೇ ಸರಿಯಾದ ಸಮಯ ಎಂದು ಬಂಡಾಯದ ಮಾತುಗಳನ್ನಾಡಿವೆ. ಶ್ರೀರಾಮ ಸೇನೆಯ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಶ್ರೀರಂಗಪಟ್ಟಣದಲ್ಲಿ ಮುಖ್ಯಮಂತ್ರಿ ಯಡ್ಡಿ ಜೊತೆ ಕಳೆದವಾರ ನಡೆಸಿದ ಮಾತುಕತೆ (ದುಡ್ಡಿನ ಡೀಲ್) ವಿಫಲವಾಗಿದ್ದು, ಮತ್ತೆ ಡೀಲ್ ಕುದುರದಿದ್ದಲ್ಲಿ ಗೌಡರ ಗ್ರಹಚಾರ ಕೆಡಲಿದೆ ಎಂದು ಭಜರಂಗಿಗಳು ಅಬ್ಬರಿಸುತ್ತಾ ಓಡಾಡುತ್ತಿದ್ದಾರೆ. ಒಟ್ಟಾರೆಯಾಗಿ ಸದಾನಂದಗೌಡರ ನಗು ಮುಖ ಇನ್ನು ಹೆಚ್ಚು ದಿನ ಟಿವಿಯಲ್ಲಿ ಕಾಣಿಸದು!

ಸ್ವಾಮೀಜಿಯ ರಾಜಕೀಯ ಡೀಲ್

ತುಮಕೂರಿನ ಸಿದ್ಧಗಂಗಾಮಠ ಈಗ ಬಿಜೆಪಿಯ ಕೇಂದ್ರ ಕಚೇರಿಯಂತೆ ಕೆಲಸ ಮಾಡುತ್ತಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಇತ್ತೀಚೆಗೆ ಸಿದ್ಧಗಂಗಾ ಮಠದ ಶಿವಕುಮಾರ್ ಸ್ವಾಮಿಗಳು ಹಾಸನದ ರಾಜಕೀಯದಲ್ಲಿಯೂ ಕೈಯಾಡಿಸಿರುವ ಸುದ್ದಿ ಬಂದಿದೆ. ಬಿಜೆಪಿಯಲ್ಲಿ ಬಂಡಾಯದ ಬಾವುಟ ಹಾರಿಸಿರುವ ಬಿ.ಬಿ. ಶಿವಪ್ಪನವರನ್ನು ಮಠಕ್ಕೆ ಕರೆಸಿಕೊಂಡ ಸ್ವಾಮೀಜಿ, ಯಡ್ಡಿ ಹೇಳಿದಂತೆ ಕೇಳುವಂತೆ ಸೂಚಿಸಿದ್ದಾರೆ. ಹೀಗಾಗಿ ಬಿ.ಬಿ. ಶಿವಪ್ಪ ಈಗ ಬಿಜೆಪಿ ಪರ ಪ್ರಚಾರ ಆರಂಭಿಸಿದ್ದಾರೆ.

ಶ್ರೀಗಳ ಸೂಚನೆಯಂತೆ ಯಡ್ಡಿಯೊಂದಿಗೆ ಶಿವಪ್ಪ ಮಾತುಕತೆ ನಡೆಸಿದ್ದು, ಆ ಸಂದರ್ಭದಲ್ಲಿ ಕಾಂಗ್ರೆಸ್ ಶಾಸಕ ಸೋಮಣ್ಣ ಕೂಡ ಇದ್ದರು. ಚುನಾವಣೆ ನಂತರ ಯಡ್ಡಿ ಮಾತಿಗೆ ತಪ್ಪಿದರೆ ಸ್ವಾಮಿಗಳೇ ಹೊಣೆ ಎಂದು ಬಿ.ಬಿ.ಶಿವಪ್ಪ ಹೇಳಿಕೊಂಡು ಓಡಾಡುತ್ತಿದ್ದಾರೆ. ಇದನ್ನು ನೋಡಿ ಈ ಇಳಿ ವಯಸ್ಸಿನಲ್ಲಿ ಈ ಸನ್ಯಾಸಿಗೆ ರಾಜಕೀಯ ಬೇಕಿತ್ತಾ ಎಂದು ಜನ ಮಾತನಾಡಿಕೊಳ್ಳುವಂತಾಗಿದೆ.

ಇತ್ತ ಬಿಜೆಪಿ ಸೇರಿರುವ ಡಿ.ಬಿ.ಚಂದ್ರೇಗೌಡ ತವ್ಮೊಂದಿಗೆ ಹಾಸನದ ಕಾಂಗ್ರೆಸ್ ನಾಯಕ ಶ್ರೀಕಂಠಯ್ಯರನ್ನೂ ದಿಕ್ಕು ತಪ್ಪಿಸಿದ್ದಾರೆ. ಇದರಿಂದಾಗಿ ಹಾಸನದಲ್ಲಿ ಬಿಜೆಪಿ 'ಸ್ಟ್ರಾಂಗ್' ಆಗಿದೆ ಎಂದು ಚೆಡ್ಡಿ ನಾಯಕರು ಭಾಷಣ ಮಾಡಿಕೊಂಡು ಓಡಾಡುತ್ತಿದ್ದಾರೆ. ಇದನ್ನು ಕೇಳಿ ಇವರ ರಾಜಕೀಯ ಪ್ರಜ್ಞೆ ಬಗ್ಗೆ ಸ್ಥಳೀಯ ಜನ ಬಿದ್ದು ಬಿದ್ದು ನಗುತ್ತಿದ್ದಾರೆ. ಪಕ್ಷ ಕಟ್ಟಿ ಗೊತ್ತಿರದ ಇಂಥವರು ಎಷ್ಟು ಮಂದಿ ಬಿಜೆಪಿ ಸೇರಿದರೂ ಆ ಪಕ್ಷಕ್ಕೆ ಇಲ್ಲಿ ನೆಲೆ ಸಿಗದು ಎಂದು ಜೆಡಿಎಸ್ ಮಂದಿ ಆಡಿಕೊಳ್ಳುತ್ತಿದ್ದಾರೆ.

ಬಚಾವಾದ ತಮ್ಮಣ್ಣ

ಮಂಡ್ಯದ ಕಾಂಗ್ರೆಸ್ ನಾಯಕ ಎಲ್.ಆರ್. ಶಿವರಾಮೇಗೌಡನನ್ನೂ ಬಿಜೆಪಿ ಖರೀದಿಸಿದೆ. ಅಂಬಿ ಹೇಳಿದವರಿಗೇ ಕಾಂಗ್ರೆಸ್ ಟಿಕೆಟ್ ಎಂಬುವುದು ಖಚಿತವಾಗುತ್ತಿದ್ದಂತೆ ನಂಗ್‌ನಾಚ್ ಖ್ಯಾತಿಯ ಶಿವರಾಮೇಗೌಡ ಬಿಜೆಪಿ ನಾಯಕರೊಂದಿಗೆ ಡೀಲ್ ಕುದುರಿಸಿದ್ದಾರೆ. ನೆಲೆಯೇ ಇಲ್ಲದ ಪಕ್ಷದಿಂದ ಮಂಡ್ಯದಲ್ಲಿ ಕಣಕ್ಕಿಳಿಯಲಿದ್ದಾರೆ. ಇದರಿಂದ ಹೆಚ್ಚು ಖುಷಿ ಪಟ್ಟವರೆಂದರೆ ಡಿ.ಸಿ.ತಮ್ಮಣ್ಣ. ಇತ್ತೀಚೆಗೆ ನಡೆದ ಉಪ ಚುನಾವಣೆಯಲ್ಲಿ ಸೋತು ಸುಣ್ಣವಾಗಿದ್ದ ತಮ್ಮಣ್ಣಗೆ ಪಕ್ಷ ಲೋಕಸಭೆಗೆ ನಿಲ್ಲಲು ರೆಡಿಯಾಗಿ ಎಂದು ಸೂಚಿಸಿತ್ತು.

ಈಗಲೇ ಮಂಡ್ಯದಲ್ಲಿ ಮುಖ ಮುಚ್ಚಿಕೊಂಡು ಓಡಾಡುತ್ತಿರುವ ತಮ್ಮಣ್ಣ ತಾನೇ ಅಭ್ಯರ್ಥಿಯಾದರೆ ಜನರ ಮುಂದೆ ನಿಂತು ಓಟು ಕೇಳುವುದು ಹೇಗೆ ಎಂದು ತಲೆಬಿಸಿ ಮಾಡಿಕೊಂಡಿದ್ದರು. ಶಿವರಾಮೇಗೌಡ ಪಕ್ಷಕ್ಕೆ ಬಂದು 'ಬಲಿಕಾ ಬಕ್ರಾ' ಆಗಿರುವುದನ್ನು ಕಂಡು ಅವರಿಗೆ ಸಂತೋಷವಾಗಿದೆ ಎಂದರೆ ಇತ್ತ ಅವಮಾನವೂ ತಪ್ಪಿದಂತಾಯಿತು, ಅತ್ತ ಕಾಸು ಉಳಿದಂತಾಯಿತು ಎಂದು ಲೆಕ್ಕಹಾಗಿ ತಮ್ಮ ಬೆಂಬಲಿಗರಿಗೆ ದೊಡ್ಡ ಪಾರ್ಟಿ ಕೊಟ್ಟರೆಂಬ ಸುದ್ದಿ ಇದೆ.

ಜೆಡಿಎಸ್ ಅಭ್ಯರ್ಥಿಯಾಗಿರುವ ಚೆಲುವರಾಯಸ್ವಾಮಿ ತಣ್ಣಗೆ ಕ್ಷೇತ್ರದಾದ್ಯಂತ ಪ್ರಚಾರ ನಡೆಸಿದ್ದು, ಕಾಂಗ್ರೆಸ್ ಮತ್ತು ಬಿಜೆಪಿಯ ಅಭ್ಯರ್ಥಿ ಯಾರೇ ಆಗಲಿ ಗೆಲುವು ತನ್ನದೇ ಎಂದು ಬೀಗುತ್ತಿದ್ದಾರೆ.

ಮ್ಯಾಗಿಯ ಮೋಡಿ

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್‌ಗಳನ್ನು ಮಾರಿಕೊಳ್ಳಲಾಗಿತ್ತು ಎಂದು ಆರೋಪಿಸಿದ್ದ ಕಾಂಗ್ರೆಸ್ ನಾಯಕಿ ಮಾರ್ಗರೆಟ್ ಆಳ್ವ ಉತ್ತರ ಕನ್ನಡ ಕ್ಷೇತ್ರದ ಟಿಕೆಟ್ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.



ಹೈಕಮಾಂಡ್‌ನ ಅವಕೃಪೆಗೆ ಪಾತ್ರರಾಗಿದ್ದ ಮ್ಯಾಗಿ ಬೆಂಗಳೂರಿನಲ್ಲಿ ಬಿಡಾರ ಹೂಡಿ 'ರಾಜಕೀಯ' ಮಾಡಿದ್ದಾರೆ. ಕೆಪಿಸಿಸಿ ಅಧ್ಯಕ್ಷ ದೇಶಪಾಂಡೆ ತಮ್ಮ ಮಗನಿಗೆ ಟಿಕೆಟ್ ಕೊಡಿಸಬೇಕೆಂದು ಎಲ್ಲಿಲ್ಲದ ಪ್ರಯತ್ನ ನಡೆಸಿದ್ದರು. ಆದರೆ ಮ್ಯಾಗಿ ಬಿಷಪ್‌ರ ಮೂಲಕ ಸೋನಿಯಾ ಗಾಂಧಿ ಮನವೊಲಿಸಿ ಟಿಕೆಟ್ ಪಡೆದಿದ್ದಾರೆ ಎಂಬ ಮಾತು ಪಕ್ಷದ ವಲಯದಲ್ಲಿ ಕೇಳಿ ಬಂದಿದೆ.

ದೇಶಪಾಂಡೆ ತಮ್ಮ ಮಗನಿಗೆ ಟಿಕೆಟ್ ಕೊಡಿ ಎಂದಾಗ, ನನ್ನ ಮಗನಿಗೆ ಕೊಡಿ ಎಂದು ಮ್ಯಾಗಿ ಪಟ್ಟು ಹಿಡಿದರು. ಆಗ ನಾಯಕರು ಇಬ್ಬರ ಮಕ್ಕಳಿಗೂ ಬೇಡ ಎಂದಾಗ, ಮ್ಯಾಗಿ ನನಗೇ ಕೊಡಿ ಎಂದು ಒತ್ತಾಯಿಸಿದರು. ಆದರೆ ದೇಶಪಾಂಡೆ ಈ ಸಾರಿ ಮಾನವ ಹಿಂದೆ ಸರಿದಿದ್ದರಿಂದ ಮ್ಯಾಗಿ ಮತ್ತೆ ಉ.ಕ.ದಲ್ಲಿ ಕಾಣಿಸಿಕೊಳ್ಳುವಂತಾಗಿದೆ.

● ವರದಿಗಾರ



ಅದು ಕಲಾಸಿಪಾಳ್ಯದ ಕರ್ಮವೋ ಅಥವಾ ಅಲ್ಲಿನ ಬಡ ಕೂಲಿಗಳ ಕಣ್ಣೀರಿನ ಶಾಪವೋ ಗೊತ್ತಿಲ್ಲ, ಯಾರೆಲ್ಲ ಅಲ್ಲಿನ ಕೂಲಿಗಳ ದೊರೆಯಾಗಲು ಬಂದರೋ ಅವರ್‍ಯಾರೂ ಐದು ವರ್ಷದ ತನಕ ಕೂಡ ಬದುಕುಳಿಯಲಿಲ್ಲ. ಅದನ್ನೇ ಕೂಲಿ ಮಾಫಿಯಾ ಎನ್ನುತ್ತಾರೆ. ಅದರ ದೊರೆಯಾದವನಿಗೆ ಕುಂತಲ್ಲೇ ದಿನಕ್ಕೆ ಕನಿಷ್ಠ 25 ಸಾವಿರ ರೂಪಾಯಿಗಳಷ್ಟು ರೊಕ್ಕ ಬಂದು ಸೇರುತ್ತದೆಯೆಂದರೆ ತಿಂಗಳಿಗದೇ ಏಳೂವರೆ ಲಕ್ಷವಾಯಿತು. ಅಂದರೆ ವರ್ಷಕ್ಕೆ ಹೆಚ್ಚೂಕಮ್ಮಿ ಒಂದು ಕೋಟಿ!

ಸರಣಿ ಕೊಲೆಗಳ ಕೂಲಿ ಮಾಫಿಯಾ


ಬಲ್ಲೆಯಾ ಇದು ಕಲಾಸಿಪಾಳ್ಯ?

● ರಾ. ಸೋಮನಾಥ್

ಕಲಾಸಿಪಾಳ್ಯ ಎಂಬ ಹೆಸರಲ್ಲೇ ಅಡಗಿ ಕೂತ 'ಖಲಾಸ್' ಎಂಬ ಶಬ್ದಕ್ಕೂ ಅಲ್ಲಿನ ಮಾರ್ಕೆಟ್ ಕೂಲಿ ಮಾಫಿಯಾದ ಒಬ್ಬೊಬ್ಬರೇ ದೊರೆಗಳು ಕೊಲೆಯಾಗುತ್ತಾ ಬಂದಿದ್ದಕ್ಕೂ ಏನು ಸಂಬಂಧವೋ ಬಲ್ಲವರ್‍ಯಾರು?

ಬಹುಶಃ ಕೃಷ್ಣರಾಜೇಂದ್ರ ಮಾರುಕಟ್ಟೆ ಇಲ್ಲದೇಹೋಗಿದ್ದರೆ ಕಲಾಸಿಪಾಳ್ಯ ನೆಟ್ಟಗಿರುತ್ತಿತ್ತಾ? ಅಲ್ಲಿನ ತರಕಾರಿ ಮಾರುಕಟ್ಟೆಯೊಂದೇ ಈ ಪಾಟಿ ರಕ್ತಪಾತಕ್ಕೆ ಮೂಲವಾಯಿತಾ? ಮೊನ್ನೆಯಷ್ಟೇ ಕೊಲೆಯಾದ ಗೇಟ್ ಗಣೇಶ ಬಡ ಕೂಲಿಗಳ ಬೆವರಿನ ಲೂಟಿಗೆ ನಿಲ್ಲದಿರುತ್ತಿದ್ದರೆ ಬದುಕಿರುತ್ತಿದ್ದನಾ? ಈಗ ಗಣೇಶನನ್ನು ಕೊಲ್ಲಿಸಿ ದೊರೆ ಪಟ್ಟಕ್ಕೆ ಬಂದ ಮಾರ್ಕೆಟ್ ವೇದಿ ಎಂಬ ಸೈಲೆಂಟ್ ಸುನೀಲನ ಶಿಷ್ಯ ಕೊಲೆಯಾಗದೇ ಉಳಿಯುತ್ತಾನಾ? ಅಷ್ಟಕ್ಕೂ ಕಲಾಸಿಪಾಳ್ಯದ ಪೊಲೀಸ್ ಇನ್ಸ್‌ಪೆಕ್ಟರ್ ಗೋಪಾಲ್ ರೆಡ್ಡಿಯವರನ್ನು ಪೊಲೀಸ್ ಕಮೀಷನರ್ ಶಂಕರ್ ಬಿದರಿ ಸಸ್ಪೆಂಡ್ ಮಾಡಿದ್ದಾದರೂ ಏಕೆ?

ಇಂಥ ಅನೇಕ ಗುಮಾನಿಗಳಿಗೂ ಇತ್ತೀಚೆಗಷ್ಟೇ ಕೊಲೆಯಾದ ಕಲಾಸಿಪಾಳ್ಯದ ಕೂಲಿಗಳ ದೊರೆ ಗೇಟ್ ಗಣೇಶನಿಗೂ ಮತ್ತು ಕಲಾಸಿಪಾಳ್ಯಕ್ಕೂ ಪರಸ್ಪರ ಸಂಬಂಧವಿದ್ದೇ ಇದೆ. ಕಲಾಸಿಪಾಳ್ಯ ಎಂಬ ಹೆಸರು ಹೇಗೆ ಬಂತೆಂಬುದಕ್ಕಿಂತಲೂ ಅದರೊಳಗಿನ 'ಖಲಾಸ್' ಎಂಬ ಶಬ್ದವೇ ಹೆಚ್ಚು ಗುಡುಗುವಂತಾಗಿದ್ದು ಅಲ್ಲಿನ ಕೂಲಿ ದೊರೆಗಳ ಸರಣಿ ಹತ್ಯೆಯಿಂದ. ಬಹುಶಃ ಕಲಾಸಿಪಾಳ್ಯದಲ್ಲಿರುವ ಬೃಹತ್ ತರಕಾರಿ ಮಂಡಿಯ ಹಕೀಕತ್ತು ಬೆಂಗಳೂರಿನ ಅನೇಕರಿಗೆ ಗೊತ್ತಿರಲಿಕ್ಕಿಲ್ಲ. ಹಿಂದೆ ಕೆ.ಆರ್. ಮಾರುಕಟ್ಟೆಯ ಅವಿಭಾಜ್ಯ ಅಂಗವಾಗಿದ್ದ ತರಕಾರಿ ಮಾರುಕಟ್ಟೆಯನ್ನು 1991ರ ಹೊತ್ತಿಗೆ ಕಲಾಸಿಪಾಳ್ಯದ ಬಂಬೂಬಜಾರಿನಿಂದಾಚೆಗಿನ ಪ್ರದೇಶಕ್ಕೆ ಸ್ಥಳಾಂತರಿಸಲಾಯ್ತು. ಆದರೆ ಇದಕ್ಕೂ ಮೊದಲೇ ಇಬ್ಬರು ಕೂಲಿ ದೊರೆಗಳು ಕೊಲೆಯಾಗಿ ಹೋಗಿದ್ದರು.




ಅದು ಕಲಾಸಿಪಾಳ್ಯದ ಕರ್ಮವೋ ಅಥವಾ ಅಲ್ಲಿನ ಬಡ ಕೂಲಿಗಳ ಕಣ್ಣೀರಿನ ಶಾಪವೋ ಗೊತ್ತಿಲ್ಲ, ಯಾರೆಲ್ಲ ಅಲ್ಲಿನ ಕೂಲಿಗಳ ದೊರೆಯಾಗಲು ಬಂದರೋ ಅವರ್‍ಯಾರೂ ಐದು ವರ್ಷದ ತನಕ ಕೂಡ ಬದುಕುಳಿಯಲಿಲ್ಲ. ಅದನ್ನೇ ಕೂಲಿ ಮಾಫಿಯಾ ಎನ್ನುತ್ತಾರೆ. ಆದರ ದೊರೆಯಾದವನಿಗೆ ಕುಂತಲ್ಲೇ ದಿನಕ್ಕೆ ಕನಿಷ್ಠ 25 ಸಾವಿರ ರೂಪಾಯಿಗಳಷ್ಟು ರೊಕ್ಕ ಬಂದು ಸೇರುತ್ತದೆಯೆಂದರೆ ತಿಂಗಳಿಗದೇ ಏಳೂವರೆ ಲಕ್ಷವಾಯಿತು. ಅಂದರೆ ವರ್ಷಕ್ಕೆ ಹೆಚ್ಚೂಕಮ್ಮಿ ಒಂದು ಕೋಟಿ!

ಬಡ ಕೂಲಿಗಳ ಬೆವರಿನ ಕೊಳ್ಳೆಯೊಂದರಿಂದಲೇ ಈ ಪಾಟಿ ದುಡ್ಡು ಸೇರುತ್ತದೆ ನಿಜ. ಆದರೆ ಇದರಲ್ಲಿ ಪೊಲೀಸರಿಗೂ ಪಾಲಿದೆ. ಚಾಮರಾಜಪೇಟೆಗೆ ಯಾರು ಎಮ್ಮೆಲ್ಲೆಯಾಗುತ್ತಾರೋ ಆತನ ಮೂಗಿನ ನೇರಕ್ಕೆ ಮಾರ್ಕೆಟ್ ಕೂಲಿಗಳ ಶೋಷಣೆಯೂ ನಡೆಯುತ್ತಿರುತ್ತದೆ. ವಿಶೇಷವಾಗಿ ಮಾರ್ಕೆಟ್ ಕೂಲಿಗಳ ದೊರೆಯಾದವನೇ ಎಮ್ಮೆಲ್ಲೇ ಸಾಹೇಬನಿಗೆ ಬಲಗೈ ಬಂಟನಂತಿರುತ್ತಾನೆ.

ಹಾಗೇ ಮಾರ್ಕೆಟ್ ದೇವಿ ಉರ್ಫ್ ಆರ್.ವಿ. ದೇವರಾಜ್ ಪಾಲಿಗೆ ನೆಚ್ಚಿನ ಬಂಟನಂತಿದ್ದವನು ಗೇಟ್ ಗಣೇಶ. ಗೇಟ್ ಗಣೇಶನೆಂದರೆ ಇಡೀ ಕಲಾಸಿಪಾಳ್ಯದ ಮಾರುಕಟ್ಟೆಯೇ ಗಡಗಡ ನಡುಗುತ್ತಿತ್ತು. ಒಂದಲ್ಲಾ ಮೂವರು ಕೂಲಿ ದೊರೆಗಳ ಹತ್ಯೆಗೆ ನೇರಕಾರಣನಂತಿದ್ದವನು ಗೇಟ್ ಗಣೇಶ್. ಈತನ ಗುರು ಅಯ್ಯಾಬಾಬು. ಇಲ್ಲಿಗೇ ಐದು ವರ್ಷದ ಹಿಂದೆ ಕಾಯಿಲೆ ಬಿದ್ದು ಸಾಯದೇ ಹೋಗಿರುತ್ತಿದ್ದರೆ ಬಹುಶಃ ಗಣೇಶನೇ ಆತನನ್ನು ಕೊಲ್ಲಿಸಿಬಿಡುತ್ತಿದ್ದ!

ಅಯ್ಯಾಬಾಬು ಸುದೀರ್ಘಕಾಲದ ತನಕ ಕೂಲಿಗಳ ಪಾಲಿಗೆ ದೊರೆಯಾಗಿದ್ದಾತ. ಇಡೀ ಕೂಲಿ ಮಾಫಿಯಾದ ತಿರುಳಿಷ್ಟೆ. ರಾಜ್ಯದ ಬೇರೆ ಬೇರೆ ಭಾಗಗಳಿಂದ ತರಕಾರಿ ಮೂಟೆಗಳನ್ನು ಹೊತ್ತ ಲಾರಿಗಳೆಲ್ಲ ಬೆಳ್ಳಂಬೆಳಗ್ಗೆಯ ಹೊತ್ತಿಗೆ ಕಲಾಸಿಪಾಳ್ಯದ ತರಕಾರಿ ಮಾರುಕಟ್ಟೆಗೆ ಬರುತ್ತವೆ. ಇಂಥ ಲಾರಿಗಳಿಂದ ಮೂಟೆಗಳನ್ನು ಇಳಿಸಲೆಂದೇ ನೂರಾರು ಕೂಲಿಗಳು ಕಲಾಸಿಪಾಳ್ಯದಲ್ಲಿದ್ದಾರೆ. ಹೀಗೆ ಕೂಲಿಯೊಬ್ಬ ಲಾರಿಯಿಂದ ಒಂದು ಮೂಟೆಯನ್ನು ಇಳಿಸಿದನೆಂದರೆ ಆದಕ್ಕಾತನಿಗೆ ಹತ್ತು ರೂಪಾಯಿ ಗಿಟ್ಟುತ್ತದೆ. ಆದರೆ ಈ ಹತ್ತು ರೂಪಾಯಿಯಲ್ಲಿ ನಾಲ್ಕು ರೂಪಾಯಿಯನ್ನು ಆತ ಮಾಫಿಯಾ ದೊರೆಗೆ ಕೊಡಲೇಬೇಕು!

ಇದು ಕಲಾಸಿಪಾಳ್ಯದ ತರಕಾರಿ ಮಾರುಕಟ್ಟೆಯ ಚಂಡಶಾಸನ. ಮೇಲುನೋಟಕ್ಕಷ್ಟೇ ಯಾವುದೋ ಕೂಲಿಕಾರ್ಮಿಕರ ಸಂಘದ ಹೆಸರಿರುತ್ತದೆ. ಅದರ ಸೋಕಾಲ್ಡ್ ಅಧ್ಯಕ್ಷನೆಂಬ ಹೆಸರಿನಲ್ಲಿರುವ ಕೂಲಿಗಳ ಅಧಿಪತಿಯೇ ಪ್ರತಿ ಮೂಟೆಯ ಪಾಲಾದ ನಾಲ್ಕು ರೂಪಾಯಿಯನ್ನು ಜೇಬಿಗಿಳಿಸುತ್ತಾನೆ. ನೂರು ಮೂಟೆಗೆ ನಾನೂರು ರೂಪಾಯಿ, ಹತ್ತು ಮೂಟೆಗೆ ನಲವತ್ತು ರೂಪಾಯಿ ಲೆಕ್ಕದಂತೆ ವಸೂಲಾಗುವ ಕೂಲಿಗಳ ಬೆವರಿನ ದುಡ್ಡು ಅಂತಿಮವಾಗಿ ಮಾಫಿಯಾ ದೊರೆಗೆ ದಿನವೊಂದಕ್ಕೆ ಕನಿಷ್ಠ 25 ಸಾವಿರ ರೂಪಾಯಿಗಳ ಗಂಟಾಗುತ್ತದೆ. •



ಗೇಟ್ ಗಣೇಶ

ಇದು ವಸೂಲಾಗುವ ಬಾಬ್ತಿನಲ್ಲಿ ಒಂದು ಪಾಲಷ್ಟೆ. ವಸೂಲಿ ಮಾಡಲೆಂದೇ, ಹತ್ತಾರು ಮಂದಿ ಪುಡಿ ರೌಡಿಗಳಿರುತ್ತಾರೆ. ಅವರನ್ನು 'ಸೂಪರ್‌ವೈಸರ್' ಗಳೆನ್ನಲಾಗುತ್ತದೆ. ಪೊಲೀಸರಿಗೆ, ಪಾಲಿಕೆ ಅಧಿಕಾರಿಗಳಿಗೆ, ರೌಡಿಗಳಿಗೆ ಎಲ್ಲರಿಗೂ ಪಾಲನ್ನು ಎತ್ತಿಟ್ಟು ಕೂಲಿಗಳ ದೊರೆಯಾದವನು ಸಂಭಾಳಿಸತಕ್ಕದ್ದು. ಇದರಲ್ಲಿ ಕೊಂಚ ಯಡವಟ್ಟಾದರೂ ದೊರೆಯ ಹೆಣ ಬೀಳುವುದು ಗ್ಯಾರಂಟಿ.

ಇಂಥ ಅಪಾಯಕಾರಿ ಜಾಲಕ್ಕೆ ಮೊದಲು ಬಲಿಯಾದವನು ರಾಮಣ್ಣ ಉರ್ಫ್ ಭಟ್ರು ಎಂಬ ಮಂಡ್ಯ ಮೂಲದ ಕೂಲಿ ದೊರೆ. ಒಂದಾನೊಂದು ಕಾಲಕ್ಕೆ ಮಂಡ್ಯದಿಂದ ಬರಿಗೈಯಲ್ಲಿ ಬಂದು ಮಾರುಕಟ್ಟೆಯ ಕೂಲಿಯಾಗಿದ್ದ ಭಟ್ರು ಕ್ರಮೇಣ ಕೂಲಿಗಳ ಸಾಮ್ರಾಜ್ಯಕ್ಕೆ ಅಧಿಪತಿಯಾದ. ಬಹುಶಃ ಅದು 1990ರ ಕಾಲ. ಆವತ್ತು ಕೆ.ಆರ್. ಮಾರುಕಟ್ಟೆ ಈ ಪಾಟಿ ಬೆಳೆದಿರಲಿಲ್ಲ, ಆದರೆ ಕೂಲಿಗಳಿಂದ ಸಂಗ್ರಹಗೊಳ್ಳುತ್ತಿದ್ದ ದುಡ್ಡಿತ್ತಲ್ಲ; ಅದು ಭಟ್ರು ಎಂಬಾತನ ತಲೆ ತಿರುಗಿಸಿತು. ಅದೇ ಹೊತ್ತಿಗೆ ಅಯ್ಯೂಬ್ ಎಂಬ ಮತ್ತೊಬ್ಬ ದೈತ್ಯ ಕೂಲಿಯೊಬ್ಬ ತಲೆಯೆತ್ತಿಕೊಂಡಿದ್ದ. ಆತ ರೌಡಿ. ಕೂಲಿಗಳ ಬೆವರಿನ ಕೊಳ್ಳೆಯಲ್ಲಿ ತನಗೂ ಪಾಲು ಕೊಡುವಂತೆ ಅಯ್ಯೂಬ್ ಹೂಂಕರಿಸಿದ್ದಕ್ಕೆ ಭಟ್ರು ರಾಮಣ್ಣ ಸೊಪ್ಪು ಹಾಕಲಿಲ್ಲ. ಅಷ್ಟೇ; ಅದೊಮ್ಮೆ ಲಾಲ್‌ಬಾಗ್‌ನಲ್ಲಿ ನಡೆದುಬರುತ್ತಿದ್ದ ಭಟ್ರುನನ್ನು ಹಿಡಿದದ್ದೇ ಅಯ್ಯೂಬ್ ಕತ್ತರಿಸಿ ಹಾಕಿದ.

ಅದು ಕಲಾಸಿಪಾಳ್ಯದ ಕೂಲಿ ರಾಜ್ಯಕ್ಕಾಗಿ ನಡೆದ ಮೊದಲ ಕೊಲೆ. ಒಂದೂವರೆ ವರ್ಷ ಜೈಲಲ್ಲಿದ್ದ ರೌಡಿ ಅಯ್ಯೂಬ್ ಹೊರಬಂದವನೇ ನೇರವಾಗಿ ಮಾರುಕಟ್ಟೆಗೇ ಬಂದ. ಪಕ್ಕದಲ್ಲೇ ಇದ್ದ ರೋಷನ್ ಲಾಡ್ಜಿನಲ್ಲಿ ರೂಂ ಒಂದನ್ನು ಬಾಡಿಗೆಗೆ ಹಿಡಿದ. ಪಕ್ಕದಲ್ಲೇ ಇನ್ನೂ ನಾಲ್ಕು ರೂಮುಗಳನ್ನು ಹಿಡಿದು ಒಂದೊಂದು ರೂಮಿನಲ್ಲಿ ತನ್ನ ಒಬ್ಬೊಬ್ಬಳು ಹೆಂಡತಿಯನ್ನಿಟ್ಟ. ಕೂಲಿ ದೊರೆ ಪಟ್ಟಕ್ಕೆ ಬಂದಿದ್ದ ಅಯ್ಯೂಬ್‌ನ ಆದಾಯ ಜೋರಾಗಿತ್ತು. ಕುಡಿತದ ಸೊಕ್ಕಿಗೆ ಬಿದ್ದು ಪದೇಪದೇ ಕೂಲಿಗಳನ್ನು ಹಿಡಿದು ಹೊಡೆಯುತ್ತಿದ್ದ. ತನಗೆ ರೂಮು ಕೊಟ್ಟಿದ್ದ ರೋಷನ್ ಲಾಡ್ಜಿನವರಿಗೂ ಕಾಟ ಕೊಟ್ಟ.


ಅದೇ ಆತನಿಗೆ ಮುಳುವಾಯಿತು. 1995ರ ಸೆಪ್ಟೆಂಬರ್ ತಿಂಗಳಲ್ಲಿ ರೋಷನ್ ಲಾಡ್ಜಿನ ತನ್ನ ಕೋಣೆಯಲ್ಲಿ ಕುಡಿದು ಚಿತ್ತಾಗಿದ್ದ ಅಯ್ಯೂಬ್‌ನನ್ನು ಗೇಟ್ ಗಣೇಶ, ಅಯ್ಯಾಬಾಬು, ಬೇಬಿ ಕೃಷ್ಣ ಮತ್ತು ಶೆಟ್ಟಿ ಸುಂದರ್ ಮುಂತಾದವರೆಲ್ಲ ಸೇರಿಕೊಂಡು ಇರಿದು ಕೊಂದರು. ಈ ಬಾರಿ ಇಡೀ ಹಂತಕ ಪಡೆಯ ನೇತೃತ್ವವನ್ನು ಅಯ್ಯಾಬಾಬು ವಹಿಸಿಕೊಂಡಿದ್ದ. ಅಯ್ಯೂಬ್‌ನನ್ನು ಕೊಂದು ಇಡೀ ಗ್ಯಾಂಗ್ ಜೈಲು ಪಾಲಾಗಿದ್ದನ್ನೇ ಕಾದು ಕೂತಿದ್ದ ಕೋಳಿ ಜುಟ್ಟು ಶಂಕ್ರ ಎಂಬ ಮತ್ತೊಬ್ಬ ಕೂಲಿ ತಾನೇ ಕೂಲಿಗಳ ದೊರೆ ಎಂದು ಘೋಷಿಸಿಕೊಂಡ. ಇದು ಗೊತ್ತಾಗಿದ್ದೇ ಜೈಲಲ್ಲಿದ್ದ ಅಯ್ಯಾಬಾಬು ಕೆರಳಿದ. ತನ್ನಿಡೀ ತಂಡವನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಾಗುವಂತೆ ಮಾಡಿ ಅಲ್ಲಿಗೆ ಕೋಳಿ ಜುಟ್ಟು ಶಂಕ್ರನನ್ನು ಕರೆಸಿಕೊಂಡು ತನಗೂ ಪಾಲುಕೊಡುವಂತೆ ಗದರಿದ.

ಹುಂಬ ಕೋಳಿ ಜುಟ್ಟು ಅಯ್ಯಾಬಾಬುಗೆ ತಿರುಗಿಬಿದ್ದು "ನಿನ್ನ ಕೈಲೇನಾಗುತ್ತೋ ಮಾಡಿಕೋ" ಎಂದು ಬಿಟ್ಟ. ಇದಾದ ಆರು ತಿಂಗಳಲ್ಲಿ ಅಯ್ಯೂಬ್‌ನ ಅಷ್ಟೂ ಹಂತಕರು ಜೈಲಿಂದ ಹೊರಬಿದ್ದರು. ಬಂದಿನ್ನೂ ವಾರ ಕಳೆಯುವ ಮೊದಲೇ ಎರಡನೇ ಹತ್ಯೆಗೆ ಕೈಯಿಟ್ಟರು. ತನ್ನ ಮಾರುತಿ 800 ಕಾರಿನಲ್ಲಿ ಕಲಾಸಿಪಾಳ್ಯದ ಸಾರಾಯಿ ಅಂಗಡಿ ಬಳಿ ಕಬಾಬ್ ಕಟ್ಟಿಸಿಕೊಳ್ಳುತ್ತಿದ್ದ ಜುಟ್ಟು ಶಂಕ್ರನನ್ನು ಗೇಟ್ ಗಣೇಶ, ಬೇಬಿ ಕೃಷ್ಣ, ಗಣೇಶನ ಶಿಷ್ಯರಾದ ಕುಮಾರ, ಪುಳ್ಳೆ, ಮಣಿ, ಗೋಪಾಲ ಮುಂತಾದವರು ಸೇರಿ ಕೊಚ್ಚಿಬಿಟ್ಟರು. ನಡುರಸ್ತೆಯಲ್ಲೇ ಹೆಣವಾದ ಕೋಳಿ ಜುಟ್ಟು ಶಂಕ್ರ ಹೆಚ್ಚೆಂದರೆ ಒಂದು ವರ್ಷ ಕೂಲಿ ದೊರೆಯಾಗಿದ್ದು ಬಿಟ್ಟರೆ ಆತನ ಕೊಲೆ ಕೇಸು ಕೂಡ ನಿಲ್ಲಲಿಲ್ಲ.

ಕಲಾಸಿಪಾಳ್ಯ ಪೊಲೀಸರು ಜುಟ್ಟು ಶಂಕ್ರನ ಕೊಲೆ ಕೇಸಿನಲ್ಲಿ ಅಯ್ಯಾಬಾಬುವನ್ನಾಗಲೀ, ಗಣೇಶನನ್ನಾಗಲಿ,

ಕೃಷ್ಣನನ್ನಾಗಲಿ ಬಂಧಿಸಲೇ ಇಲ್ಲ, ಒಂದಷ್ಟು ಮಂದಿ ...ವಾರಿಗಳನ್ನು ಜೈಲಿಗೆ ದಬ್ಬಿ ಅವರೇ ಕೊಂದಿದ್ದಾರೆಂದು ತಿಪ್ಪೆ ...ಬಿಟ್ಟರು. ಮುಂದೆ ಜುಟ್ಟು ಶಂಕ್ರನ ಜಾಗಕ್ಕೆ ಬಂದವನು ಬೇಬಿ

...ಅಯ್ಯಾಬಾಬುವೇ ನಿಂತು ಬೇಬಿ ಕೃಷ್ಣನಿಗೆ ಪಟ್ಟಾಭಿಷೇಕ ಮಾಡಿದ್ದ. ...ತ್ತಿಗಾಗಲೇ ತರಕಾರಿ ಮಾರುಕಟ್ಟೆ, ಕೆ.ಆರ್. ಮಾರುಕಟ್ಟೆಯಿಂದ ...ಪಾಳ್ಯದ ಸಾರಾಯಿ ಅಂಗಡಿ ಪಕ್ಕಕ್ಕೆ ಬಂದಾಗಿತ್ತು. ಹಳೇ ...ಕಟ್ಟೆಯಲ್ಲೇ ಉಳಿದಿದ್ದ ಸಪೋಟ ಮಂಡಿ, ಹೂ ಮಂಡಿ, ... ಮಂಡಿಗಳನ್ನೆಲ್ಲ ಗೇಟ್ ಮೂರ್ತಿ ಎಂಬಾತನಿಗೆ ಅಯ್ಯಾಬಾಬು ...ದ. ಹಾಗೆ ತರಕಾರಿ ಮಾರುಕಟ್ಟೆಯನ್ನು ಬೇಬಿ ಕೃಷ್ಣನಿಗೆ ಒಪ್ಪಿಸಿದ್ದ. ...ಣಾ ತಮ್ಮ ವಸೂಲಿಯ ಅರ್ಧವನ್ನು ಅಯ್ಯಾಬಾಬುವಿಗೆ ...ಕ್ಕದ್ದು.



...ದರೆ ಬೇಬಿ ಕೃಷ್ಣ ಷರತ್ತನ್ನು ಉಲ್ಲಂಘಿಸಿ ...ವಿಗೆ ಕೊಡಬೇಕಿದ್ದ ಪಾಲನ್ನೇ ನಿಲ್ಲಿಸಿಬಿಟ್ಟ. ...2002ರ ಮಾರ್ಚ್ ತಿಂಗಳು. ದಿನ ...ಮಂತೆ ಕಲಾಸಿಪಾಳ್ಯದ ಮಾರುಕಟ್ಟೆಗೆಂದು ... ಹತ್ತಿ ಬಂದಿಳಿದ ಬೇಬಿ ಕೃಷ್ಣನನ್ನು ... ಗೇಟ್ ಗಣೇಶನ ಗ್ಯಾಂಗ್ ಕೊಚ್ಚಿ ...ತ್ತು. ಅಯ್ಯಾಬಾಬು, ಗೇಟ್ ಗಣೇಶ, ... ಮಂಜು, ರವಿ, ವಿಜಿ, ಅಪ್ಪು ...ಬು ಮತ್ತು ವೇಲು ಮುಂತಾದವರೆಲ್ಲ ಬೇಬಿ ...ಕೊಲೆ ಕೇಸಲ್ಲಿ ಜೈಲು ಪಾಲಾದರಾದರೂ ... ತಿಂಗಳಲ್ಲಿ ಜಾಮೀನು ಗಿಟ್ಟಿಸಿಹೊರಬಿದ್ದರು.

...ಲಿಂದ ಬಂದಿದ್ದೇ ಇಡೀ ಕಲಾಸಿಪಾಳ್ಯದ ...ಕಟ್ಟೆಯನ್ನು ಗೇಟ್ ಗಣೇಶ ವಹಿಸಿಕೊಂಡ. ...ಮೂರೇ ವರ್ಷಕ್ಕೆ ಅಯ್ಯಾಬಾಬು ...ದ್ದ. ಇಲ್ಲದ ಕಾಯಿಲೆಗಳಿಂದ ಬಳಲುತ್ತಿದ್ದ ...ಬಾಬು ತನ್ನ ಪಕ್ಕಾ ಶಿಷ್ಯ ಗೇಟ್‌ಗಣೇಶನನ್ನು ...ಮೂವರು ಕೂಲಿ ದೊರೆಗಳನ್ನು ನಿಕಾಲಿ ...ದ್ದ. ಆತ ಬದುಕಿದ್ದಷ್ಟೂ ಕಾಲ ತನ್ನ ...ಯ ಅರ್ಧಪಾಲನ್ನು ತಪ್ಪದೇ ಗೇಟ್‌ಗಣೇಶ ...ಸುತ್ತಿದ್ದ. ಬಾಬು ಸತ್ತ ನಂತರ ಆತನ ಪಾಲು ಗಣೇಶನಿಗೆ ...ಯುತ್ತಿತ್ತು. ದಿನವೊಂದಕ್ಕೆ ಕಮ್ಮಿಯೆಂದರೂ 25 ಸಾವಿರ ...ಯು!

...ದ ಬಿಟ್ಟಿ ದುಡ್ಡು ಗೇಟ್ ಗಣೇಶನನ್ನು ಯಾವ ...ಕ್ಕೇರಿಸಿತ್ತೆಂದರೆ, ತನ್ನ ಹುಟ್ಟೂರು ತಮಿಳುನಾಡಿನ ...ಕೋಟೆಯಲ್ಲಿ ನಟ ವಿಜಯಕಾಂತ್ ಪಕ್ಷದಿಂದ ಗೆದ್ದು ಪಂಚಾಯತಿ ...ದ. ಅದಕ್ಕೂ ಮುನ್ನ ಆರ್.ವಿ.ದೇವರಾಜ್ ಅಭಿಮಾನಿಗಳ ... ಅಧ್ಯಕ್ಷನಾಗಿ ಗೇಟ್ ಗಣೇಶ ಇಡೀ ಕಲಾಸಿಪಾಳ್ಯವನ್ನೇ ...ಸಿದ್ದ ಪ್ರತಿ ಚುನಾವಣೆ ಬಂತೆಂದರೆ ಕಲಾಸಿಪಾಳ್ಯದ ಸುತ್ತಮುತ್ತಲ ...ಗಳನ್ನೆಲ್ಲ ದೇವಿಯ ಪರ ಕವರ್ ಮಾಡುತ್ತಿದ್ದ. ದೇವಿಯ ...ಲ್ಲ ಬಂಟ ಪೂಣೆಯ ನಿಯತ್ತಿಗೆ ಬಿದ್ದು ಕಪಾಲಿ ಆನಂದನ ...ಯ್ದ. ತನ್ನ ಹುಟ್ಟೂರು ಪುದುಕೋಟೆಯ ಬಳಿ ನೂರೆಕರೆಯಷ್ಟು ... ಖರೀದಿಸಿ ಅಲ್ಲಿ ಸ್ವಿಮ್ಮಿಂಗ್‌ಪೂಲ್ ಸಹಿತ ಬಂಗಲೆ ...ಂಡ. ಮಾರ್ಕೆಟ್ ದೇವಿ ಇರುವಾಗ ತನ್ನನ್ನು ಯಾರೇನೂ ಮಾಡಲು ಸಾಧ್ಯವಿಲ್ಲ ಎಂದು ಗಣೇಶ್ ಲೆಕ್ಕ ಹಾಕಿದ್ದ. ತಾನು ಬದುಕಿರುವಷ್ಟೂ ಕಾಲ ಕಲಾಸಿಪಾಳ್ಯದ ಕೂಲಿ ಮಾಫಿಯಾಕ್ಕೆ ತಾನೇ ದೊರೆ ಎಂದುಕೊಂಡಿದ್ದ. ಆದರೆ ತನ್ನ ಸಾವೆಂಬುದು ತನ್ನ ಕಾಲಬುಡದಲ್ಲೇ ಚಿಗುರೊಡೆಯುತ್ತಿದೆ ಎಂಬುದು ಮಾತ್ರ ಆತನಿಗೆ ಗೊತ್ತಾಗಲೇ ಇಲ್ಲ.

ಆ ಸಾವಿನ ಹೆಸರೇ ಮಾರ್ಕೆಟ್ ವೇದಿ. ಗೇಟ್ ಗಣೇಶನಿಗೂ ಮುನ್ನ ಕೂಲಿಗಳ ದೊರೆಯಾಗಿದ್ದ ಬೇಬಿ ಕೃಷ್ಣನ ಪಕ್ಕಾ ಶಿಷ್ಯನೇ ಮಾರ್ಕೆಟ್ ವೇದಿ. ಸೈಲೆಂಟ್ ಸುನೀಲನ ಪಡೆಯಲ್ಲಿ ಒಂಟೆ ಬಿಟ್ಟರೆ ನಂತರದ ಹೆಸರೇ ಈತನದ್ದು. ಆ ಕಾಲಕ್ಕೆ ಸುನೀಲನನ್ನು ಕರೆಸಿ ಅಡ್ಡೆ ಹಾಕುತ್ತಿದ್ದ ವೇದಿ ಕ್ರಮೇಣ ಗೇಟ್ ಗಣೇಶನ ಅಡ್ಡೆಯ ಪಕ್ಕಕ್ಕೆ ತನ್ನದೊಂದು ಆಫೀಸ್ ತೆರೆದ. ಗಣೇಶ ಕೂಲಿಗಳ ಬೆವರಿಗೆ ಕೈಯಿಟ್ಟರೆ ವೇದಿ ಮಾರುಕಟ್ಟೆಗೆ ಬರುವ ಪ್ರತಿ ಲಾರಿಯೂ ತನಗೆ ಐವತ್ತು ರೂಪಾಯಿ ಕೊಡಬೇಕೆಂಬ ಕಾನೂನನ್ನು ಜಾರಿಗೆ ತಂದ.

ಯಾವತ್ತು ತನ್ನ ಅಡ್ಡೆಯ ಪಕ್ಕದಲ್ಲೇ ವೇದಿಯೂ ಬಂದು ಕೂತಿದ್ದಾನೆಂಬುದು ಗೊತ್ತಾಯಿತೋ ಆಗಲೇ ಗಣೇಶ ಹುಷಾರಾಗಬೇಕಿತ್ತು. ಪಾಪದ ದುಡ್ಡಿನ್ನು ಸಾಕು ಎಂದು ಕೈ ತೊಳೆದುಕೊಂಡಿದ್ದರೆ ಖಂಡಿತಾ ಬದುಕಿರುತ್ತಿದ್ದ. ಆದರೆ ದುರಾಶೆಯಿತ್ತಲ್ಲ. ತಿಂಗಳಿಗೊಮ್ಮೆ ಬಂದು ತನ್ನ ಪಾಲನ್ನು ಹೊತ್ತೊಯ್ಯುತ್ತಿದ್ದದ್ದು ಬಿಟ್ಟರೆ ಮಿಕ್ಕಂತೆ ಗಣೇಶ ಷೋಕಿಯಲ್ಲೇ ಕಾಲ ಕಳೆದ. ಐದಾರು ಐಷಾರಾಮಿ ಕಾರುಗಳು, ವಿಪರೀತ ಹೆಂಗಸರ ಷೋಕಿ, ದುಬಾರಿ ಬಟ್ಟೆ ಮತ್ತು ಊಟ-ಕುಡಿತದಲ್ಲೇ ಮುಳುಗಿದ ಗಣೇಶ ತನ್ನ ಕಷ್ಟಕಾಲಕ್ಕಾದ ಗೆಳೆಯರನ್ನೆಲ್ಲ ಮರೆತು ತನ್ನದೇ ಷೋಕಿಯಲ್ಲಿ ಮೈಮರೆತ.

ಸಾವು ಸದ್ದಿಲ್ಲದೇ ಹಿಂಬಾಲಿಸುತ್ತಲೇ ಇತ್ತು. ಯಾರೆಲ್ಲ ತನ್ನ ನಂಬಿಕಸ್ಥರೆಂದು ಕೂಲಿಗಳ ಗಳಿಕೆಯನ್ನು ವಸೂಲಿ ಮಾಡಲು ಗಣೇಶ್ ನೇಮಿಸಿಕೊಂಡಿದ್ದನೋ ಅವರೇ ಗಣೇಶನ ವಿರುದ್ಧ ಕತ್ತಿ ಮಸೆಯುತ್ತಿದ್ದರು. ಅದಕ್ಕೆ ಕಾರಣನಾದವನು ವೇದಿ. "ನೀವೆಲ್ಲ ಕಷ್ಟಪಟ್ಟು ಕಲೆಕ್ಷನ್ ಮಾಡಿಕೊಟ್ಟರೆ ಗಣೇಶ ಕುಂತಲ್ಲೇ ಷೋಕಿ ಮಾಡ್ತಾನೆ. ನಿಮಗೆ ಬಂದ ಲಾಭವಾದರೂ ಏನು? ಅದೇ ನನ್ನ ಜೊತೆ ಬನ್ನಿ. ನಿಮಗೆ ಅರ್ಧಪಾಲು ಕೊಡುತ್ತೇನೆ" ಎಂದಿದ್ದಾನೆ ವೇದಿ.

ಏನೆಂದರೂ ಪಾಪದ ದುಡ್ಡು. ದುರಾಶೆಗೆ ಬಿದ್ದ ಗೇಟ್ ಗಣೇಶನ ಶಿಷ್ಯರೇ ತಿರುಗಿಬಿದ್ದು ಅಂತಿಮವಾಗಿ ಗೇಟ್ ಗಣೇಶನನ್ನು ಮುಗಿಸಿದ್ದಾರೆ. ಯಾವ ಕೂಲಿ ಮಾಫಿಯಾದ ದೊರೆ ಪಟ್ಟಕ್ಕಾಗಿ ಮೂರು ಅನಾಹುತಕಾರಿ ಕೊಲೆಗಳನ್ನು ಗಣೇಶ ಮಾಡಿದ್ದನೋ ಅದೇ ಕಾರಣಕ್ಕಾಗಿ ಕೊನೆಗೆ ತನ್ನ ಶಿಷ್ಯರಿಂದಲೇ ಹೆಣವಾದ ಗೇಟ್ ಗಣೇಶ ಕಲಾಸಿಪಾಳ್ಯದ ಕತೆಯಲ್ಲಿ ಖಂಡಿತಾ ಕೊನೆಯವನಲ್ಲ.

ಅಸಹಾಯಕ ಕೂಲಿಗಳ ಬೆವರಿನ ಲೂಟಿ ನಿಲ್ಲುವತನಕ ಕೊಲ್ಲುವ ಸರಣಿ ಮುಗಿಯುವುದಿಲ್ಲ. ■



ವಿಲ್ಸನ್ ಗಾರ್ಡನ್ನಿನ ಶರವಣನೂ, ಟೊಮಾಟೋ ಮಂಡಿಯ ಏಳುಮಲೆಯೂ....!

ಗೇಟ್ ಗಣೇಶನ ಹತ್ಯೆಯ ಪ್ರಮುಖ ಆರೋಪಿ ಶರವಣನನ್ನು ಉದ್ದೇಶಪೂರ್ವಕವಾಗಿ ಬಂಧಿಸಲಿಲ್ಲ ಎಂಬ ಒಂದೇ ಕಾರಣಕ್ಕೆ ಕಲಾಸಿಪಾಳ್ಯದ ಪೊಲೀಸ್ ಇನ್ಸ್‌ಪೆಕ್ಟರ್ ಗೋಪಾಲ್ ರೆಡ್ಡಿ ಮತ್ತು ವಿಲ್ಸನ್ ಗಾರ್ಡನ್ನಿನ ಇನ್ಸ್‌ಪೆಕ್ಟರ್ ಪಿಸ್ಸೆ ಸಸ್ಪೆಂಡಾಗಿದ್ದಾರೆ.

ಶರವಣ ವಿಲ್ಸನ್ ಗಾರ್ಡನ್ನಿನ ಚಿಲ್ಲರೆ ರೌಡಿ. ಅನೇಕ ಕ್ರಿಮಿನಲ್ ಕೇಸುಗಳಿದ್ದು ಕೋರ್ಟ್ ವಾರಂಟ್ ಇದ್ದರೂ ವಿಲ್ಸನ್ ಗಾರ್ಡನ್ ...ಸರು ಆತನನ್ನು ಹದುಬಸ್ತಿನಲ್ಲಿಡಲಿಲ್ಲ. ಅಷ್ಟಕ್ಕೂ ಈ ಶರವಣ ನಿನ್ನೆ ಮೊನ್ನೆಯತನಕ ಗೇಟ್ ಗಣೇಶನ ಶಿಷ್ಯನಂತಿದ್ದ. ...ಯುತ್ತಿದ್ದ ಈತನನ್ನು ಮಾರ್ಕೆಟ್ಟಿಗೆ ಕರೆತಂದದ್ದು ಕೂಡ ಗೇಟ್ ಗಣೇಶನೇ. ಒಂದಷ್ಟು ದಿನಗಳ ಕಾಲ ಮೂಟೆ ಹೊರುವ ...ಯಾಗಿದ್ದ ಶರವಣನ ತಾಕತ್ತು ನೋಡಿಯೇ ಗಣೇಶ ತನ್ನ ಶಿಷ್ಯನನ್ನಾಗಿ ಮಾಡಿಕೊಂಡ.

...ಗಣೇಶನಿಗೆ ತನ್ನ ಹಿಂದೆಮುಂದೆ ಸುತ್ತಾಡಿಕೊಂಡಿದ್ದು ಪೋಜು ಕೊಡಲು ಒಂದಷ್ಟು ಹುಡುಗರು ಬೇಕಿತ್ತು. ಮೊದಮೊದಲು ...ಣನಿಗೆ ದಿನಕ್ಕೆ ಇನ್ನೂರು ರೂಪಾಯಿ ಕೊಡುತ್ತಿದ್ದ. ಆದರೆ ಶರವಣ ಕಿಲಾಡಿ. ಬರುಬರುತ್ತ 'ಗುರೂ, ನೀನು ಕೊಡೋ ಇನ್ನೂರು ...ಯಿಯಲ್ಲಿ ಹುಡುಗರನ್ನ ಮೇಂಟೇನ್ ಮಾಡೋಕ್ಕಾಗುತ್ತಾ? ದಿನಕ್ಕೆ ಐನೂರು ರೂಪಾಯಿ ಬೇಕೇಬೇಕು, ಎಂದುಬಿಟ್ಟ. ...ಪಕ್ಕೆ ಕೆಂಡಮಂಡಲನಾದ ಗಣೇಶ ಮಾರುಕಟ್ಟೆಯಲ್ಲಿದ್ದ ಎಲ್ಲರೆದುರೇ ಶರವಣನನ್ನು ಹಾಕಿ ತುಳಿದ. ಅದೇ ಹೊತ್ತಿಗೆ ...ಕಟ್ಟೆಗೆ ಬರುವ ಟೊಮಾಟೋ ಗಾಡಿಗಳಿಂದ ವಸೂಲಿ ಮಾಡುವ ಏಳುಮಲೈ ಎಂಬಾತನನ್ನು ನೆಲಕ್ಕೆ ಕೆಡವಿದ ಗಣೇಶ ... ಬೂಟುಗಾಲಲ್ಲಿ ಹಾಕಿ ತುಳಿದ. ಪ್ರತಿನಿತ್ಯ ತನಗೆ ರೋಲ್‌ಕಾಲ್ ಕೊಡುತ್ತಿದ್ದ ಏಳುಮಲೈಗೆ ಇನ್ನೂ ಹೆಚ್ಚಿಗೆ ಕೊಡುವಂತೆ ...ಡಿಸಿದ್ದ. ಆದರೆ ಏಳುಮಲೈ ಅದನ್ನು ತಿರಸ್ಕರಿಸಿದ್ದ. ಯಾವತ್ತು ಏಳುಮಲೈಗೆ ಒದೆಬಿದ್ದಿದ್ದು ಗೊತ್ತಾಯಿತೋ ಸದ್ದಿಲ್ಲದೇ ... ವೇದಿಯನ್ನು ಸಂಪರ್ಕಿಸಿದ್ದಾರೆ. ವೇದಿಯೂ ಒಪ್ಪಿದ್ದಾನೆ. ... ಗಣೇಶನನ್ನೇ ಮುಗಿಸುವ ಸ್ಕೆಚ್ ಹಾಕಿ ದುಷ್ಮನ್ ವೇದಿಯನ್ನು ಸಂಪರ್ಕಿಸಿದ್ದಾರೆ. ... ಒಮ್ಮೆ ಎರಡು ಲಕ್ಷ ಮತ್ತೊಮ್ಮೆ ...ಶನನ್ನು ಮುಗಿಸಿದರೆ ತಾನು ಹತ್ತು ಲಕ್ಷ ಕೊಡುತ್ತೇನೆಂದು ಏಳುಮಲೈ ಭರವಸೆ ಕೊಟ್ಟಿದ್ದಾನೆ. ...ಲಕ್ಷ ಹೀಗೆ ಪದೇಪದೇ ಕಾಸು ಕೊಟ್ಟಿದ್ದಾನೆ ಏಳುಮಲೈ.

...ಅಲಿಯಾಸ್ ಗಾಬ್ರಾ, ಪುರುಷೋತ್ತಮ, ನಂಜಪ್ಪ ಮತ್ತು ವೇಲು ...ವಾಗಿ ತನ್ನ ನಂಬಿಕಸ್ಥರಾದ ಗೋಪಿ, ನಾಗ, ಮುರುಗಾ ...ಮಾಡಿದ ಶರವಣ ಮಾರ್ಚ್ 20 ರ ಶುಕ್ರವಾರ ರಾತ್ರಿ ಕಲಾಸಿಪಾಳ್ಯದ ಸಾರಾಯಿ ...ದಲ್ಲಿ ಗ್ಯಾಂಗ್ ರೆಡಿ ...ಗಣೇಶನನ್ನು ಕತ್ತರಿಸಿ ಹಾಕಿದ್ದಾನೆ. ಶರವಣ ಮತ್ತು ಗೋಪಿ ಈ ಕೇಸಿನ ಪ್ರಮುಖ ಆರೋಪಿಗಳಾದರೆ ಮಾರ್ಕೆಟ್ ...118 ನೇ ಆರೋಪಿ.



ಕುಮಾರಣ್ಣ ಗಣಿ ಗುಂಡಿ ಬಳಿ ಹೋದದ್ದೇಕೆ?

ಕರ್ನಾಟಕದ ಸದ್ಯದ ಸ್ಥಿತಿ ಗೂಂಡೂರಾಯನ ಕಾಲವನ್ನು ನೆನಪಿಗೆ ತರುತ್ತಿದೆಯಂತಲ್ಲಾ. ಹತ್ತಿ ಉರಿಯುತ್ತಿರುವ ಮೈಸೂರು, ಹಳೆ ಗಾಯ ನೆಕ್ಕುತ್ತಿರುವ ಮಂಗಳೂರು, ಬಳ್ಳಾರಿಯಿಂದ ಬೆಂಗಳೂರಿಗೆ ಕಾಲ್ನಡಿಗೆಯಲ್ಲಿ ಬರುತ್ತಿರುವ ರೈತರು, ಬೆಂಗಳೂರಿನಲ್ಲಿ ದಿನಕ್ಕೆರಡರಂತೆ ನಡೆಯುತ್ತಿರುವ ಕೊಲೆಗಳು.... ಇದೆಲ್ಲವನ್ನು ನೋಡಲಾರದ ಯಡವಟ್ಟಪ್ಪ ಮಗ ಚುನಾವಣೆಯಲ್ಲಿ ಗೆದ್ದರೆ ಸಾಕೆಂಬ ತರಾತುರಿಯಲ್ಲಿ ಓಡಾಡುತ್ತಿದ್ದಾರಂತಲ್ಲಾ. ಈ ಓರಾಟದಲ್ಲವರು ಚುನಾವಣೆ ನೀತಿಸಂಹಿತೆ ಎಂಬುದೊಂದಿದೆ ಎಂಬುದನ್ನೆ ಮರೆತು ಮೆರೆಯುತ್ತಿರುವ ಸಂದರ್ಭದಲ್ಲಿ ಮಗ ರಾಘವೇಂದ್ರ "ಬಂಗಾರಪ್ಪನನ್ನು ಕೆಡವಲು ನೂರು ಕೋಟಿ ಸಾಲುವುದಿಲ್ಲ, ಇನ್ನೂ ನೂರು ಕೋಟಿ ಬೇಕು" ಎಂದು ಕೇಳುತ್ತಿರುವಾಗಲೇ ಆತ್ತ 'ಬಂ' ಬರಿಗೈಲಿ ಬಂದು ಭಾಷಣ ಬಿಗಿಯುತ್ತಿದ್ದಾರಂತಲ್ಲಾ, ಥೂತ್ತೇರಿ!

****

ತುಮಕೂರು ವಿ.ವಿ.ಗೆ ಸಿದ್ದಗಂಗಾ ಶ್ರೀಗಳ ಹೆಸರಿಡುವುದಕ್ಕೆ, ಶ್ರೀಗಳೇ ವಿರೋಧಪಡಿಸಿ ಅಚ್ಚರಿ ಮೂಡಿಸಿದ್ದಾರಂತಲ್ಲಾ. ಇದಕ್ಕೆ ಕಾರಣಗಳು ಗೌಪ್ಯವಾಗಿದ್ದು ಬುದ್ಧಿಜೀವಿಗಳ ಊಹೆಯ ಪ್ರಕಾರ "ಈಗಾಗಲೇ ಕುವೆಂಪು ಹೆಸರಿಟ್ಟುಕೊಂಡಿರುವ ವಿ.ವಿ.ಯೊಂದು ಕಳ್ಳರ, ಸುಳ್ಳರ, ಲಫಂಗರ ತಾಣವಾಗಿದೆ. ಜೊತೆಗೆ ಕುವೆಂಪು ವಿರೋಧಿಸಿದ ಪುರೋಹಿತಶಾಹಿಗಳು ಮಾರುವೇಶದಲ್ಲಿ ಬಂದು ಉಪನ್ಯಾಸ ಬೊಗಳಿ ಹೋಗುತ್ತಿದ್ದಾರೆ. 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಎಂದು ಬೋಧಿಸಿದ ಮಹಾಕವಿಯ ಘೋಷಣೆಗೆ ಪ್ರತಿಯಾಗಿ 'ವಿ.ವಿ.ಯಲ್ಲಿ ಆತ್ಮರಕ್ಷಣೆಗಾಗಿ ಉಸಿರೆತ್ತದೆ ಕಾಲಹಾಕಿ' ಎಂಬ ವೇದವಾಕ್ಯ ಜಾರಿಯಲ್ಲಿದೆ. ಇಂತಿರುವಾಗ, ಸಿದ್ದಗಂಗಾ ಶ್ರೀಗಳ ಹೆಸರನ್ನು ತುಮಕೂರು ವಿ.ವಿ.ಗೆ ಇಟ್ಟದ್ದೇ ಆದರೆ ಆಡಳಿತ ಮಂಡಲಿಯಲ್ಲಿ ಸಿದ್ದಗಂಗಯ್ಯ, ಷಡಾಕ್ಷರಿ, ನಿಜಗುಣ, ಚೆಂಬಸಪ್ಪ, ಮಲ್ಲಿಕಾರ್ಜುನ ಎಂಬಿತ್ಯಾದಿ ಹೆಸರಿನ ಶರಣರೇ ತುಂಬಿಕೊಳ್ಳುತ್ತಾರೆ. ಇನ್ನು ಬೋಧಕ ಸಿಬ್ಬಂದಿಯಲ್ಲಿ ಹಿರೇಮಠ, ಹನ್ನೆರಡು ಮಠ, ಮರುಳಸಿದ್ಧ, ನೀಲಕಂಠ, ಶ್ರೀಕಂಠ, ಕಾಯಿಕಂಠ ಎಂಬ ಕಂಠಗಳೇ ತುಂಬಿಕೊಂಡು ಇಡೀ ವಿ.ವಿ. ಕರಡಿಗೆಯಿಂದ ಕಂಗೊಳಿಸಲಿದೆ" ಎಂದರಂತಲ್ಲಾ. ಇದನ್ನೆಲ್ಲಾ ತಮ್ಮ ದಿವ್ಯಜ್ಞಾನದಿಂದ ಪತ್ತೆಹಚ್ಚಿರುವ ಶ್ರೀಗಳು "ಖಂಡಿತ ತುಮಕೂರು ವಿ.ವಿ.ಗೆ. ನನ್ನ ಹೆಸರಿಡಬೇಡಿ" ಎಂದು ಹೇಳಿರುವುದು ಎಷ್ಟು ಸೂಕ್ತವಲ್ಲವೆ, ಥೂತ್ತೇರಿ!!

ಥೂತ್ತೇರಿ
» ಯಾಹೂ

****

ಲೋಕಸಭಾ ಚುನಾವಣೆ ಘೋಷಣೆಯಾಗಿ, ಸಂಬಂಧಪಟ್ಟ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿ, ಚುನಾವಣಾ ಪ್ರಚಾರಕ್ಕೆ ರೆಡಿಯಾಗುತ್ತಿರಬೇಕಾದರೆ ಕುಮಾರಸ್ವಾಮಿ ರೆಡ್ಡಿ ಗಣಿ ಹುಡುಕುತ್ತ ಹೋಗಿದ್ದರಂತಲ್ಲಾ. ಗಣಿ ಪ್ರಾಂತ್ಯದ ವೀರಪ್ಪನ್ ತರ ಕಾಣುವ ಜನಾರ್ದನ ರೆಡ್ಡಿ, ಕುಮಾರಣ್ಣನ ಭೇಟಿಯನ್ನು ಗುಪ್ತವಾಗಿ ವಿಡಿಯೋ ಮಾಡಿಸಿ, "ಚುನಾವಣಾ ಖರ್ಚಿಗೆ ಹಣ ಕೇಳಲು ಗಣಿಗಾರಿಕೆಯ ಜಾಗಕ್ಕೇ ಬಂದಿದ್ದಾನೆ. ನೋಡಿ, ತೋರಿಸುತ್ತೇನೆ" ಎಂದು ಸಿ.ಡಿ.ಗಳನ್ನು ತಯಾರಿಸುತ್ತಿದ್ದಾನಂತಲ್ಲಾ. ಇದರಿಂದ ಕೆಂಡಮಂಡಲವಾದ ಕುಮಾರಣ್ಣ "ಈ ರೆಡ್ಡಿಯನ್ನು ಜೈಲಿಗೆ ಹಾಕಿಸಿ, ಕಂಬಿ ಎಣಿಸುವಂತೆ ಮಾಡದಿದ್ದರೆ ನಾನು ದೇವೇಗೌಡನ ಮಗನೇ ಅಲ್ಲವೆಂಬುದನ್ನು ನಾನೇ ಸಾಬೀತುಮಾಡುತ್ತೇನೆ" ಎಂದರಂತಲ್ಲಾ. ಈ ಶಪಥನಿಂದ ಹೆದರಿದ ಜೆಡಿಎಸ್ ಹೈದರು "ಕುಮಾರಣ್ಣಾ, ರಮೇಶ್, ಬಾಲಣ್ಣನವರು ಮೈನ್ಸ್ ಕೊಂಡು ಮಾರುತ್ತಿದ್ದ ಜಾಗ ತೋರುತ್ತೇವೆ ಬನ್ನಿ" ಎಂದಾಗ ಕುಮಾರಣ್ಣ ಟಗರಿನಂತೆ ತಲೆ ಹೊಗೆದು ತಮ್ಮದೇ ವಾಹನ ಹತ್ತಿ ಹೊರಟುಹೋದರಂತಲ್ಲಾ, ಥೂತ್ತೇರಿ!!

****

ಕಾಂಗ್ರೆಸ್‌ನಲ್ಲಿದ್ದ ಸೈಜುಗಲ್ಲಿನಂತಹ ರಾಜಕಾರಣಿಗಳು ಬಲದಿಂದ ಸುಗ್ಗಿದ ಇಲಿಗಳಂತೆ ದಿಕ್ಕು ದೆಸೆಯಿಲ್ಲದೆ ಹೇರಿ ಕೀಳುತ್ತಿವೆಯಂತಲ್ಲಾ, ಇದಕ್ಕೆ ಕಾರಣ ಕೇಳಲಾಗಿ ಬೆಂಗಳೂರಿನ ಖಾಲಿ ಜಾಗದಿಂದ ಹಿಡಿದು ಬಳ್ಳಾರಿ ಗಣಿವರೆಗೂ ಆವರಿಸಿ ಹೇರಳವಾಗಿ ಹಣ ಮಾಡಿಕೊಂಡಿರುವ ಶಿವಕುಮಾರ್ ಎಂಬ ಹೆಗ್ಗಣದ ದೆಸೆಯಿಂದಾಗಿ ಇಲ್ಲಾವ ಇಲಿಗಳೂ ಇರುವಂತಿಲ್ಲ, ಸ್ವಜಾತಿಯ ಲೀಡರುಗಳನ್ನೆಲ್ಲಾ ಆಪ್ಪೋಷನ ತೆಗೆದುಕೊಂಡು, ಮಕ್ಕಳು ಸೊಸೆಯರನ್ನು ಅಖಾಡಕ್ಕೆ ಎಳೆದು ತಂದ ದೇವೇಗೌಡರಂತೆಯೇ ಕಾಂಗ್ರೆಸ್‌ನ ವಧೂತಿ ರಾಜಕಾರಣಿಗಳು ಅವರಾಗಿಯೇ ಪಾರ್ಟಿ ಬಿಟ್ಟು ಹೋಗುವಂತೆ ಮಾಡುತ್ತಿದ್ದಾರಂತಲ್ಲಾ, ಇಂತಹ ಕಿರುಬುಕನಿಂದ ಅವರಾಗಿಯೇ ... ಮಾಂತ್ರಿಕರ ಮೊರೆ ಬೇಸತ್ತಿರುವ ಅಂಬರೀಷ್ ಕೂಡ ಎತ್ತ ಹೋಗಲೂ ತಿಳಿಯದೆ ಮಾಂತ್ರಿಕರ ಮೊರೆ ಹೋಗಿದ್ದಾರಂತಲ್ಲಾ, ಈ ಮಧ್ಯೆ ಶಿವರಾಮೇಗೌಡನೆಂಬ ನಟೋರಿಯಸ್ ರಾಜಕಾರಣಿ ಎಂ.ಪಿ. ಚುನಾವಣೆಯ ಫಂಡ್ ಕಲೆಕ್ಷನ್‌ನಿಂದ ಬಿಡೆಯಾಗಿ ತಯಾರಿ ನಡೆಸಿರುವಾಗಲೇ, ಚಲುವನ ಕಡೆಯ ಕಳ್ಳರು "ಶಿವರಾಮನೆಂಬ ಸುಳ್ಳ ಅಭ್ಯರ್ಥಿಯಾದ ಕೂಡಲೇ ನಾವು ಗೆದ್ದಂತೆಯೇ ಸರಿ" ಎಂದು ಪಟಾಕಿ ಹೊಡೆದರಂತಲ್ಲಾ, ಥೂತ್ತೇರಿ!!! ●



ತೇಜಸ್ವಿನಿ ಡೀಲು ಜೆಡಿಎಸ್‌ಗೆ ಮೊದಲ ಗೆಲುವು


ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಫಲಿತಾಂಶಕ್ಕಾಗಿ ಮುಂದಿನ ಮೇ 17 ರವರೆಗೆ ಕಾಯಲೇಬೇಕಾಗಿಲ್ಲ!

ಇಲ್ಲಿ ಜೆಡಿಎಸ್ ಅಭ್ಯರ್ಥಿ ಕುಮಾರಸ್ವಾಮಿಯ ಗೆಲುವು ಹೆಚ್ಚುಕಡಿಮೆ ನಿರ್ಧಾರವಾದಂತೆಯೇ ಸೈ. ಇದಕ್ಕೆ ಕುಮಾರಸ್ವಾಮಿ ಒಬ್ಬ ಬಲಿಷ್ಠ ಅಭ್ಯರ್ಥಿ ಮತ್ತು ಜನಪ್ರಿಯ ನಾಯಕ ಎಂಬುದು ಎಷ್ಟು ನಿಜವೊ ಅದೇ ರೀತಿ ಅವರ ವಿರುದ್ಧ ಬುಡವೇ ಭದ್ರವಿರದಿರುವ ಜನ ಪ್ರತಿಸ್ಪರ್ಧಿಗಳಾಗಿರುವುದೂ ಕಾರಣವಾಗಿದೆ.

ಕಾಂಗ್ರೆಸ್‌ನ ತೇಜಸ್ವಿನಿ ಹಾಗೂ ಬಿಜೆಪಿಯ ಯೋಗೇಶ್ವರ್ ಈ ಬಾರಿ ಪಾರ್ಲಿಮೆಂಟ್ ಚುನಾವಣೆಗೆ ನಿಲ್ಲುತ್ತಿರುವುದು ಗೆಲ್ಲಬೇಕೆಂದಲ್ಲ. ಅದರ ಬದಲಾಗಿ ಚುನಾವಣಾ ಖರ್ಚಿಗೆಂದು ಆಯಾ ಪಕ್ಷದವರು ಹರಿಸುವ ಹಣದಲ್ಲಿ ನಾಲ್ಕಾರು ಕೋಟಿ ನುಂಗಿ ನೀರು ಕುಡಿಯಲು ಇವರಿಬ್ಬರೂ ಕಾದು ನಿಂತಿದ್ದಾರೆ. ಬೆಂಗಳೂರು ಗ್ರಾಮಾಂತರ ಸಂಸತ್ ಕ್ಷೇತ್ರದ ವ್ಯಾಪ್ತಿಗೆ ವಿಧಾನಸಭಾ ಕ್ಷೇತ್ರಗಳಾದ ಬೆಂಗಳೂರು ದಕ್ಷಿಣ, ರಾಜರಾಜೇಶ್ವರಿ ನಗರ, ಕನಕಪುರ, ಕುಣಿಗಲ್, ಚನ್ನಪಟ್ಟಣ, ಮಾಗಡಿ ಹಾಗೂ ರಾಮನಗರ ಸೇರಿವೆ. ಇವುಗಳ ಪೈಕಿ ಮೊದಲಿನೆರಡರಲ್ಲಿ ಬಿಜೆಪಿ ಶಾಸಕರಿದ್ದಾರೆ. ನಂತರದ ಮೂರರಲ್ಲಿ ಕಾಂಗ್ರೆಸ್ ಶಾಸಕರೂ ಹಾಗೂ ಕೊನೆಯ ಎರಡು ಜೆಡಿಎಸ್ ಹಿಡಿತದಲ್ಲಿದೆ. ಆದರೆ ಒಟ್ಟಾರೆ ಸಂಸತ್ ಕ್ಷೇತ್ರವನ್ನು ಗಮನಿಸಿದರೆ ಬಿಜೆಪಿ ಇಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಿದೆ.

ಯೋಗೇಶ್ವರನ ಸಾಲಕ್ಕೆ ಡೀಲ್

ಹಾಲಿ ಚನ್ನಪಟ್ಟಣದ ಕಾಂಗ್ರೆಸ್ ಶಾಸಕನಾಗಿದ್ದ ಮೆಗಾಸಿಟಿ ಯೋಗೇಶ್ವರ್ ಈಗ ಬಾರಿ ಸಾಲಗಾರನಾಗಿದ್ದಾನೆ. ರಿಯಲ್ ಎಸ್ಟೇಟ್, ಸಿನಿಮಾ ಎಂದು ನಾನಾ ರೀತಿಯ ತೆವಲು ಬೆಳೆಸಿಕೊಂಡು ಕೋಟಿಗಟ್ಟಲೆ ಸಾಲ ಮಾಡಿ ಕಂಗಾಲಾಗಿರುವ ಯೋಗೇಶ್ವರನಿಗೆ ಪೊಲೀಸರಿಂದ, ಸಾಲಗಾರರಿಂದ ತಪ್ಪಿಸಿಕೊಳ್ಳಲು ಅರ್ಜೆಂಟಾಗಿ ಒಂದು ನೆಪಬೇಕಿತ್ತು. ಹಾಗಾಗಿ ಬಿಜೆಪಿ ಸೇರಿ 'ನೋಡ್ರಿ ನನ್ನ......' ಎಂದು ಛಂಗನೆ ಎಲೆಕ್ಷನ್ ಅಖಾಡಕ್ಕೆ ಧುಮುಕಿದ್ದಾನೆ. ಇಲ್ಲಿ ಯೋಗೇಶ್ವರ್ ಲೆಕ್ಕಾಚಾರವಿಷ್ಟೆ.



ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಇರುವವರೆಗೂ ಕಾಂಗ್ರೆಸ್ ಶಾಸಕರಾಗಿದ್ದುಕೊಂಡು ಒಂದೇ ಒಂದು ಟ್ರಾನ್ಸ್‌ಫರ್ ಕೂಡ ಮಾಡಿಸಲಾಗುವುದಿಲ್ಲ. ದುಡ್ಡು ಮಾಡಿಕೊಳ್ಳಲಂತೂ ದಾರಿಯೇ ಇಲ್ಲ. ಹಾಗಾಗಿ ಈಗಲೇ ಬಿಜೆಪಿಗೆ ತೂರಿಕೊಂಡರೆ ಬಳ್ಳಾರಿ ಗಣಿ ರೆಡ್ಡಿಗಳು ಕೊಡುವ 10 ಕೋಟಿ, ಬಿಜೆಪಿಗಳ ಪಾರ್ಟಿ ಫಂಡು ಎಲ್ಲಾ ಸೇರಿಸಿ ನೆಪಮಾತ್ರಕ್ಕೆ ಒಂದು ಚೂರು ಖರ್ಚು ಮಾಡಿ ಮಿಕ್ಕಿದ್ದನ್ನು ಸ್ವಂತಕ್ಕೆ ಎತ್ತಿಟ್ಟುಕೊಂಡರೆ ಕನಿಷ್ಠ ಪಕ್ಷ ಕೊಂಚ ಸಾಲಾನಾದರೂ ತೀರಿಸಬಹುದಲ್ಲ ಎಂಬ ಸ್ಕೆಚ್ ಅವನದು. ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ಸೋತ ಮೇಲೆ ಚನ್ನಪಟ್ಟಣ ಅಸೆಂಬ್ಲಿ ಉಪಚುನಾವಣೆ ಹೇಗೂ ನಡೆಯುತ್ತವೆ. ಆಗ ಮತ್ತೆ ಬಿಜೆಪಿಯಿಂದ ನಿಂತು ಇನ್ನೊಂದಷ್ಟು ಹಣ ಮಾಡಿಕೊಂಡು, ಅಕಸ್ಮಾತ್ ಗೆದ್ದೇಬಿಟ್ಟರೆ ಏನಾದರೂ ಕುರ್ಚಿ ಹಿಡಿದುಬಿಡಬೇಕೆಂದು ಯೋಗೇಶ್ವರ ಲೆಕ್ಕಾ ಹಾಕಿಕೊಂಡಿದ್ದಾನೆ. ಆದರೆ ಅವನ ಸಿನಿಮಾಗಳಂತೆಯೇ ಅವನ ರಾಜಕೀಯದ ಲೆಕ್ಕಾಚಾರಗಳೂ ಚಾಲುಚಾಲಾಗಿದೆ.

ಯೋಗೇಶ್ವರನಿಗೆ ಸ್ವಂತ ಕ್ಷೇತ್ರವಾದ ಚನ್ನಪಟ್ಟಣದಲ್ಲೇ ಸ್ವಂತ ಶಕ್ತಿ ಎಂಬುದಿಲ್ಲ, ಇನ್ನೂ ರಾಮನಗರದಲ್ಲೊಬ್ಬ ಚಿಲ್ರೆ ಲೀಡರ್ ರುದ್ರೇಶ್, ಬೆಂಗಳೂರು ಸಿಟಿ ಭಾಗದಲ್ಲಿ ಒಂದಿಷ್ಟು ಬೆಂಬಲ ಬಿಟ್ಟರೆ ಬೇರೇನೂ ಇಲ್ಲ. ಕನಕಪುರದಲ್ಲಿ ಬಿಜೆಪಿ ಇದೆಯಾದರೂ ಅವರ ಅಧಿನಾಯಕ ಹೋಟ್ಲು ನಾಗರಾಜ ಮತ್ತವನ ಹೋಟೆಲ್ ಸಪ್ಲೆಯರ್, ಕ್ಲೀನರ್‌ಗಳೆಂಟು ಜನರ ಓಟು ಮಾತ್ರ ಗ್ಯಾರಂಟಿ.


ಇನ್ನು ಮಾಗಡಿ-ಕುಣಿಗಲ್‌ಗಳಲ್ಲಿ ಬಿಜೆಪಿಗೆ ಈಗ ಬೆಂಬಲ ಇಲ್ಲವೇ ಇಲ್ಲ.

ತೇಜಸ್ವಿನಿಯ ಡೀಲು


2004 ರ ಚುನಾವಣೆಯಲ್ಲಿ ದೇವೇಗೌಡರನ್ನೇ ಸೋಲಿಸಿದ ತೇಜಸ್ವಿನಿಯ ಹಿಂದಿದ್ದ ಅಸಲಿ ಶಕ್ತಿ ಡಿ.ಕೆ ಶಿವಕುಮಾರ್. ಈಗ ಇವರಿಬ್ಬರಿಗೂ ಹಾವು-ಮುಂಗಸಿಯಂಥ ಸ್ನೇಹ. ಆದರೂ ಡಿಕೆಶಿ ಈಗ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿರುವುದರಿಂದ ತೋರಿಕೆಗಾದರೂ ತೇಜಸ್ವಿನಿ ಪರವಾಗಿ ಓಡಾಡಿದಂತೆ ತೋರಿಸಿಕೊಳ್ಳಬೇಕಿದೆ. ಜೊತೆಗೆ ತನ್ನ ಸ್ವಕ್ಷೇತ್ರ ಕನಕಪುರದ ಕಾಂಗ್ರೆಸ್ ಕೋಟೆ ಭದ್ರವಾಗಿರಬೇಕೆಂದರೆ ಸ್ವಲ್ಪವಾದರೂ ಕೆಲಸ ಮಾಡಲೇಬೇಕಾದ ಒತ್ತಡ ಇದ್ದೇ ಇರುತ್ತದೆ. ಆದರೆ ರಾಮನಗರದ ಸಿ.ಎಂ. ಲಿಂಗಪ್ಪ, ಮಾಗಡಿಯ ರೇವಣ್ಣ, ಜೇಡರಹಳ್ಳಿ ಕೃಷ್ಣಪ್ಪ ಮುಂತಾದವರು ಪ್ರಾಣ ಹೋದರೂ ತೇಜಸ್ವಿನಿಗಾಗಿ ಕೆಲಸ ಮಾಡುವುದಿಲ್ಲ. ಇದಕ್ಕೆ ಕಾಂಗ್ರೆಸ್‌ನೊಳಗಿನ

▶▶▶

ಶಿವಮೊಗ್ಗ: ಚೆಡ್ಡಿಗಳ ಮೌನ, ಕಾಂಗ್ರೈಗಳ ವಾಕ್ ಸಮರ



ಮಗ ರಾಘವೇಂದ್ರನನ್ನು ಗೆಲ್ಲಿಸುವ ನೆವದಲ್ಲಿ ಜಿಲ್ಲೆಯಲ್ಲಿ ತನ್ನ ನೆಲೆಯನ್ನೇ ಭದ್ರ ಮಾಡಿಕೊಳ್ಳಹೊರಟ ಯಡ್ಡಿಯ ವ್ಯೂಹತಂತ್ರಕ್ಕೆ ಈ ಬಾರಿ ಒಳಗಿಂದೊಳಗೇ ಸರಿಯಾಗೇ ಗೂಟ ಜಡಿಯುವ ತಯಾರಿಯಲ್ಲಿ ಮೂಲ ಬಿಜೆಪಿ ಮುಖಂಡರು ಸಿದ್ಧವಾಗಿರುವ ಎಲ್ಲ ಲಕ್ಷಣಗಳೂ ಕಾಣುತ್ತಿವೆ. ಪಕ್ಷದ ಚುನಾವಣೆಯ ಉಸ್ತುವಾರಿ ಹೊಂದಿರುವ ಈಶ್ವರಪ್ಪ ಏನೂ ಮಾಡದೆ ತಟಸ್ಥವಾಗಿರುವುದೇ ಇದಕ್ಕೆ ಸಾಕ್ಷಿ.



-ಹರ್ಷಕುಮಾರ್ ಕುಗ್ವೆ

ಹಾಲಿ ಮತ್ತು ಮಾಜಿ ಮುಖ್ಯಮಂತ್ರಿಗಳ ನಡುವಿನ ಯುದ್ಧರಂಗವೆಂದೇ ಹೇಳಲಾಗುವ ಶಿವಮೊಗ್ಗ ಕ್ಷೇತ್ರದಲ್ಲಿ ತನ್ನ ಪುತ್ರ ರಾಘವೇಂದ್ರನನ್ನು ಗೆಲ್ಲಿಸೇಬಿಡುವ ಉಮೇದಿಯಲ್ಲಿ ಹಣದ ಹೊಳೆಯನ್ನೇ ಹರಿಸುತ್ತಿರುವ ಯಡ್ಡಿ, ಕಾಸಿನ ಆಸೆಯಿಂದ ಜೊಲ್ಲು ಸುರಿಸುತ್ತಾ ಸಾಲುಗಟ್ಟಿರುವ ಪುಢಾರಿಗಳು, ಹೆಚ್ಚುತ್ತಿರುವ ವಲಸಿಗರ ಸಂಖ್ಯೆಯಿಂದ ಅಂದು ಬಿಸಿ ಮಾಡಿಕೊಳ್ಳುತ್ತಿರುವ ಮೂಲ ಬಿಜೆಪಿಗರ ದೂ(ದು)ರಾಲೋಚನೆಗಳು, ಏರುತ್ತಲೇ ಇರುವ ಚುನಾವಣೆ ನೀತಿಸಂಹಿತೆ ಉಲ್ಲಂಘನೆಗಳು, ಬಂಗಾರಿ, ಕಾಗೋಡು ತಿಮ್ಮಪ್ಪರ ತಂತ್ರಗಾರಿಕೆಯ ವಾಗ್ಬಾಣಗಳು, ಜಿಲ್ಲಾಧಿಕಾರಿ ಪಾಂಡೆಯ ಯಡ್ಡಿ ಚೇಲಾಗಿರಿ, ಎಗ್ಗಿಲ್ಲದೆ ನಡೆದಿರುವ ಜಾತಿ ಸಮಾವೇಶದ ಹೆಸರಿನ ಯಡ್ಡಿ ಸಮಾವೇಶಗಳು... ಇದೇ ಸದ್ಯದ ಹೈಲೈಟುಗಳು.

ಸೈಲೆಂಟಾಗಿರುವ ಬಿಜೆಪಿ ಹಳೆ ತಲೆಗಳು

ಮಗ ರಾಘವೇಂದ್ರನನ್ನು ಗೆಲ್ಲಿಸುವ ನೆವದಲ್ಲಿ ಜಿಲ್ಲೆಯಲ್ಲಿ ತನ್ನ ನೆಲೆಯನ್ನೇ ಭದ್ರ ಮಾಡಿಕೊಳ್ಳಹೊರಟ ಯಡ್ಡಿಯ ವ್ಯೂಹತಂತ್ರಕ್ಕೆ ಈ ಬಾರಿ ಒಳಗಿಂದೊಳಗೇ ಸರಿಯಾಗೇ ಗೂಟ ಜಡಿಯುವ ತಯಾರಿಯಲ್ಲಿ ಮೂಲ ಬಿಜೆಪಿ ಮುಖಂಡರು ಸಿದ್ಧವಾಗಿರುವ ಎಲ್ಲ ಲಕ್ಷಣಗಳೂ ಕಾಣುತ್ತಿವೆ. ಪಕ್ಷದ ಚುನಾವಣೆಯ ಉಸ್ತುವಾರಿ ಹೊಂದಿರುವ ಈಶ್ವರಪ್ಪ ಏನೂ ಮಾಡದೆ ತಟಸ್ಥವಾಗಿರುವುದೇ ಇದಕ್ಕೆ ಸಾಕ್ಷಿ. ಯಡ್ಡಿ ಮಗ ಗೆದ್ದಿದ್ದೇ ಆದಲ್ಲಿ ಯಡ್ಡಿಯ ಕೊಂಬು ಇನ್ನೆಷ್ಟು ಬೆಳೆಯಬಹುದು ಎಂದು ಯೋಚಿಸುತ್ತಲೇ ಯಡ್ಡಿಗೆ ಖೆಡ್ಡಾ ತೋಡಲು ತಯಾರಿ ನಡೆದಿದೆ. ಅದರಲ್ಲೂ ಇತರೆ ಪಕ್ಷಗಳಲ್ಲಿ ಯಾತಕ್ಕೂ ಬಾರದೆ, ಮೂಲೆಗುಂಪಾಗಿದ್ದ ಬಿ.ಆರ್. ಜಯಂತ್, ಪಾಣಿರಾಜಪ್ಪ, ಶಾಂತವೀರನಾಯ್ಕನಂತವರೂ ಲಕ್ಷಲಕ್ಷ ರೂ.ಗಳಿಗೆ ಯಡ್ಡಿ ಜೊತೆ ಡೀಲಾಗುತ್ತಿದ್ದರೆ, ವರ್ಷಾಂತರಗಳಿಂದಲೂ ಬಿಜೆಪಿಯಲ್ಲೇ ದುಡಿದವರಿಗೆ ಬೆಲೆ ಕಟ್ಟೋರು ಯಾರೂ ಇಲ್ಲದಾಗಿರುವುದು ಮೂಲ ಬಿಜೆಪಿ ಕಾರ್ಯಕರ್ತರ ಪಿತ್ತ ನೆತ್ತಿಗೇರಲು ಕಾರಣವಾಗಿದೆ.

ಬಂ, ಕಾ.ತಿ. ವಾಕ್ ಸಮರ

ಕಾಂಗ್ರೆಸ್‌ನ ಅಭ್ಯರ್ಥಿ ಬಂಗಾರಪ್ಪ ಹಾಗೂ ಹಿರಿತಲೆ ಕಾಗೋಡು ತಿಮ್ಮಪ್ಪ ಇದೀಗ ಭೀಕರ ವಾಕ್ ಸಮರಕ್ಕಿಳಿದಿದ್ದಾರೆ. ಜನರಿಗೆ ಗೋಮೂತ್ರ ಕುಡಿಸುತ್ತಾ, ಗೋಕರ್ಣ ಮಠವನ್ನೂ ಸ್ವಾಹಾ ಮಾಡಿರುವ ರಾಘವೇಶ್ವರನಿಗೆ ಕೋಟಿ ಕೋಟಿ ಹಣ ಕೊಟ್ಟು, ದಿವಾಕರನಂಥ ಹವ್ಯಕನನ್ನು ಆಪ್ತ ಕಾನೂನು ಸಲಹೆಗಾರನನ್ನಾಗಿ ನೇಮಿಸಿಕೊಂಡದ್ದೇ ಜಿಲ್ಲೆಯ ಹವ್ಯಕ ಸಮಾಜ ಕೃತಾರ್ಥವಾದಂತಿದೆ. ಇದೇ ಪ್ರಭಾವಕ್ಕೆ ತೇಲಿಹೋಗಿರುವ ಕಾಂಗ್ರೆಸ್ಸಿನ ಕೆ.ಎಚ್. ಶ್ರೀನಿವಾಸ್, ಜಯಂತ, ಹರನಾಥರಾವ್‌ರಂಥ ಹವ್ಯಕರು ಬಿಜೆಪಿ ಕಡೆ ಒಲವು ತೋರಿಸತೊಡಗಿದ್ದನ್ನು ಗೊತ್ತುಮಾಡಿಕೊಂಡ ಬಂ, ಕಾಗೋಡು ತಿಮ್ಮಪ್ಪ ಯಡ್ಡಿ ಮಾಡುತ್ತಿರುವ ಬ್ರಾಹ್ಮಣ, ಲಿಂಗಾಯತ ಲಾಬಿಗೆ ಎದುರಾಗಿ ತಾವೂ ನೇರವಾಗಿ ಬಿಜೆಪಿ ಸ್ವಾಮಿಯನ್ನು ಮೂದಲಿಸುವ, ಬಿಜೆಪಿ ಬ್ರಾಹ್ಮಣರನ್ನು ನೇರವಾಗಿ ಎತ್ತಿಯಾಡಿಸುವ ಕೆಲಸದಲ್ಲಿ ತೊಡಗಿದ್ದಾರೆ. ರಾಘವೇಶ್ವರನಿಗೆ ಬಂ ಮೂದಲಿಸಿದ್ದೇ ಹವ್ಯಕರು ಒಂದಾಗಿದ್ದು, ಬಂಗಾರಿಯ ಲೆಕ್ಕಾಚಾರದಂತೆಯೇ ಆಗಿತ್ತು, ಮುಂದುವರೆದು ಸಾಗರದಲ್ಲಿ ಕಾಗೋಡು ತಿಮ್ಮಪ್ಪ ಕೂಡಾ ಅವರು ಪೂಜೆ ಮಾಡೋದು ನಾವು ಪ್ರಸಾದ ತೊಗೋಳೋದು ಯಾಕೆ? ಇವರು ಶೂದ್ರರನ್ನು ಕೀಳಾಗಿ ಕಾಣ್ತಾರೆ. ಹಿಂದೂತ್ವದ ಹೆಸರಲ್ಲಿ ಜಾತಿಗಳ ನಡುವೆ ಭೇದಭಾವ ಮಾಡುವ ಇವರ ಕೈ ಕತ್ತರಿಸಬೇಕು ಎಂದು ಹರಿಹಾಯ್ದಿದ್ದಾರೆ. ತಕ್ಷಣವೇ ಬಿಜೆಪಿ ಎಸ್‌ಸಿ/ಎಸ್‌ಟಿ ಮೋರ್ಛಾದಿಂದ ಇಬ್ಬರ ಮೇಲೂ ದೂರು ಕೊಡಿಸಲಾಗಿ 153(ಎ) ಸೆಕ್ಷನ್ ಕೇಸು ದಾಖಲಿಸಲಾಗಿದೆ. ಜಿಲ್ಲೆಯಲ್ಲಿ ಬಹುಸಂಖ್ಯಾತರಾಗಿರುವ ಈಡಿಗ/ದೀವರ ಮತದಾರರಲ್ಲಿ ಕಾಲುಭಾಗ ಮತಗಳನ್ನು ಯಡ್ಡಿ ಹೊಡೆದುಕೊಂಡರೂ 'ರಾಘು' ಗೆಲುವು ಸುಲಭವಾಗುತ್ತೆ ಎನ್ನುವುದು ಯಡ್ಡಿ ಲೆಕ್ಕಚಾರ. ಆದರೆ ಈಡಿಗರಿಗೆ ಅದೇನೇ ಕಡಿದು ಕಟ್ಟಿಹಾಕಿದ್ದೇನೆ ಎಂದರೂ ಇಡೀ ಜಾತಿಯನ್ನು ಇಬ್ಭಾಗ ಮಾಡಿರುವ ಯಡ್ಡಿ ಬಗ್ಗೆ ಸಿಟ್ಟಾಗಿರುವುದರಿಂದ ಈಡಿಗರು ತಮ್ಮ ಸಮುದಾಯಕ್ಕೆ ಒಂದು ಸಂಚಲನೆಯನ್ನೂ ತಂದುಕೊಟ್ಟು ಗೋಪಾಲಕೃಷ್ಣ ಹಾಲಪ್ಪನಂತಹವರನ್ನೂ ಬೆಳೆಸಿದ ಬಂಗಾರಪ್ಪನ ಕೈಹಿಡಿಯುವುದೇ 'ಬಹುತೇಕ ಗ್ಯಾರಂಟಿಯಾಗಿದೆ.


ಡಿ.ಸಿ. ಪಾಂಡೆಯ ಮುಂದುವರೆದ ಚೇಲಾಗಿರಿ

ಶಿವಮೊಗ್ಗಕ್ಕೆ ಜಿಲ್ಲಾಧಿಕಾರಿಯಾಗಿ ಪಂಕಜ್‌ಕುಮಾರ್ ಪಾಂಡೆಯನ್ನು ಯಡ್ಡಿ ತಂದುಕೊಂಡದ್ದೇ ತನ್ನ ಚೇಲಾಗಿರಿಗೆ ಎಂದು ಮತ್ತೊಮ್ಮೆ ನಿಚ್ಚಳವಾಗಿದೆ. ಜಿಲ್ಲೆಯಲ್ಲಿ ಇದುವರೆಗೆ

ಪುಗಾರಿಕೆ ಒಂದು ಕಾರಣವಾದರೆ ತೇಜಸ್ವಿನಿ ಗಿಗಿನ ಅನುಮಾನವೂ ಇನ್ನೊಂದು ರಣವಾಗಿದೆ. ಆ ಅನುಮಾನ ಏನು ಗೊತ್ತೆ?

ಈ ತೇಜಸ್ವಿನಿ ಗೌಡರ ಕುಟುಂಬದೊಂದಿಗೆ ಾಗಲೇ ಒಂದು ದೀಲ್ ಕುದುರಿಸಿಕೊಂಡು ದ್ದಾಳೆ ಎಂಬುದು!

ಕಳೆದ ಐದು ವರ್ಷಗಳ ಕಾಲ ಸಂಸದೆಯಾಗಿ ಜಸ್ವಿನಿ ತನ್ನ ಕಾಂಗ್ರೆಸ್ ಬೆಂಬಲಿಗರ ಜೊತೆ ಾಸ ಬೆಳೆಸಿಕೊಳ್ಳುವ ಬದಲಾಗಿ ವಿರೋಧ ಗಳಾದ ಬಿಜೆಪಿ ಹಾಗೂ ಬಿಎಸ್‌ನವರೊಂದಿಗೆ




ಸವಾಡಿದ್ದೇ ಜಾಸ್ತಿ. ಡಿಕೆ ಜತೆ ಸ್ನೇಹ ಮುರಿದು ಬಿದ್ದ ಲೆ ಬಿಜೆಪಿ ಸೇರಲು ಲಾಗಾ ಕಿದ್ದಳಾದರೂ ಅದಕ್ಕೆ ಯಡ್ಡಿ ಬಿರಲಿಲ್ಲ. ತೇಜಸ್ವಿನಿಗೆ ಆಂಧ್ರದ ಯವಾಡಾ ಎಂಪಿ ಡಪತಿರಾಜು ಜೊತೆಗೆ ಕಳ ಆಳವಾದ ವಿಸ್ತಾರವಾದ ಹವಿದೆ. ಅವನದೊಂದು nco ಎಂಬ ಕನ್‌ಸ್ಟ್ರಕ್ಷನ್ ವನಿಗೆ ಇದೇ ತೇಜಸ್ವಿನಿ ರ್ನಾಟಕ ಸರ್ಕಾರದಿಂದ ಒಂದು ವಿರ ಕೋಟಿ ರೂಪಾಯಿಗೂ ಹೆಚ್ಚು ಮೊತ್ತದ . ಸೇತುವೆ ಕಾಂಟ್ರ್ಯಾಕ್ಟ್ ಕೊಡಿಸಿದ್ದಾಳೆ. ಬಷನ್ ಹೊಡೆದಿದ್ದಾಳೆ. ಇವೆಲ್ಲಾ ಮಂಜೂರು ಡಿದವರು ಬೇರೆ ಯಾರೂ ಅಲ್ಲ ಆಗಿನ ೀಕೋಪಯೋಗಿ ಮಂತ್ರಿ ಎಚ್.ಡಿ. ರೇವಣ್ಣ!

ಗೌಡರ ಕುಟುಂಬದ ಜೊತೆ ಈ ರೀತಿ ್ರೀಯ ವ್ಯವಹಾರ ನಡೆಸುತ್ತಿದ್ದ ತೇಜಮ್ಮ ಈಗ ೀ ಕುಟುಂಬದ ಕುಮಾರಸ್ವಾಮಿ ವಿರುದ್ಧ ಮಾಣಿಕವಾಗಿ ಹೋರಾಡುತ್ತಾಳಾ? ಆಕೆ ಗಲಾಟೆ ಮಾಡಿ ಟಿಕೆಟ್ ಪಡೆಯುವಂತೆ ಕುಮ್ಮಕ್ಕು ಕೊಟ್ಟಿದ್ದೇ ಗೌಡ ಫ್ಯಾಮಿಲಿ. ಈ ದೌಟು ಬಂದ ಕಾರಣಕ್ಕೇನೆ ಡಿ.ಕೆ., ಸಿ.ಎಂ. ಲಿಂಗಪ್ಪ, ಎಚ್.ಎಂ. ರೇವಣ್ಣ ಮುಂತಾದವರೆಲ್ಲಾ 'ಈ ಸಾರಿ ಗೆಲ್ಲುವ ಆಸೆಯಿದ್ದರೆ ತೇಜಸ್ವಿನಿಗೆ ಟಿಕೆಟ್ ಕೊಡಬೇಡಿ' ಎಂದು ಹೈಕಮಾಂಡಿಗೇ ಹೇಳಿಬಂದಿದ್ದರು. ಆದರೆ ಸೋನಿಯಾ ಬೇರೆ ಯಾವ್ಯಾವುದೋ ಮಾನದಂಡ ಇರಿಸಿಕೊಂಡು ತೇಜಮ್ಮನಿಗೆ ಟಿಕೆಟ್ ಕೊಡಿಸಿಬಿಟ್ಟಿದ್ದಾರೆ. ತೇಜಮ್ಮ. ಈಗ ತನ್ನ ಸಾಧನೆ ಏನು, ಸಾಮರ್ಥ್ಯ ಎಷ್ಟು ಎಂದು ಹೇಳಿಕೊಳ್ಳದೆ 'ಇದು ಡಿಕೆಶಿ ಮರ್ಯಾದೆ ಪ್ರಶ್ನೆ, ಹಾಗಾಗಿ ನನ್ನ ಪರವಾಗಿ ಅವರೆಲ್ಲಾ ಕೆಲಸ ಮಾಡಲೇಬೇಕು' ಎಂಬ ವಿಚಿತ್ರ ಹೇಳಿಕೆ ಕೊಡುತ್ತಿದ್ದಾಳೆ. ಇಂಥ ತಿಕ್ಕಲುತನ ಬೇರೆಲ್ಲಾದರೂ ನೋಡಿದ್ದೀರಾ?

ಇಂಥ ವಿಚಿತ್ರ ಪ್ರಾಣಿ ತೇಜಸ್ವಿನಿಯ ಬಗ್ಗೆ ಕಾಂಗ್ರೆಗಳಲ್ಲೇ ಚೂರೂ ಉತ್ಸಾಹವಿಲ್ಲ. ಇತ್ತ ಬಿಜೆಪಿಯ ಯೋಗೇಶ್ವರ ಎಲೆಕ್ಷನ್ ಖರ್ಚಿನ ನೆಪದಲ್ಲಿ ಎಲ್ಲೆಲ್ಲಿ ಹಣ ನುಂಗಬಹುದೆಂಧು ಮಾತ್ರ ಹುಡುಕುತ್ತಿದ್ದಾನೆ. ಅತ್ತ ಕುಮಾರಸ್ವಾಮಿಗೆ ಕ್ಷೇತ್ರದ ಪ್ರತಿ ಕಡೆಯೂ ಭಾರಿ ಬೆಂಬಲಿಗರಿದ್ದಾರೆ. ಜಾತಿ ಓಟ್‌ಗಳೂ ನೆರವಾಗಲಿವೆ. ನೈಜ ಪರಿಸ್ಥಿತಿ ಹೀಗಿರುವುದರಿಂದಲೇ ಬೆಂಗಳೂರು ಗ್ರಾಮಾಂತರದಲ್ಲಿ ಜೆಡಿಎಸ್ ಮೊದಲ ಗೆಲುವು ಸಾಧಿಸಿದೆ ಎನ್ನಬಹುದಾಗಿದೆ. ■

ಖಲಾಗಿರುವ ಚುನಾವಣೆ ನೀತಿಸಂಹಿತೆ ಲ್ಲಂಘನೆಗಳು 142. ಅದರಲ್ಲಿ ಬಹುಪಾಲು ಪಿಯದ್ದೇ. ಆದರೆ ದಾಖಲಿಸದೇ ಬಿಟ್ಟಿರುವ ರಣಗಳು ಇನ್ನೂ ಹಲವು ವೆ. ಸ್ನೇಹ ಲನ, ಸಹಮಿಲನ, ಹಗಳಿಗೆ, ಜಾತಿ ಸಮಾವೇಶ, ರ್ಮಿಕ ಕಾರ್ಯಕ್ರಮಗಳ ಸರಲ್ಲಿ ಬಿಜೆಪಿ ಮಾವೇಶಗಳನ್ನು, ಭೂರೀ ೀಜನಗಳನ್ನೂ ನಡೆಸುತ್ತಿದೆ. ನಾವಣೆ ಘೋಷಣೆಯಾದ ಲೆ ಇಲ್ಲಿಗೆ ಆರು ಬಾರಿ ದಿರುವ ಯಡ್ಡಿ, ತಿಂಗಳಿನರ್ಧ ಗಳೂ ಕ್ಷೇತ್ರಾದ್ಯಂತ ಗಾಡಿ, ಪ್ರಚಾರ ಸಭೆ, ೀಟೆಲು ಮನೆಗಳಲ್ಲಿ ಪ್ರತಿದಿನ ಮುಖಂಡರೊಂದಿಗೆ ದೀಲಿಂಗುಗಳನ್ನು ಸುವುದರಲ್ಲಿ ಕಳೆದಿದ್ದಾರೆ. ಅವರ ಮನೆ ಬದೆ ಪ್ರತಿನಿತ್ಯವೂ ಹತ್ತು ಹಲವು ಮಂದಿ ್ನಾರು ಬೆಂಬಲಿಗರೊಂದಿಗೆ ಬಂದು 'ಪ್ರಸಾದ' ದು ಹೋಗುತ್ತಿದ್ದಾರೆ. ಎಷ್ಟೋ ದಿನ ಾತ್ರಿವರೆಗೂ ಯಡ್ಡಿ ಯಯಾಚನೆಯಲ್ಲಿ ದಗಿದ್ದರೂ, ಅವರ ಕುರಿತು ರವೆತ್ತಲು ಡಿ.ಸಿ. ಪಾಂಡೆಗೆ ವೆಯೋ ಸಿಗುತ್ತಿಲ್ಲವಂತೆ.



ಮ್ಮನೆ ಮೇಲೆ ಕೇಸು!

ಮಾರ್ಚ್ 28 ರ ಶನಿವಾರ ರ್ಣಹಳ್ಳಿ ಸಮೀಪದ ತನಿಕಲ್ ಲ್ಲಿ ಬಿಜೆಪಿ ಮುಖಂಡ ಣ್ಣ ಎಂಬುವರ ಮನೆಯ ಾಂಡಿನಲ್ಲಿ ಅಕ್ರಮ ಮದ್ಯ ಬದ್ದ ಲಾರಿಯೊಂದು ನಿಂತಿದ್ದು ಸ್ಮ ಶಾಸಕ ಕಿಮ್ಮನೆ ರತ್ನಾಕರ್ ಬಲಿಗರು ಪೊಲೀಸರ ಗಮನಕ್ಕೆ ತಂದಿದ್ದಾರೆ. ಾಸದ ಆ ಲಾರಿಯಲ್ಲಿ 32 ಲಕ್ಷ 28 ಸಾವಿರ ಮಾಯ ಮದ್ಯ ಪತ್ತೆಯಾಗಿದೆ. ಕಾಂಪೌಂಡಿನಿಂದ ರತಂದೊಡನೆಯೇ ತಮಗೂ ಲಾರಿಗೂ ಬಂಧವೇ ಇಲ್ಲವೆಂದು ಕೂಗಾಡಿದ್ದಾರೆ ರಾಜಣ್ಣ ಮನೆಯವರು. ಸಿಟ್ಟಿಗೆದ್ದ ಊರಿನವರು ಮತ್ತೆ ಅಲ್ಲೇಬಿಟ್ಟಿದ್ದಾರೆ. ಈ ಪ್ರಕರಣದ ಕುರಿತು ಒಂದು ಮಹಜರನ್ನೂ ನಡೆಸದ ಪೊಲೀಸರು ಮಾಡಿದ್ದೇನು ಗೊತ್ತೆ? ಕಿಮ್ಮನೆ ರತ್ನಾಕರ್ ಮತ್ತು ಅವರ ಬೆಂಬಲಿಗರ ಮೇಲೆಯೇ 143, 341, 323, 504, 427, 506 ಮುಂತಾದ ಕ್ರಿಮಿನಲ್ ಕೇಸುಗಳ ಸುರಿಮಳೆಯನ್ನೇ ಜಡಿದಿದ್ದಾರೆ. ಹೇಗಿದೆ ಸಿ.ಎಂ. ಯಡ್ಡಿ ಕರಾಮತ್ತು?!

ಆತ್ಮಗೌರವ ಇಲ್ಲದವರು!

ಕೆ.ಎಚ್. ಶ್ರೀನಿವಾಸ್ ಈಗ ಬಿಜೆಪಿ ಸೇರಿದ್ದಾರೆ. ತಮ್ಮ ಅವಕಾಶವಾದಿ ಅಂತರಂಗವನ್ನು ಮಾಧ್ಯಮಗಳ ಎದುರು ಬಿಚ್ಚಿಟ್ಟಿರುವ ಶ್ರೀನಿವಾಸ್‌ಗೆ ಕಾಂಗ್ರೆಸ್‌ನಲ್ಲಿ ಹಿಂಸೆಯಾಗುತ್ತಿತ್ತಂತೆ. ಬಿಜೆಪಿಯನ್ನು ಮುನ್ನಡೆಸುತ್ತಿರುವ ಆರೆಸ್ಸೆಸ್ ತುಂಬಾ ಪ್ರಾಮಾಣಿಕವಾಗಿದೆಯಂತೆ. ಹಾಗಾಗಿ ಬಿಜೆಪಿ ಇಷ್ಟವಾಗಿದೆಯಂತೆ. ತಮ್ಮ ವಿರುದ್ಧ ಕೆ.ಎಸ್. ಈಶ್ವರಪ್ಪ ಶಾಸಕನಾಗಿ ಗೆದ್ದುಬಂದ ಮೊದಲ ಚುನಾವಣೆಯಲ್ಲಿ ಸೋಕಾಲ್ಡ್ 'ಸೂಳೆ ಬೈಲು' ಪ್ರಕರಣದಲ್ಲಿ ಹವ್ಯಕ ಬ್ರಾಹ್ಮಣ ಕೆ.ಎಚ್. ಶ್ರೀನಿವಾಸರನ್ನು 'ಬ್ರಾಹ್ಮಣ ವಿರೋಧಿ' ಎಂದು ಬಿಂಬಿಸಿ, ಖಚಿತವಾಗಿದ್ದ ಇವರ ಗೆಲುವನ್ನು ತಡೆದಿದ್ದು ಇದೇ ಆರೆಸ್ಸೆಸ್ ಎಂಬುದು ಶ್ರೀಯುತರಿಗೆ ಮರೆತಿರಬೇಕು. ನಂತರದಲ್ಲಿ ಕಾಂಗ್ರೆಸ್ಸಿನ ಕಾಲೆಳೆಯುವ ರಾಜಕಾರಣದಾಚೆಗೂ ಸದಾ ರಾಜಧಾನಿಯಲ್ಲೇ ಕಾಲ ಕಳೆದು, ಜನರೊಂದಿಗೆ ಬೆರೆಯದೇ ಮೂಲೆಗುಂಪಾಗಿದ್ದು ಸ್ವಯಂಕೃತದೋಷದಿಂದಲೇ ಹೊರತು ಬೇರೆಯವರಿಂದಲ್ಲ. ಇದೀಗ ಪರಮಭ್ರಷ್ಟಗೊಂಡಿರುವ ಬಿಜೆಪಿ ಸೇರಿ ಅದ್ಯಾವ ಆತ್ಮಗೌರವ ಪಡೆಯುತ್ತಾರೋ ತಿರುಪತಿ ಶ್ರೀನಿವಾಸನೇ ಬಲ್ಲ! ■



ಇಂದಿರಾ ಗಾಂಧಿಯೊಂದಿಗೆ ಕೋಡಿಮಠದ ಸ್ವಾಮಿ


ಕೋಡಿಮಠ ಭವಿಷ್ಯ, ಯಡ್ಡಿ ಪರಾರಿ!

ಎಲ್ಲ ರಾಜಕಾರಣಿಗಳಂತೆ ಜಾತಕ, ಜ್ಯೋತಿಷ್ಯ ಹಲ್ಲಿ ಶಕುನ, ಗಿಣಿ ಶಾಸ್ತ್ರಗಳನ್ನೆಲ್ಲಾ ನಂಬುವ ಮುಖ್ಯ ಮಂತ್ರಿ ಯಡಿಯೂರಪ್ಪ ಹೆದರಿದ್ದಾರೆ.

'ಇನ್ನಾರು ತಿಂಗಳಲ್ಲಿ ಕರ್ನಾಟಕದ ಮುಖ್ಯಮಂತ್ರಿ ಬದಲಾಗುತ್ತಾರೆ' ಎಂಬ ಕೋಡಿಮಠದ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮಿಗಳ ಭವಿಷ್ಯವಾಣಿ ಕೇಳಿಯೇ ಯಡ್ಡಿಗೆ ಈ ಬಿರುಬೇಸಿಗೆಯಲ್ಲಿ ಚಳಿಜ್ವರ ಬಂದಂತಾಗಿದೆ. ಯಡ್ಡಿ ಇದನ್ನೆಲ್ಲಾ ನಂಬುತ್ತಾರಾದ್ದರಿಂದ ಹೆದರಬೇಕಿರುವುದು ಸಹಜವೇ ಹೌದು.

ಇದು ಬರೀ ಹೆದರಿಕೆ ಮಾತ್ರವಲ್ಲ. ಅಧಿಕಾರ ಇರುವವರು ಕೋಡಿಮಠಕ್ಕೆ ಹೋದರೆ ಇರೋ ಅಧಿಕಾರವೂ ಹೋಗುತ್ತೆ! ಎನ್ನುವ ಹೊಸ ರೂಮರ್ ಕೇಳಿ ಇನ್ನಷ್ಟು ಹೆದರಿರುವ ಯಡ್ಡಿ ಈಗ ಆ ಮಠದತ್ತ ಮುಖವೇ ಹಾಕುತ್ತಿಲ್ಲ.

ಮಾರ್ಚ್ 13ರಂದು ಕೋಡಿಮಠದ ಸ್ವಾಮೀಜಿಯ ಪೀಠಾರೋಹಣದ ಇಪ್ಪತ್ತೈದನೇ ವಾರ್ಷಿಕೋತ್ಸವದ ಅತಿಥಿಯಾಗಿ ಹೋಗಲೇಬೇಕಿದ್ದ ಯಡ್ಡಿ ಬೇರೆ ಕೆಲಸದ ನೆಪ ಹೇಳಿ ಆ ಕಡೆ ಹೋಗಲೇ ಇಲ್ಲ. ಬಹುಶಃ ಇದರಿಂದ ಸಿಟ್ಟಾಗಿಯೋ ಏನೋ ಮಠದ ಸ್ವಾಮಿಗಳು ಯಾರೂ ಹೋಗಿ ಕೇಳಿರದಿದ್ದರೂ ತಾವಾಗಿಯೇ 'ಯಡ್ಡಿಗೆ ಅಧಿಕಾರ ಜಾಸ್ತಿ ದಿನ ಇರಲ್ಲ, ಅತಂತ್ರ ಸಂಸತ್ ರಚನೆ' ಎಂಬಿತ್ಯಾದಿ ಭವಿಷ್ಯ ನುಡಿದು ಬಿಟ್ಟಿದ್ದಾರೆ. ಇದಕ್ಕೂ ಮುನ್ನ ಅಸೆಂಬ್ಲಿ ಚುನಾವಣೆ ನಡೆಯುವಾಗ 'ಕರ್ನಾಟಕದಲ್ಲಿ ಬಿಜೆಪಿಗೆ ನೂರಾಹತ್ತರವರೆಗೆ ಸ್ಥಾನ ಸಿಗಲಿದೆ' ಎಂದಿದ್ದ ಅವರ ಭವಿಷ್ಯ ಬೇರೆ ನಿಜವಾಗಿತ್ತು. ಆದರಂತೆ ಯಡ್ಡಿ ಮುಖ್ಯಮಂತ್ರಿಯೂ ಆದರು. ಆದರೆ ಆ ನಂತರ ಯಡ್ಡಿ ಮಠದತ್ತ ತಿರುಗಿಯೂ ನೋಡಿರಲಿಲ್ಲ. ಇದರಿಂದ ಅಸಮಾಧಾನಗೊಂಡ ಶಿವಯೋಗಿ ರಾಜೇಂದ್ರ ಸ್ವಾಮಿಗಳು ಒಂದಿಬ್ಬರು ಆಪ್ತ ಸ್ನೇಹಿತರಾದ ಪತ್ರಕರ್ತರ ಬಳಿ ತಮ್ಮ ಬೇಸರ ತೋಡಿಕೊಂಡಿದ್ದರಂತೆ. ಇದು ಯಡ್ಡಿಯ ಪತ್ರಿಕಾ ಕಾರ್ಯದರ್ಶಿ ಆರ್.ಪಿ. ಜಗದೀಶ್ ಕಿವಿಗೂ ಬಿದ್ದು ಅವರು ಸ್ವಾಮಿಗೆ ಫೋನ್ ಮಾಡಿ ಏನೇನೋ ಸಬೂಬು ಹೇಳಿದ್ದೂ ಆಗಿತ್ತು. ಆದರೆ ಇದರಿಂದ ಸ್ವಾಮಿಗಳ ಅಸಮಾಧಾನ ಶಮನವಾಗದೆ ಅವರೀಗ 'ಯಡ್ಡಿಯ ಅಧಿಕಾರ ಹೋಗಲಿದೆ' ಎಂದು ಶಾಪ ಕೊಟ್ಟುಬಿಟ್ಟಿದ್ದಾರೆ. ಯಡ್ಡಿಯ ಭಯವೇನೆಂದರೆ 'ಕೋಡಿಮಠಕ್ಕೆ ಅಧಿಕಾರ ಇರದವರು ಹೋದರೆ ಅಧಿಕಾರ ಬರುತ್ತೆ. ಅಧಿಕಾರ ಇದ್ದವರು ಹೋದರೆ ಇರೋ ಅಧಿಕಾರವೂ ಹೋಗುತ್ತೇ' ಎಂದು. ಈ ಹಿಂದೆ ಪಿ.ವಿ. ನರಸಿಂಹ ರಾವ್, ಬೂಟಾ ಸಿಂಗ್, ಚಂದ್ರಬಾಬು ನಾಯ್ಡು ಮುಂತಾದವರಿಗೂ ಇದೇ ಗತಿ ಬಂದಿತ್ತು ಎಂದು ಯಡ್ಡಿಗೆ ಯಾರೋ ಹೇಳಿ ಮಠಕ್ಕೆ ಹೋಗದಂತೆ ಬ್ರೇಕ್ ಹಾಕಿದ್ದಾರೆ.



ಏನಿದು ನಾಡಿಶಾಸ್ತ್ರ?

ಕೋಡಿಮಠದ ಈ ನಾಡಿ ಶಾಸ್ತ್ರದ ಬಗ್ಗೆ ವಿವರಿಸುವ ಮುನ್ನ ಸಾಕ್ಷಾತ್ ಶಿವಯೋಗಿ ರಾಜೇಂದ್ರ ಸ್ವಾಮಿಗಳ ಬಗ್ಗೆಯೇ ನಾಲ್ಕು ಪರಿಚಯದ ಮಾತು ಇಲ್ಲಿ ಹೇಳಬೇಕು. ಇವರು ಒಂದು ಕಾಲದಲ್ಲಿ ಬೆಂಗಳೂರಿನ ಜಯದೇವ ಹಾಸ್ಟೆಲ್‌ನಲ್ಲಿದ್ದುಕೊಂಡು ರೇಣುಕಾಚಾರ್ಯ ಕಾಲೇಜಿನಲ್ಲಿ ಲಾ ಓದುತ್ತಿದ್ದರು. ಕೆಲಕಾಲ ವಿದ್ಯಾರ್ಥಿ ನಾಯಕರಾಗಿಯೂ ಓಡಾಡಿದ್ದರು. ನಂತರ ಅರಸೀಕೆರೆ ಹತ್ತಿರದ ಕೋಡಿ ಮಠಕ್ಕೆ ಹೋಗಿ ಹಿರಿಯ ಮಠಾಧೀಶ ಶಿವಲಿಂಗ ಸ್ವಾಮಿಗಳ ಜೂನಿಯರ್ ಆಗಿ ಮಠ ಸೇರಿದ್ದರು. ಹಾರನಹಳ್ಳಿ ಸುತ್ತಾಮುತ್ತಾ ಶಾರದಾ ಮಠ, ಸಿದ್ದೇಶ್ವರ ಮಠ, ಕೋಡಿಮಠ... ಹೀಗೆ ಐದಾರು ಸಣ್ಣಪುಟ್ಟ ಮಠಗಳಿವೆ. ಇವು ಅಂತಹ ಬಲಿಷ್ಠ ಮಠಗಳೇನಲ್ಲ.

ಆದರೆ ಕೋಡಿಮಠದಲ್ಲಿ ಪುರಾತನಕಾಲದ ಓಲೆಗರಿ, ತಾಳೇಗರಿ ತರದ ಕೆಲ ನಾಡಿಗ್ರಂಥಗಳಿವೆ. ಕೋಡಿಮಠ ಬಿಟ್ಟರೆ ಇಂತಹ ನಾಡಿಶಾಸ್ತ್ರ ಹೇಳುವ ಇನ್ನೊಂದು ಪ್ರಖ್ಯಾತ ಸ್ಥಳ ಇರುವುದು ಪಕ್ಕದ ತಮಿಳುನಾಡಿನ ವೈದ್ಯೇಶ್ವಯಂ ಕೊಯಲ್ ಎಂಬ ಊರಿನಲ್ಲಿ. ಆ ಊರಿನ ತುಂಬಾ ನೂರಾರು ನಾಡಿಶಾಸ್ತ್ರ ಹೇಳುವವರಿದ್ದಾರೆ. ಸಾವಿರಾರು ನಾಡಿಗ್ರಂಥಗಳೂ ಇವೆ.

ತಮ್ಮ ಭವಿಷ್ಯ ಕೇಳಿ ಯಾರೇ ಹೋದರೂ ಕೂರಿಸಿ ನಾಲ್ಕಾರು ಸ್ವವಿವರದ ಪ್ರಶ್ನೆ ಕೇಳಿ ನಂತರ ಕಡ್ಡಿಯಂತಹ ವಸ್ತುವೊಂದನ್ನು ಆ ನಾಡಿಗ್ರಂಥಗಳ ಮೇಲೆ ಆಡಿಸುತ್ತಾ ಕೊನೆಗೊಂದು ತಾಳೇಗರಿ ತೆಗೆದು ಓದುತ್ತಾರೆ. ಅದರಲ್ಲಿ ಒಗಟಿನಂತಹ ಹಲವು ವಾಕ್ಯಗಳಿರುತ್ತವೆ. ಉದಾಹರಣೆಗೆ 'ಮುತ್ತು ಒಡೆದರೆ ಹೋಯ್ತು, ಚಿನ್ನ ಬಂದರೆ ಹೋಯ್ತು..' ಹೀಗೆ. ಈ ಸ್ವಾಮಿಗಳು ಒಗಟಿನ ಅರ್ಥವನ್ನು ಗಿರಾಕಿ ರಾಜಕಾರಣಿಗಳಿಗೆ ಬಿಡಿಸಿ ವಿವರಿಸಿ ಬೀಳ್ಕೊಡುತ್ತಾರೆ.

ಕೋಡಿಮಠದಲ್ಲಿ ನಡೆಯುವುದೂ ಇದೇನೇ!

1978ರಲ್ಲಿ ಇಂದಿರಾ ಗಾಂಧಿಯನ್ನು ದೇವರಾಜು ಅರಸು ಕರೆತಂದ ಕಾರಣಕ್ಕೆ ಕೋಡಿಮಠಕ್ಕೆ ಹೆಚ್ಚು ಪ್ರಚಾರ ಸಿಕ್ಕಿತು. ಆಗ ಸ್ವಾಮಿಗಳ ಸಲಹೆಯಂತೆ ಇಂದಿರಾ ಗಾಂಧಿ ಚಿಕ್ಕಮಗಳೂರಿನಿಂದ ಸಂಸತ್‌ಗೆ ಸ್ಪರ್ಧಿಸಿ ಗೆದ್ದಮೇಲೆ ಮಠದ ನಾಡಿಶಾಸ್ತ್ರದ ಕೀರ್ತಿ ಇನ್ನಷ್ಟು ಹೆಚ್ಚಾಯಿತು. ಒಬ್ಬರ ಹಿಂದೆ ಇನ್ನೊಬ್ಬರಂತೆ ರಾಜಕಾರಣಿಗಳೂ ಬಂದು ಹೋಗತೊಡಗಿದರು. ದೂರದ ಒರಿಸ್ಸಾದಿಂದ ಜೆ.ಬಿ.ಪಾಟ್ನಾಯಕ್, ಬೂಟಾ ಸಿಂಗ್ ಮುಂತಾದವರೂ ಬಂದುಹೋದರು. ಕಾಕತಾಳೀಯವೋ, ಆಕಸ್ಮಿಕವೋ ಸ್ವಾಮೀಜಿ ಹೇಳಿದ ಕೆಲ ಭವಿಷ್ಯವಾಣಿ ನಿಜವೂ ಆಗಿಹೋಯಿತು. ಹೀಗೆ ಹತ್ತರಲ್ಲೊಂದು ಮಾತು ನಿಜವಾದರೆ ಸಾಲದೇ? ನಮ್ಮ ರಾಜಕಾರಣಿಗಳು ಆಡುವ ನೂರು ಮಾತಿನಲ್ಲಿ ಒಂದೂ ನಿಜವಾಗದಿರುವಾಗ ಯಾರೋ ಸ್ವಾಮಿ ಹೇಳುವ ಹತ್ತರಲ್ಲಿ ಒಂದೆರಡು ಮಾತು ನಿಜವಾದರೆ ಯಾರಿಗೆ ತಾನೆ ನಂಬಿಕೆ ಬರಲ್ಲ... ಹೀಗೆ ಕೋಡಿಮಠದ ನಾಡಿಶಾಸ್ತ್ರಕ್ಕೆ ಬೇಡಿಕೆ ಬಂದೇ ಬಂತು. ಈಗ ಕುಮಾರಸ್ವಾಮಿ, ಧರಂ ಸಿಂಗ್, ಚೆಲುವರಾಯ ಸ್ವಾಮಿ ಯಾದಿಯಾಗಿ ಬಹುತೇಕ ಪ್ರಮುಖರು ಯುವ ರಾಜಕಾರಣಿಗಳೆಲ್ಲಾ ಅದೇನೋ ಚುನಾವಣಾ ವಿಧಿ ವಿಧಾನವೆಂಬಂತೆ ಕೋಡಿಮಠಕ್ಕೆ ಹೋಗಿಬರುತ್ತಿದ್ದಾರೆ.

ಒಂದು ಕಡೆ ಮತದಾರರೇ ನಮ್ಮ ಹಣೆಬರಹ ಬರೆಯಲಿದ್ದಾರೆ ಎಂದು ಹೇಳುತ್ತಲೇ, ಮತ್ತೊಂದೆಡೆ ಜಾತಕ ಜ್ಯೋತಿಷ್ಯ ಬೆನ್ನು ಹತ್ತುತ್ತಿದ್ದಾರೆ.


ಯಾವ್ಯಾವುದೋ ಟಿವಿ ಚಾನಲ್ಲು, ಪತ್ರಿಕಾ ಗುಂಪುಗಳು ಚುನಾವಣಾ ಸಮೀಕ್ಷೆ ನಡೆಸುತ್ತಿರುವಾಗ ನಾನೂ ಯಾಕೆ ಒಂದು ಕೈ ನೋಡಬಾರದೆಂಬ ಇರಾದೆ ಕೋಡಿಮಠಾಧೀಶರಿಗೂ ಇದ್ದಂತಿದೆ. ಅದಕ್ಕೆ ತಕ್ಕಂತೆ ಪುಢಾರಿಗಳು, ಮೀಡಿಯಾಗಳೂ ಇವೆ.

ಕೋಡಿಮಠದ ನಾಡಿಶಾಸ್ತ್ರ ಚಾಲ್ತಿಯಲ್ಲಿದೆ. ಇವೆಲ್ಲದರ ನಡುವೆ ಅಧಿಕಾರ ಕಳೆದುಕೊಳ್ಳುವ ಭಯ ಯಡ್ಡಿ ಮುಖದಲ್ಲಿ ಕಾಣುತ್ತಿದೆ. ಅದು ನೋಡಲು ಭಾರೀ ತಮಾಷೆಯಾಗಿದೆ.










ದಿಲ್ಲಿ ಗದ್ದುಗೆ ಏರೋರ್ಯಾರು?

ಈ ಪ್ರಶ್ನೆಗೆ ಸರಳವಾಗಿ ಉತ್ತರಿಸುವ ಕಾಲವೊಂದಿತ್ತು. ಐವತ್ತು, ಅರವತ್ತು, ಎಪ್ಪತ್ತರ ದಶಕಗಳಲ್ಲಿ ಕಾಂಗ್ರೆಸ್‌ನ ಪರಮೋಚ್ಛ ನಾಯಕರೇ ದೇಶದ ಪ್ರಧಾನಿ ಪಟ್ಟ ಏರೋದು ಅನ್ನೋದರಲ್ಲಿ ಯಾರಿಗೂ ಯಾವುದೇ ಅನುಮಾನಗಳಿರಲಿಲ್ಲ. ಎಪ್ಪತ್ತರ ದಶಕದ ಕೊನೆಯ ವೇಳೆಗೆ ಜನತಾಪಕ್ಷದ ಮೊರಾರ್ಜಿ ದೇಸಾಯಿ ಮತ್ತು ಚರಣ್ ಸಿಂಗ್ ಪ್ರಧಾನಿ ಪಟ್ಟಕ್ಕೇರುವುದರೊಂದಿಗೆ ಈ ಪ್ರಶ್ನೆಗೆ ಬಹು ಉತ್ತರಗಳ ಸಾಧ್ಯತೆಯ ಯುಗವೊಂದು ಪ್ರಾರಂಭವಾಯಿತು. ಆಗಲೂ ಆಯ್ಕೆಗಳು ಜಾಸ್ತಿಯಿರಲಿಲ್ಲ. ನಂತರ, 1952ರ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಕೇವಲ 3 ಸೀಟುಗಳನ್ನು ಗೆದ್ದಿದ್ದ ಬಿಜೆಪಿ (ಅಂದಿನ ಜನಸಂಘ) ಮೊದಲ ಬಾರಿ 161 ಸೀಟುಗಳನ್ನು ಗೆಲ್ಲುವ ಮೂಲಕ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮುವುದರೊಂದಿಗೆ ದೆಹಲಿ ಗದ್ದುಗೆ ಏರುವ ಸಾಧ್ಯತೆ ಕಾಂಗ್ರೆಸ್-ಬಿಜೆಪಿಗಳ ನಡುವಿನ ಆಯ್ಕೆಯಾಗಿ ಮಾರ್ಪಟ್ಟಿತು.



ಈಗ ಅದೆಲ್ಲ ಚರಿತ್ರೆ. ದೆಹಲಿ ಗದ್ದುಗೆಗೆ ಈಗ ಕೇವಲ ಎರಡು ಆಯ್ಕೆಗಳಿಲ್ಲ, ಬಹು ಆಯ್ಕೆಗಳಿವೆ. ಒಂದೆಡೆ ಸೋನಿಯಾ ಗಾಂಧಿಯವರು ಹಾಲಿ ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಅವರೇ ಕಾಂಗ್ರೆಸ್ ಪ್ರಧಾನಿ ಅಭ್ಯರ್ಥಿ ಎಂದು ಘೋಷಿಸಿದ್ದಾರೆ. ಇನ್ನೊಂದೆಡೆ ಒಮ್ಮೆಯಾದರೂ ಪ್ರಧಾನಿ ಪಟ್ಟ ಏರಿ ಇಳಿಯಬೇಕೆಂಬ



ದಶಕಗಳ ಕನಸನ್ನು ನನಸು ಮಾಡಿಕೊಳ್ಳುವುದಕ್ಕೆ ಬಿಜೆಪಿಯ ಎಲ್.ಕೆ.ಅಧ್ವಾನಿ ಚಾತಕಪಕ್ಷಿಯಂತೆ ಕಾಯುತ್ತಿದ್ದಾರೆ. ಮತ್ತೊಂದೆಡೆ ಉತ್ತರ ಪ್ರದೇಶದ ಮುಖ್ಯಮಂತ್ರಿ, ಬಹುಜನ ಸಮಾಜ ಪಕ್ಷದ (ಬಿಎಸ್ಪಿ) ಮಾಯಾವತಿ ನಾನೇ ಮುಂದಿನ ಪ್ರಧಾನಿ ಎಂದು ಹೂಂಕರಿಸುತ್ತಿದ್ದಾರೆ. ಮಗದೊಂದೆಡೆ ಮರಾಠನೊಬ್ಬ ಪ್ರಧಾನಿ ಏಕಾಗಬಾರದು ಎಂದು ರಾಷ್ಟ್ರವಾದಿ ಕಾಂಗ್ರೆಸ್ ಪಕ್ಷದ ಶರದ್ ಪವಾರ್ ಗೊಣಗುಟ್ಟುತ್ತಿದ್ದಾರೆ. ನನಗೂ ಪ್ರಧಾನಿಯಾಗೋ ಆಸೆಯಿದೆ, ಚುನಾವಣೆ ಮುಗಿದ ಮೇಲೆ ಎಷ್ಟು ಸೀಟು ಗೆಲ್ಲುತ್ತೇವೆಯೋ ಅದರ ಆಧಾರದಲ್ಲಿ ಮುಂದೆ ನೋಡೋಣ ಎಂದು ರಾಷ್ಟ್ರೀಯ ಜನತಾದಳದ (ಆರ್‌ಜೆಡಿ) ಲಾಲೂ ಪ್ರಸಾದ್ ಯಾದವ್ ಒಂದು ಬಾಣ ಬಿಟ್ಟಿದ್ದಾರೆ.

ವಿಶೇಷ ಎಂದರೆ ಈ ಯಾವ ಸಾಧ್ಯತೆಯನ್ನೂ ತಳ್ಳಿ ಹಾಕುವಂತಿಲ್ಲ. ಅಸಲಿಗೆ ಲೋಕಸಭಾ ಚುನಾವಣೆಗಳು ಈ ರೇಸ್‌ನಲ್ಲಿ ಪ್ರಾಥಮಿಕ ಹೋರಾಟವಷ್ಟೆ. ನಿಜವಾದ ಮತ್ತು ಕಷ್ಟಕರ ಹೋರಾಟವಿರುವುದು ಮೇ 16ರ ನಂತರ. ಅಂದರೆ, ಚುನಾವಣೆಗಳು ಮುಗಿದು ಫಲಿತಾಂಶ ಪ್ರಕಟವಾದ ಮೇಲೆ. ಯಾರ್‍ಯಾರು ಎಷ್ಟೆಷ್ಟು ಸೀಟುಗಳನ್ನು ಗೆದ್ದಿದ್ದಾರೆ ಎಂಬುದರ ಆಧಾರದ ಮೇಲೆ. ಚುನಾವಣಾ ಪೂರ್ವದಲ್ಲಿ ರೂಪು ತಳೆದಿರುವ ಬಿಜೆಪಿ ನೇತೃತ್ವದ ನ್ಯಾಷನಲ್ ಡೆಮಾಕ್ರಟಿಕ್ ಅಲಯನ್ಸ್ (ಎನ್‌ಡಿಎ), ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಪ್ರೋಗ್ರೆಸ್ಸಿವ್ ಅಲಯನ್ಸ್ (ಯುಪಿಎ) ಹಾಗೂ ಎಡಪಕ್ಷಗಳ ನೇತೃತ್ವದ ತೃತೀಯ ರಂಗ – ಇವೆಲ್ಲವೂ ಚುನಾವಣಾ ಫಲಿತಾಂಶದ ನಂತರವೂ ಹಾಗೇ ಇರುತ್ತವೆ ಎಂದೇನಲ್ಲ. ಯಾರ್‍ಯಾರಿಗೆ ಎಲ್ಲೆಲ್ಲಿ ಹೋದರೆ ಅನುಕೂಲವಾಗುತ್ತದೆಯೋ ಅಲ್ಲಿಗೆ ಆರಾಮಾಗಿ ಹಾರಾಟ ನಡೆಸುತ್ತಾರೆ.

ಒಂದಂತೂ ಸ್ಪಷ್ಟ. ಈ ಚುನಾವಣೆಯಲ್ಲಿ ಯಾವುದೇ ಒಂದು ಪಕ್ಷ ಬಹುಮತ ಪಡೆದು ಕೇಂದ್ರದಲ್ಲಿ ಸರ್ಕಾರ ರಚಿಸುವುದಕ್ಕೆ ಸಾಧ್ಯವೇ ಇಲ್ಲ. ಅದೆಲ್ಲಾ ರಾಜೀವ್ ಗಾಂಧಿ ಕಾಲಕ್ಕೇ ಮುಗಿದು ಹೋದ ಕತೆ. ಇಂದಿರಾಗಾಂಧಿ ಹತ್ಯೆಯ ನಂತರದ ಅನುಕಂಪದಲೆಯಲ್ಲಿ ರಾಜೀವ್ ನೇತೃತ್ವದ ಕಾಂಗ್ರೆಸ್ 414 ಸ್ಥಾನಗಳನ್ನು ಗೆದ್ದು ಸ್ಪಷ್ಟ ಬಹುಮತ ಪಡೆದಿದ್ದೇ ಕೊನೆ. ಅಲ್ಲಿಂದಾಚೆಗೆ ಇಲ್ಲಿಯತನಕ ಯಾವುದೇ ಪಕ್ಷ ಸರ್ಕಾರ ರಚಿಸುವುದಕ್ಕೆ ಬೇಕಿರುವ 272 ಸ್ಥಾನಗಳನ್ನು ಪಡೆದಿಲ್ಲ. ಆದ್ದರಿಂದಲೇ ಇದು ಎನ್‌ಡಿಎ, ಯುಪಿಎ, ತೃತೀಯ ರಂಗಗಳಂಥ ಅನಿವಾರ್ಯ ಮೈತ್ರಿಕೂಟ ರಚನೆಗಳಿಗೆ ಕಾರಣವಾಗಿದೆ. ಈ ಕೂಟಗಳಲ್ಲಿ ಪ್ರಾದೇಶಿಕ ಪಕ್ಷಗಳೇ ನಿರ್ಣಾಯಕವಾಗುತ್ತಿದ್ದಾವೆ.



ಎನ್‌ಡಿಎ


ಅಡಿಪಾಯ ಛಿದ್ರ - ಕನಸು ಭಗ್ನ

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವೇ ಈ ಬಾರಿ ಅಧಿಕಾರಕ್ಕೇರುತ್ತೆ ಅಂತ ಆರಂಭದಲ್ಲಿ ಅನೇಕರು ವಿಶ್ಲೇಷಿಸಿದ್ದರು. ಆದರೆ ಅದೀಗ ತಲೆಕೆಳಗಾಗುವ ಲಕ್ಷಣಗಳೇ ಜಾಸ್ತಿಯಾಗಿವೆ. ರಾಷ್ಟ್ರೀಯ ಮೈತ್ರಿಕೂಟವೊಂದನ್ನು ಯಶಸ್ವಿಯಾಗಿ ಮುನ್ನಡೆಸಬೇಕೆಂದರೆ ಕೂಟದ ನೇತೃತ್ವ ವಹಿಸಿಕೊಂಡಿರುವ ಪಕ್ಷ ಮೊದಲು ಗಟ್ಟಿಯಾಗಿರಬೇಕು. ಎನ್‌ಡಿಎ ಮೈತ್ರಿಕೂಟದ ನೇತೃತ್ವ ವಹಿಸಿಕೊಂಡಿರುವ ಬಿಜೆಪಿ ಈಗ ರಾಷ್ಟ್ರ ಮಟ್ಟದಲ್ಲೂ, ರಾಜ್ಯಗಳ ಮಟ್ಟದಲ್ಲೂ ಒಡೆದ ಮನೆ. ಅತ್ತ ರಾಷ್ಟ್ರ ಮಟ್ಟದಲ್ಲಿ ಬಿಜೆಪಿ ಅಧ್ಯಕ್ಷ ರಾಜನಾಥ್ ಸಿಂಗ್ ಮತ್ತು ಪಕ್ಷದ ಮಿದುಳು ಎಂದೇ ಪರಿಗಣಿತವಾಗಿರುವ ಅರುಣ್ ಜೇಟ್ಲಿ ನಡುವಿನ ಮುಸುಕಿನ ಗುದ್ದಾಟವೀಗ ಅಗಸಿ ಬಾಗಿಲಿಗೆ ಬಂದುನಿಂತಿದೆ. ಇನ್ನು ಕರ್ನಾಟಕದಲ್ಲಿ ಅನಂತೂ-ಯಡ್ಡಿ ನಡುವಿರುವಂತೆಯೇ ಅನೇಕ ರಾಜ್ಯಗಳಲ್ಲಿ ಪಕ್ಷದಲ್ಲಿಯೇ ದೊಡ್ಡ ಮಟ್ಟದ ತಿಕ್ಕಾಟ ನಡೆಯುತ್ತಿದೆ. ಒಗ್ಗಟ್ಟಿನಿಂದ ಚುನಾವಣೆ ಎದುರಿಸಬೇಕಿದ್ದ ಇಂತಹ ಸಂದರ್ಭದಲ್ಲಿ ಒಳಜಗಳ ಬಗೆಹರಿಸುವುದಕ್ಕೆ ಅದರ ಅರ್ಧ ಟೈಮು ಖರ್ಚಾಗುತ್ತಿದೆ.

ಇದೇ ಹೊತ್ತಿನಲ್ಲಿ "ಎಲ್ಲಾ ಹಿಂದೂಗಳು ಒಂದೆಡೆ ನಿಂತು ಉಳಿದವರನ್ನು ಪಾಕಿಸ್ತಾನಕ್ಕೆ ಕಳುಹಿಸಿ... ಇದು ಕಮಲದ ಹಸ್ತ, ಚುನಾವಣೆಗಳ ಬಳಿಕ ಅವರ ಕೊರಳುಗಳನ್ನು ಕತ್ತರಿಸುತ್ತದೆ... ಹಿಂದೂಗಳ ವಿರುದ್ಧ ಯಾರಾದರೂ ಕೈ ಎತ್ತಿದರೆ ಕತ್ತರಿಸಿ ಹಾಕುತ್ತೇನೆಂದು ಭಗವದ್ಗೀತೆಯ ಮೇಲೆ ಆಣೆ ಮಾಡಿ ಹೇಳುತ್ತೇನೆ..." ಎಂದು ಬಿಜೆಪಿಯ ಫಿಲಿಬಿಟ್ ಲೋಕಸಭಾ ಅಭ್ಯರ್ಥಿ ವರುಣ್ ಗಾಂಧಿ ಅರಚಾಡಿ ಜೈಲು ಪಾಲಾಗಿದ್ದು ಬಿಜೆಪಿಗೆ ಇರುಸು ಮುರುಸು ಉಂಟು ಮಾಡಿದೆ. ಅದರಲ್ಲೂ ವಿಶೇಷವಾಗಿ ವಾಜಪೇಯಿಯಂತೆ ಸೌಮ್ಯ ಮುಖ ಪ್ರದರ್ಶಿಸಿ ಪ್ರಧಾನಿ ಗದ್ದುಗೆಗೇರಬೇಕೆಂದು ಕಷ್ಟಪಡುತ್ತಿರುವ ಅಧ್ವಾನಿಯ ಇಮೇಜಿಗೆ ಭಾರಿ ಧಕ್ಕೆಯುಂಟು ಮಾಡಿದೆ. ಅಧ್ವಾನಿಗೆ ಇದೊಂಥರಾ ಬಿಸಿ ತುಪ್ಪ. ನುಂಗುವಂತೆಯೂ ಇಲ್ಲ, ಉಗುಳುವಂತೆಯೂ ಇಲ್ಲ. ಹಿಂದೂತ್ವವನ್ನು ಸಂಪೂರ್ಣ ಕೈಬಿಟ್ಟು, ಕೇವಲ ಸೌಮ್ಯವದನ ಪ್ರದರ್ಶಿಸುತ್ತಾ ಹೋದರೆ ಸಂಘ ಪರಿವಾರದ ಹಾರ್ಡ್‌ಕೋರ್‌ಗಳ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ; ದಶಕಗಳ ಕಾಲ ತಾನೇ ಶ್ರಮಪಟ್ಟು ಬಹುಸಂಖ್ಯಾತ ಹಿಂದೂಗಳ ಮನಸ್ಸಿನಲ್ಲಿ ಮುಸ್ಲಿಮ್ ವಿರೋಧಿ ಭಾವನೆಗಳನ್ನು ಕೆರಳಿಸಿದ್ದು ಕೆಲಸಕ್ಕೆ ಬಾರದಂತೆ ಹೋಗುತ್ತದೆ. ಹಾಗಂತ ಪ್ರಖರ ಹಿಂದೂತ್ವವಾದಿಗಳನ್ನು, ಆರೆಸ್ಸೆಸ್, ಭಜರಂಗದಳ, ವಿಹೆಚ್‌ಪಿಗಳಂಥ ಹಾರ್ಡ್‌ಕೋರ್‌ಗಳ ಬೆಂಬಲ ಪಡೆಯಲು ನರೇಂದ್ರ ಮೋದಿ ಥರ, ವರುಣ್ ಗಾಂಧಿ ಥರ ನೇರವಾಗಿ ಅಲ್ಪಸಂಖ್ಯಾತರ ವಿರುದ್ಧ ವಿಷ ಕಕ್ಕಲು ಇಳಿದುಬಿಟ್ಟರೆ ಎನ್‌ಡಿಎದ ಮಿತ್ರಪಕ್ಷಗಳು, ಶಾಂತಿ ಬಯಸುವ ಮಧ್ಯಮ ವರ್ಗ ದೂರವಾಗುತ್ತಾರೆ. ಹಾಗೇನಾದರೂ ಆದರೆ ಈಗಾಗಲೇ ಅರ್ಧ ಸೊರಗಿರುವ ಎನ್‌ಡಿಎ ಮತ್ತಷ್ಟು ಬಡಕಲಾಗಿ ಅಧ್ವಾನಿಯ ಪ್ರಧಾನಿ ಕನಸುಕನಸಾಗಿಯೇ ಉಳಿದುಬಿಡುತ್ತದೆ. ವಾಸ್ತವದಲ್ಲಿ ಇದು ಬಿಜೆಪಿಗೆ, ಅದರಲ್ಲೂ ವಿಶೇಷವಾಗಿ ಅಧ್ವಾನಿಗೆ ಎದುರಾಗಿರುವ ಧರ್ಮಸಂಕಟ.

■ ಕುಮಾರ್ ಬುರಡಿಕಟ್ಟಿ

ಇನ್ನೊಂದೆಡೆ ನೋಡಿ. ಒಂದು ಕಾಲದಲ್ಲಿ ಎನ್‌ಡಿಎದ ಬೆನ್ನೆಲುಬಾಗಿ ನಿಂತಿದ್ದ, ಅಟಲ್ ಬಿಹಾರಿ ಪ್ರಧಾನಿ ಗದ್ದುಗೆಯಲ್ಲಿ ಕುಳಿತುಕೊಳ್ಳುವುದಕ್ಕೆ ಕಾರಣೀಭೂತರಾಗಿದ್ದ ಆಂಧ್ರ ಪ್ರದೇಶದ ತೆಲುಗುದೇಶಂ ನಾಯಕ ಚಂದ್ರಬಾಬು ನಾಯ್ಡು, ತಮಿಳುನಾಡಿನ ಅಣ್ಣಾ ಡಿಎಂಕೆಯ ಜಯಲಲಿತಾಗಳಂಥ ದೊಡ್ಡ ದೊಡ್ಡ ಪ್ರಾದೇಶಿಕ ಪಕ್ಷಗಳೆಲ್ಲವೂ ಇಂದು ಅದರಿಂದ ದೂರವಾಗಿವೆ. ತೀರಾ ಇತ್ತೀಚೆಗೆ ಬಿಜೆಪಿಯ ಅತ್ಯಂತ ಹಳೆಯ ಮಿತ್ರ ಒರಿಸ್ಸಾದ ಮುಖ್ಯಮಂತ್ರಿ ಮತ್ತು ಬಿಜು ಜನತಾದಳದ ನಾಯಕ ನವೀನ್ ಪಟ್ನಾಯಕ್ ಬಿಜೆಪಿಯಿಂದ ದೂರ ಹೋಗಿದ್ದಲ್ಲದೇ ಬಿಜೆಪಿಗಳ ಕಟ್ಟಾ






ವೈರಿಗಳಾಗಿರುವ ಕಮ್ಯೂನಿಸ್ಟರೊಂದಿಗೆ ಕೈಜೋಡಿಸಿದ್ದಾರೆ. ಇಂದು ಎನ್‌ಡಿಎ ಮೈತ್ರಿಕೂಟದಲ್ಲಿ ಹೆಸರಿಗೆ ಬಹಳಷ್ಟು ಪಕ್ಷಗಳಿವೆಯಾದರೂ ಅವುಗಳಲ್ಲಿ ಸೀಟುಗಳನ್ನು ಗೆದ್ದು ತರಬಲ್ಲ ಪಕ್ಷಗಳು ಎರಡು-ಮೂರು ಮಾತ್ರ. ಪ್ರಕಾಶ್ ಸಿಂಗ್ ಬಾದಲ್ ನೇತೃತ್ವದ ಶಿರೋಮಣಿ ಅಕಾಲಿದಳ (ಪಂಜಾಬ್), ನಿತೀಶ್ ಕುಮಾರ್ ನೇತೃತ್ವದ ಜನತಾದಳ (ಯುನೈಟೆಡ್) ಮಾತ್ರವೇ ಎನ್‌ಡಿಎಗೆ ಒಂದಿಷ್ಟು ಆಸರೆಯಾಗಬಲ್ಲವು. ಅದರಲ್ಲೂ ವರುಣ್ ಗಾಂಧಿಯ ವಿಷಕಾರಕ ಮುಸ್ಲಿಮ್ ವಿರೋಧಿ ಭಾಷಣದ ನಂತರ ನಿತೀಶ್ ಕುಮಾರ್ ಕೂಡ ಬಹಿರಂಗವಾಗಿ ಬಿಜೆಪಿಯ ವಿರುದ್ಧ ತಿರುಗಿಬಿದ್ದಿದ್ದಾರೆ. ಹಾಗೆ ನೋಡಿದರೆ, ಈ ಎರಡೂ ಪಕ್ಷಗಳಿಂದಲೂ ಎನ್‌ಡಿಎಗೆ ಹೇಳಿಕೊಳ್ಳುವಂಥ ಲಾಭವೇನೂ ಆಗುವುದಿಲ್ಲ. ಬಿಹಾರದ 40 ಸೀಟುಗಳಲ್ಲಿ ಬಹುಪಾಲನ್ನು ಲಾಲೂ ಪ್ರಸಾದ್ ಯಾದವ್‌ರ ರಾಷ್ಟ್ರೀಯ ಜನತಾದಳ, ರಾಮ್ ವಿಲಾಸ್ ಪಾಸ್ವಾನ್‌ರ ಲೋಕ ಜನಶಕ್ತಿ ಪಾರ್ಟಿ ಕಿತ್ತುಕೊಳ್ಳುವುದರಿಂದ ನಿತೀಶ್‌ಗೆ, ಆ ಮೂಲಕ ಎನ್‌ಡಿಎಗೆ ಹೆಚ್ಚೇನೂ ಲಾಭವಾಗಲಾರದು. ಅಕಾಲಿದಳದ ಕತೆಯೂ ಇದಕ್ಕಿಂತ ಭಿನ್ನವಾಗಿಲ್ಲ. ಪಂಜಾಬ್‌ನಲ್ಲಿ ಇರೋದೆ 13 ಸೀಟು. ಅವುಗಳಲ್ಲಿ ಅರ್ಧದಷ್ಟನ್ನು ತೀವ್ರ ಪೈಪೋಟಿ ನಡೆಸುತ್ತಿರುವ ಅಮರಿಂದರ್ ಸಿಂಗ್ ನೇತೃತ್ವದ ಕಾಂಗ್ರೆಸ್ ಕಿತ್ತುಕೊಂಡರೆ ಅಕಾಲಿಗೆ ಉಳಿಯುವುದು ಆರೆಂಟು ಸ್ಥಾನ ಮಾತ್ರ.

ಉಳಿದಂತೆ ಅಜಿತ್ ಸಿಂಗ್‌ರ ರಾಷ್ಟ್ರೀಯ ಲೋಕದಳ, ಪಟೋವರಿಯ ಅಸ್ಸಾಮ್ ಗಣ ಪರಿಷತ್, ಓಂ ಪ್ರಕಾಶ್ ಚೌತಾಲಾ ಅವರ ಇಂಡಿಯನ್ ನ್ಯಾಷನಲ್ ಲೋಕದಳಗಳು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂಥ ಪರಿಸ್ಥಿತಿಯಲ್ಲಿವೆ.

ಇನ್ನು ಬಿಜೆಪಿಯನ್ನೇ ಖುದ್ದಾಗಿ ನೋಡಿ. ದೇಶದ ಒಟ್ಟು 543 ಲೋಕಸಭಾ ಕ್ಷೇತ್ರಗಳ ಪೈಕಿ ಅರ್ಧದಷ್ಟು ಕ್ಷೇತ್ರಗಳನ್ನು ಕೆಲವೇ ರಾಜ್ಯಗಳು ಹೊಂದಿವೆ. ಉತ್ತರ ಪ್ರದೇಶ 80 ಸ್ಥಾನಗಳನ್ನು, ಮಹಾರಾಷ್ಟ್ರ 48 ಸ್ಥಾನಗಳನ್ನು, ಬಿಹಾರ 40 ಸ್ಥಾನಗಳನ್ನು, ತಮಿಳುನಾಡು 39 ಸ್ಥಾನಗಳನ್ನು, ಪಶ್ಚಿಮ ಬಂಗಾಳ 42 ಸ್ಥಾನಗಳನ್ನು, ಆಂಧ್ರ ಪ್ರದೇಶ 42 ಸ್ಥಾನಗಳನ್ನು ಹೊಂದಿವೆ. ವಿಶೇಷ ಎಂದರೆ ಈ ಯಾವ ರಾಜ್ಯದಲ್ಲೂ ಬಿಜೆಪಿಗೆ ನೆಲೆಯಿಲ್ಲ. 25 ಸ್ಥಾನಗಳನ್ನು ಹೊಂದಿರುವ ರಾಜಸ್ತಾನದಲ್ಲಿ ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ನೆಲಕಚ್ಚಿದೆ. ಉಳಿದಿರುವುದು 26 ಸ್ಥಾನಗಳನ್ನು ಹೊಂದಿರುವ ಗುಜರಾತ್, 29 ಸ್ಥಾನಗಳನ್ನು ಹೊಂದಿರುವ ಮಧ್ಯಪ್ರದೇಶ ಮತ್ತು 28 ಸ್ಥಾನಗಳನ್ನು ಹೊಂದಿರುವ ಕರ್ನಾಟಕಗಳೇ ಅದಕ್ಕಿರುವ ನಿಜವಾದ ನೆಲೆಗಳು. ಕರ್ನಾಟಕದಲ್ಲಿ ಬಿಜೆಪಿಯ ಒಂದು ವರ್ಷದ ಕೆಟ್ಟ ಆಡಳಿತದಿಂದಾಗಿ, ಕಾಂಗ್ರೆಸ್ ದೊಡ್ಡ ದೊಡ್ಡ ತಿಮಿಂಗಲಗಳನ್ನು ಕಣಕ್ಕಿಳಿಸುತ್ತಿರುವುದರಿಂದಾಗಿ ಹಾಗೂ ಜೆಡಿಎಸ್ ಮತ್ತೆ ಚೇತರಿಸಿಕೊಳ್ಳುತ್ತಿರುವುದರಿಂದಾಗಿ ಬಿಜೆಪಿಗೆ ಕಳೆದ ಬಾರಿ ಬಂದಷ್ಟು ಸೀಟುಗಳೂ ಸಿಗುವುದಿಲ್ಲ.

ಬಿಜೆಪಿಗೆ ಸಂಬಂಧಪಟ್ಟಂತೆ ಇನ್ನೊಂದು ವಿಚಾರ. ಒಂದು ಹಂತದಲ್ಲಿ ವಾಜಪೇಯಿಯಂಥ ಸೌಮ್ಯ – ಅಧ್ವಾನಿಯಂಥ ಕ್ರೂರ ಮುಖಗಳ ಕಾಂಬಿನೇಶನ್ ಆಗಿತ್ತು ಬಿಜೆಪಿ. ಬಿಜೆಪಿಯ ರಕ್ತಸಿಕ್ತ ನಂಜುಕಾರಕ ಐಡಿಯಾಲಜಿಯನ್ನು ವಿರೋಧಿಸುವವರೂ ವಾಜಪೇಯಿಯವರನ್ನು ಗೌರವಿಸುತ್ತಿದ್ದರು. ಈಗ ಅವರು ರಾಜಕೀಯದಿಂದ ನಿವೃತ್ತರಾಗಿದ್ದಾರೆ. ಅರುಣ್ ಜೇಟ್ಲಿಯಂತೆಯೇ ಚಾಣಾಕ್ಷವಾಗಿ ಸರ್ಕಾರ, ಪಕ್ಷಗಳನ್ನು ಮುನ್ನಡೆಸಿದ ಪ್ರಮೋದ್ ಮಹಾಜನ್ ಈಗ ಸತ್ತುಹೋಗಿದ್ದಾರೆ. ಈಗ ಉಳಿದಿರುವುದು ವರುಣ್.







ಮೋದಿಗಳಂಥ ಕ್ರೂರಮುಖಗಳು ಮಾತ್ರವೇ. ಬಹಳಷ್ಟು ಶ್ರಮಪಟ್ಟು ಸೌಮ್ಯವಾಗಲು ...ಸಿದಷ್ಟೂ ಬಟಾಬಯಲಾಗಿ ನಿಲ್ಲುತ್ತಿದ್ದಾರೆ. ಬಾಬ್ರಿ ಕೆಡವಿದ, ದೇಶದಾದ್ಯಂತ ಕೋಮುಗಲಭೆಗಳನ್ನು ...ಸಾವಿರಾರು ಜನರ ಮಾರಣಹೋಮ ಮಾಡಿದ ...ವರನ್ನು ಅಷ್ಟು ಸುಲಭವಾಗಿ ತೊರೆಯುವುದಿಲ್ಲ. ...ದೆಡೆ ಪಕ್ಷದಲ್ಲಿ ಒಳಜಗಳ, ಇನ್ನೊಂದೆಡೆ ...ಕ್ಷಗಳ ಹೊರನಡೆಯುವಿಕೆಯಿಂದ ದಿನೇದಿನೇ ...ಗುತ್ತಿರುವ ಎನ್‌ಡಿಎ ಮೈತ್ರಿಕೂಟ, ಮತ್ತೊಂದೆಡೆ ...ತ್ವ ಹಾರ್ಡ್‌ಲೈನ್ ಅನುಸರಿಸಬೇಕೆ ಅಥವಾ ...ರಾಜಕಾರಣ ನಡೆಸಬೇಕೆ ಎಂಬುದರ ನಡುವಿರುವ ..., ಮಗದೊಂದೆಡೆ ವರುಣ್ ಗಾಂಧಿ ಹಾಕಿದ ... ಬಾಂಬ್, 35ಕ್ಕೂ ಹೆಚ್ಚು ಸೀಟುಗಳನ್ನು ...ರುವ ಆರು ದೊಡ್ಡ ರಾಜ್ಯಗಳಲ್ಲಿ ಬಿಜೆಪಿಗೆ ನೆಲೆಯೇ ...ಇವುದು - ಅಧ್ವಾನಿಯ ಪ್ರಧಾನಿ ಕನಸು ...ಗುವುದಕ್ಕೆ ಇನ್ನೇನು ಬೇಕು ಹೇಳಿ?

ಯುಪಿಎ

...ತ್ರವಾದರೂ ಅಧಿಕಾರಕ್ಕೆ ಹತ್ತಿರ!

...ಜೆಪಿ ಮತ್ತು ಅದರ ನೇತೃತ್ವದ ಎನ್‌ಡಿಎಗೆ ...ಪಿ ನೋಡಿದರೆ ಕಾಂಗ್ರೆಸ್ ಮತ್ತು ಅದರ ನೇತೃತ್ವದ ... ಸಾಪೇಕ್ಷವಾಗಿ ಭದ್ರವಾಗಿದೆ ಎಂಬುದು ಎಷ್ಟು ... ಅಧಿಕಾರ ಹಿಡಿಯುವುದಕ್ಕೆ ಅವಶ್ಯವಿರುವ 272 ...ಳ ಗಡಿ ದಾಟುವುದಕ್ಕೆ ಅದರಿಂದಲೂ ಸಾಧ್ಯವಿಲ್ಲ ...ದೂ ಅಷ್ಟೇ ಸತ್ಯ.

...ದಲನೆಯದಾಗಿ ಬಿಜೆಪಿಯಂತೆ ಕಾಂಗ್ರೆಸ್‌ನಲ್ಲಿ ...ಳ್ಳುವಂಥ ಒಳಜಗಳವೇನಿಲ್ಲ. ಚಿಕ್ಕಪುಟ್ಟ ...ದ್ದರೂ ಅದು ಚುನಾವಣಾ ಫಲಿತಾಂಶದ ಮೇಲೆ ...ತ್ಮಕ ಪರಿಣಾಮ ಬೀರುವಷ್ಟು ದೊಡ್ಡ ...ದ್ದೇನೂ ಇಲ್ಲ. ಸೋನಿಯಾ ನೇತೃತ್ವದ ಕಾಂಗ್ರೆಸ್ ...ಕೆಲವು ವರ್ಷಗಳಲ್ಲಿ ತನ್ನೊಳಗಿದ್ದ ಆಂತರಿಕ ...ನ್ನು ಯಶಸ್ವಿಯಾಗಿ ಬಗೆಹರಿಸಿಕೊಂಡು ಭದ್ರವಾಗಿ ...ರಿದೆ. ಇತ್ತೀಚೆಗೆ ನಡೆದ ಕೆಲವು ರಾಜ್ಯಗಳ ...ಭಾ ಚುನಾವಣೆಯಲ್ಲಿ ರಾಜಸ್ಥಾನವನ್ನು ಬಿಜೆಪಿಯ ...ಯಿಂದ ಕಿತ್ತುಕೊಂಡದ್ದು ಅದಕ್ಕೊಂದು ನಿದರ್ಶನ.

...ಡನೆಯದಾಗಿ ಕಾಂಗ್ರೆಸ್ ನೇತೃತ್ವದ ಯುಪಿಎ ...ದ ಅಧಿಕಾರಾವಧಿಯಲ್ಲಿ ಒಂದೂ ಹಗರಣ ... ಕನಿಷ್ಠ ಒಂದಾದರೂ ಹಗರಣ ನಡೆದಿದ್ದರೆ ...ಅದನ್ನೇ ದೊಡ್ಡ ರಂಪ ಮಾಡಿ ಚುನಾವಣೆಯಲ್ಲಿ ...ಳ್ಳುತ್ತಿತ್ತು. ಈಗ ಯಾವುದೇ ಹಗರಣವಿಲ್ಲದೇ ... ನಡೆಸಿರುವುದರಿಂದ ಬಿಜೆಪಿಗೆ ಕಾಂಗ್ರೆಸ್ಸನ್ನು ...ವುದಕ್ಕೆ, ದೂಷಿಸುವುದಕ್ಕೆ ಕಾರಣಗಳೇ ಇಲ್ಲದಂತಾ...ಳಿದ ಚುನಾವಣೆಯಲ್ಲಿ 'ಸೋನಿಯ ವಿದೇಶಿ ... ಎಂಬ ಫ್ರೆಶ್ ಆಯುಧವಾದರೂ ಇತ್ತು. ಈಗದು ...ಮೊಂಡಾಗಿ ಕುಳಿತಿದೆ.


...ರನೆಯದಾಗಿ, ದೇಶದಾದ್ಯಂತ ಬಿಜೆಪಿಗೆ ...ಸಿದರೆ ಕಾಂಗ್ರೆಸ್ ಪರಿಸ್ಥಿತಿ ಉತ್ತಮವಾಗಿದೆ. ಬಿಜೆಪಿ ... ಐದು ರಾಜ್ಯಗಳಲ್ಲಿ ಅಧಿಕಾರದಲ್ಲಿದ್ದರೆ ಕಾಂಗ್ರೆಸ್ ...ದು ರಾಜ್ಯಗಳಲ್ಲಿ ಅಧಿಕಾರದಲ್ಲಿದೆ. ಅತೀ ಹೆಚ್ಚು





...ಸ್ಥಾನಗಳನ್ನು ಹೊಂದಿರುವ ಉತ್ತರ ಪ್ರದೇಶದ ... ಬಿಹಾರದಲ್ಲಾಗಲೀ ಪಶ್ಚಿಮ ಬಂಗಾಳದಲ್ಲಾ... ತಮಿಳುನಾಡಿನಲ್ಲಾಗಲೀ ಬಿಜೆಪಿಯಂತೆಯೇ ... [illegible] ಎಂಬುದು ... [illegible] ಯುಪಿಎ ಮೈತ್ರಿಕೂಟದ ... ಅಂಗಪಕ್ಷಗಳು ಈ ರಾಜ್ಯಗಳಲ್ಲಿವೆ. ಉತ್ತರ

ಪ್ರದೇಶದಲ್ಲಿ ತನ್ನದೇ ನೆಲೆ ಹೊಂದಿರುವ ಮುಲಾಯಮ್ ಸಿಂಗ್ ಯಾದವ್ ನೇತೃತ್ವದ ಸಮಾಜವಾದಿ ಪಕ್ಷವಿದ್ದರೆ ತಮಿಳುನಾಡಿನಲ್ಲಿ ಭಾರಿ ಬಹುಮತದೊಂದಿಗೆ ಅಧಿಕಾರದಲ್ಲಿರುವ ಎಂ.ಕರುಣಾನಿಧಿ ನೇತೃತ್ವದ ಡಿಎಂಕೆ ಪಕ್ಷವಿದೆ. ಅವೆರಡೂ ಇಂದಿಗೂ ಅಧಿಕೃತವಾಗಿ ಯುಪಿಎ ಮೈತ್ರಿಕೂಟದ ಅಂಗಪಕ್ಷಗಳಾಗಿವೆ.



40 ಸ್ಥಾನಗಳನ್ನು ಹೊಂದಿರುವ ಬಿಹಾರದಲ್ಲಿ ಲಾಲೂ ಪ್ರಸಾದ್ ಯಾದವ್ ನೇತೃತ್ವದ ಆರ್‌ಜೆಡಿಯೊಂದಿಗೆ ಸ್ಥಾನಹೊಂದಾಣಿಕೆಯ ವಿಫಲತೆಯಿಂದಾಗಿ ಕಾಂಗ್ರೆಸ್ ಸ್ವತಂತ್ರವಾಗಿ ಸ್ಪರ್ಧಿಸುತ್ತಿದೆಯಾದರೂ ಇದರಿಂದ ಬಿಜೆಪಿ ನೇತೃತ್ವದ ಎನ್‌ಡಿಎಗೆ ಏನೂ ಲಾಭವಿಲ್ಲ. ದಶಕಗಳಿಂದ ಬಿಜೆಪಿ ಮತ್ತದರ ಹಿಂದೂತ್ವ ಸಿದ್ಧಾಂತದ ಕಡುವೈರಿಯಾಗಿರುವ ಲಾಲೂ ಎಂದಿದ್ದರೂ ಕಾಂಗ್ರೆಸ್‌ನ ಮಿತ್ರ. ಚುನಾವಣಾ ನಂತರದಲ್ಲಾದರೂ ಸರಿ ಅವರು ಕಾಂಗ್ರೆಸ್ ನೇತೃತ್ವದ ಯುಪಿಎ ಮೈತ್ರಿಕೂಟವನ್ನು ಸೇರಿಯೇ ತೀರುತ್ತಾರೆ. ಅಲ್ಲದೇ ಪ್ರಸ್ತುತವಾಗಿ ಯುಪಿಎ ಮೈತ್ರಿಕೂಟದ ಭಾಗಿಯಾಗಿರುವ ರಾಮವಿಲಾಸ್ ಪಾಸ್ವಾನ್ ಕೂಡ ಬಿಹಾರದಲ್ಲಿದ್ದಾರೆ. 42 ಸೀಟುಗಳನ್ನು ಹೊಂದಿರುವ ಬಂಗಾಳದಲ್ಲಿ, 20 ಸೀಟುಗಳನ್ನು ಹೊಂದಿರುವ ಕೇರಳದಲ್ಲಿ ಕಮ್ಯುನಿಸ್ಟರದ್ದೇ ಕಾರುಬಾರಾದರೂ ಅವರು ಬಿಜೆಪಿಯನ್ನು ಅಧಿಕಾರದಿಂದ ಹೊರಗಿಡುವುದಕ್ಕಾಗಿ ಕಾಂಗ್ರೆಸ್‌ನೊಂದಿಗೆ ಕೈಜೋಡಿಸುತ್ತಾರೆಯೇ ಹೊರತು ಎಂದಿಗೂ ಬಿಜೆಪಿಯೊಂದಿಗೆ ಹೋಗಲಾರರು. ಇವರೆಲ್ಲಾ ಚುನಾವಣಾ ನಂತರದಲ್ಲಿ, ಫಲಿತಾಂಶ ಪ್ರಕಟವಾದ ಮೇಲೆ ಗದ್ದುಗೆ ಹಿಡಿಯುವುದಕ್ಕಾಗಿ ನಡೆಯುವ ಎರಡನೇ ಮಜಲಿನ ಹಣಾಹಣಿಯಲ್ಲಿ ಅವರೆಲ್ಲಾ ಕಾಂಗ್ರೆಸ್‌ನ ಸಂಭವನೀಯ ಮಿತ್ರರಾಗುವ ಸಾಧ್ಯತೆಯೇ ಹೆಚ್ಚು.

ಇನ್ನೊಂದೆಡೆ 42 ಸ್ಥಾನಗಳನ್ನು ಹೊಂದಿರುವ ಆಂಧ್ರ ಪ್ರದೇಶದಲ್ಲಿ, 48 ಸ್ಥಾನಗಳನ್ನು ಹೊಂದಿರುವ ಮಹಾರಾಷ್ಟ್ರದಲ್ಲಿ ಈಗ ಅಧಿಕಾರದಲ್ಲಿರುವುದು ಕಾಂಗ್ರೆಸ್ಸೇ. ಮಹಾರಾಷ್ಟ್ರದಲ್ಲಿ ಶರದ್ ಪವಾರ್ ನೇತೃತ್ವದ ಎನ್‌ಸಿಪಿ ಮತ್ತು ಕಾಂಗ್ರೆಸ್‌ಗಳದ್ದೇ ಕಾರುಬಾರು. ಇವೆರಡೂ ಯುಪಿಎದ ಅಂಗಪಕ್ಷವಾಗಿರುವುದರಿಂದ ಅವೆರಡರಲ್ಲಿ ಯಾರು ಹೆಚ್ಚು ಸ್ಥಾನ ಗೆದ್ದರೂ ಅಂತಿಮವಾಗಿ ಅದು ಯುಪಿಎ ಮೈತ್ರಿಕೂಟಕ್ಕೇ ಲಾಭವಾಗಲಿದೆ. ರಾಜ್ ಠಾಕ್ರೆ ಮತ್ತು ಉದ್ಧವ್ ಠಾಕ್ರೆ ನಡುವಿನ ಬಹಿರಂಗ ಕಿತ್ತಾಟದಿಂದಾಗಿ, ನಾರಾಯಣ್ ರಾಣೆಯಂಥ ಉನ್ನತ ನಾಯಕರ ನಿರ್ಗಮನದಿಂದಾಗಿ ಮಹಾರಾಷ್ಟ್ರದಲ್ಲಿ ಶಿವಸೇನೆ ಅವನತಿ ಕಂಡು ವರ್ಷಗಳೇ ಆಗಿಹೋಗಿವೆ. ಬಿಜೆಪಿಗಂತೂ ಇಲ್ಲಿ ನೆಲೆಯೇ ಇಲ್ಲ. ಆದ್ದರಿಂದ ಎನ್‌ಡಿಎ ಶಿವಸೇನೆ ಎಂಬ ಈ ಪಳೆಯುಳಿಕೆಯನ್ನು ನೆಚ್ಚಿಕೊಂಡಿದೆ. ತಮಿಳುನಾಡಿನಲ್ಲಿ ಕಾಂಗ್ರೆಸ್-ಡಿಎಂಕೆ ನಡುವಿನ ಸ್ಥಾನ ಹೊಂದಾಣಿಕೆ ಕೂಡ ಪರಿಣಾಮಕಾರಿಯಾಗಿದೆ. ಡಿಎಂಕೆ 21 ಸ್ಥಾನಗಳಲ್ಲೂ, ಕಾಂಗ್ರೆಸ್ 16 ಸ್ಥಾನಗಳಲ್ಲೂ ಸ್ಪರ್ಧಿಸುವುದಕ್ಕೆ ತೀರ್ಮಾನಿಸಿರುವುದು ವಾಸ್ತವದಲ್ಲಿ ಎರಡೂ ಪಕ್ಷಗಳ ಅಭ್ಯರ್ಥಿಗಳ ಗೆಲುವಿಗೆ ಕಾರಣವಾಗಬಹುದು.



ಆಂಧ್ರಪ್ರದೇಶದಲ್ಲಿ ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಚಂದ್ರಬಾಬು ನಾಯ್ಡು ನೇತೃತ್ವದ ತೆಲುಗುದೇಶಂನ ಸೊಂಟ ಮುರಿದು ಕಾಂಗ್ರೆಸ್ಸೇ ಬಹುಮತದಿಂದ ಅಧಿಕಾರಕ್ಕೇರಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ತೆಲುಗುದೇಶಂ ಗೆದ್ದಿದ್ದು ಕೇವಲ ನಾಲ್ಕು ಸೀಟುಗಳನ್ನು ಮಾತ್ರ. ಈ ಬಾರಿ ಒಂದೆರಡು ಸೀಟುಗಳು ಜಾಸ್ತಿಯಾಗಬಹುದೇನೋ. ಅದರಿಂದ ಕಾಂಗ್ರೆಸ್‌ಗೆ ಅಂಥಾ ಹೊಡೆತವೇನೂ ಬೀಳುವುದಿಲ್ಲ. 42 ಸೀಟುಗಳನ್ನು ಹೊಂದಿರುವ ಈ ಬೃಹತ್ ರಾಜ್ಯದಲ್ಲಿ ಕಾಂಗ್ರೆಸ್ಸಿಗೆ ಅಪಾರ ನೆಲೆಯಿರುವುದು ಈ ಬಾರಿ ಭಾರಿ ಅನುಕೂಲವಾಗಲಿದೆ.

ಹೀಗೆ ಕಾಂಗ್ರೆಸ್ ಅನ್ನೂ ಒಳಗೊಂಡಂತೆ ಯುಪಿಎ ಮೈತ್ರಿಕೂಟದ ಒಂದೊಂದು ಬಿಡಿಬಿಡಿ ಪಕ್ಷಗಳನ್ನು ಹಾಗೂ ಇಡಿಯಾಗಿ ಯುಪಿಎ ಮೈತ್ರಿಕೂಟವನ್ನು ವಿಶ್ಲೇಷಿಸಿದರೆ ಕಾಂಗ್ರೆಸ್ ಮತ್ತು ಯುಪಿಎಗಳು ಬಿಜೆಪಿ ಮತ್ತು ಎನ್‌ಡಿಎಗಿಂತ ಉತ್ತಮ ಪರಿಸ್ಥಿತಿಯಲ್ಲಿವೆ ಎಂಬುದನ್ನು ನಿಸ್ಸಂಶಯವಾಗಿ ಹೇಳಬಹುದು. ಅಂದ ಮಾತ್ರಕ್ಕೆ ಸರ್ಕಾರ ಸ್ಥಾಪನೆಗೆ ಅವಶ್ಯವಿರುವ 272 ಸ್ಥಾನಗಳ ಗಡಿ ದಾಟೇ ದಾಟುತ್ತಾರೆಂದು ಹೇಳುವುದು ತುಸು ಕಷ್ಟ. ಇದಕ್ಕೆ ಬಹುಮುಖ್ಯ ಕಾರಣ ಎಂದರೆ ಯುಪಿಎ ಮೈತ್ರಿಕೂಟದ ಬೆನ್ನೆಲುಬಿನಂತಿದ್ದ ಎಡಪಕ್ಷಗಳು ಇಂಡೋ-ಅಮೆರಿಕ ಅಣುಬಂಧದ ವಿಚಾರದಲ್ಲಿ ಮೈತ್ರಿಕೂಟದಿಂದ ಹೊರನಡೆದದ್ದು. ಎರಡನೆಯದಾಗಿ, 28 ಸ್ಥಾನಗಳನ್ನು ಹೊಂದಿರುವ ಕರ್ನಾಟಕದಲ್ಲಿ, 26 ಸ್ಥಾನಗಳನ್ನು ಹೊಂದಿರುವ ಗುಜರಾತ್‌ನಲ್ಲಿ ಹಾಗೂ 29 ಸ್ಥಾನಗಳನ್ನು ಹೊಂದಿರುವ ಮಧ್ಯಪ್ರದೇಶದಲ್ಲಿ ಬಿಜೆಪಿ ಅಧಿಕಾರದಲ್ಲಿರುವುದು. ಗುಜರಾತನ್ನು ಹೊರತುಪಡಿಸಿದರೆ ಉಳಿದೆರಡು ರಾಜ್ಯಗಳಲ್ಲಿ ಬಿಜೆಪಿ ಅಧಿಕಾರದಲ್ಲಿದ್ದರೂ ಕಾಂಗ್ರೆಸ್ ಪರಿಸ್ಥಿತಿ ಗುಜರಾತ್‌ನಷ್ಟು ಹೀನಾಯವಾಗಿಯೇನಿಲ್ಲವೆಂಬುದು ಯುಪಿಎ ಪಾಲಿಗೆ ಒಂದಿಷ್ಟು ಸಮಾಧಾನಕರ ಅಂಶ.



ತೃತೀಯ ರಂಗ

ಹುಟ್ಟುವ ಮೊದಲೇ ಗರ್ಭಪಾತ



ಕಾಂಗ್ರೆಸ್ ಮತ್ತು ಬಿಜೆಪಿಯೇತರ ತೃತೀಯರಂಗ ಮೂರನೇ ಬಾರಿಗೆ ಮರುಜನ್ಮ ಪಡೆದಿದೆಯಾದರೂ ಹುಟ್ಟುವ ಮೊದಲೇ ಗರ್ಭಪಾತವಾಗಿ ಹೋಗಿರುವುದು ಅದರ ದುರಂತ. ಆರಂಭದಲ್ಲಿ ಸಿಪಿಐ, ಸಿಪಿಎಂ, ತೆಲುಗುದೇಶಂ, ಟಿಆರ್‌ಎಸ್, ಎಐಎಡಿಎಂಕೆ, ಜನತಾದಳ, ಬಿಎಸ್‌ಪಿ, ಫಾರ್ವರ್ಡ್ ಬ್ಲಾಕ್ ಮುಂತಾದ ಹತ್ತು ಪಕ್ಷಗಳು ಉತ್ಸಾಹದಿಂದ ಸೇರಿಕೊಂಡವಾದರೂ ಬಿಎಸ್‌ಪಿಯ ನಾಯಕಿ, ಉತ್ತರ ಪ್ರದೇಶದ ಮುಖ್ಯಮಂತ್ರಿ ಮಾಯಾವತಿ ತನ್ನನ್ನು ತೃತೀಯ ರಂಗದ ಪ್ರಧಾನಿ ಅಭ್ಯರ್ಥಿ ಎಂದು ಘೋಷಿಸಬೇಕೆಂದು ಪಟ್ಟು ಹಿಡಿಯುವ ಮೂಲಕ ಕೂಸು ಹುಟ್ಟುವ ಮೊದಲೇ ಕುಲಾವಿ ಹೊಲಿಯುವ ಧೋರಣೆ ತಾಳಿದ ಕಾರಣ ಈ ರಂಗ ಅರಳುವ ಮೊದಲೇ ಕಮರಿಹೋಗಿದೆ.

ಕಳೆದ ಚುನಾವಣೆಯಲ್ಲಿ ಒಟ್ಟು 57 ಸೀಟುಗಳನ್ನು ಗೆಲ್ಲುವ ಮೂಲಕ ಕೇಂದ್ರದಲ್ಲಿ ಯುಪಿಎ ಸರ್ಕಾರ ಉಳಿವಿಗೆ ಕಾರಣೀಭೂತವಾಗಿದ್ದ ಎಡಪಕ್ಷಗಳೇ ಇಂದು ತೃತೀಯ ರಂಗದ ಮೂಲಾಧಾರವಾಗಿದೆ. ಎಡಪಕ್ಷಗಳ ಭದ್ರಕೋಟೆಗಳೆಂದೇ ಪರಿಗಣಿತವಾಗಿರುವ ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ಕಳೆದ ಐದು ವರ್ಷಗಳಲ್ಲಿ ಬಹಳಷ್ಟು ಬದ[illegible] ಕೇರಳದಲ್ಲಿ ಸಿಪಿಎಂ ಜನರಲ್ ಸೆಕ್ರೆಟರಿ ಪಿಣರಾಯಿ ವಿಜಯನ್ ಮತ್ತು ಮುಖ್ಯಮಂತ್ರಿ ಅಚ್ಯುತಾನಂದನ್ ನಡುವಿನ ಜಗಳ ತಾರಕಕ್ಕೇರಿರುವುದು, ಪಶ್ಚಿಮ ಬಂಗಾಳದ ಸಿಂಗೂರಿನಲ್ಲಿ ಟಾಟಾವಿಗೆ ಮಣೆ ಹಾಕಲು ಹೋಗಿ ಅಮಾಯಕ ರೈತರ ಮೇಲೆ ಹೇಳತೀರದ ದೌರ್ಜನ್ಯ ನಡೆಸಿ ರೈತರ ವಿರೋಧ ಕಟ್ಟಿಕೊಂಡಿರುವುದು, ಸಿಂಗೂರು ಹೋರಾಟವನ್ನೇ ಬಂಡವಾಳ ಮಾಡಿಕೊಂಡು ಪ್ರವರ್ಧಮಾನಕ್ಕೆ ಬಂದಿರುವ ತೃಣಮೂಲ ಕಾಂಗ್ರೆಸ್‌ನ ಮಮತಾ ಬ್ಯಾನರ್ಜಿ ಈ ಬಾರಿ ಒಂದಿಷ್ಟು ಸ್ಥಾನಗಳನ್ನು ಕಿತ್ತುಕೊಳ್ಳಲಿರುವುದು ಈ ಬಾರಿ ಎಡಪಕ್ಷಗಳ ಸ್ಥಾನಬಲವನ್ನು ಒಂದಿಷ್ಟು ಕುಂದಿಸಬಹುದು. ಆದರೂ ಅತಂತ್ರ ಸಂಸತ್ತಿನಲ್ಲಿ ಒಂದೊಂದು ಸ್ಥಾನಗಳೂ ಬಹುಮುಖ್ಯವಾದ್ದರಿಂದ ಅವರೇ ಮತ್ತೆ ಕಿಂಗ್‌ಮೇಕರ್ ಆದರೂ ಆಶ್ಚರ್ಯವಿಲ್ಲ.

ಕಳೆದ ಚುನಾವಣೆಯಲ್ಲಿ ಚಂದ್ರಬಾಬು ನಾಯ್ಡುರವರ ತೆಲುಗುದೇಶಂ 4, ದೇವೇಗೌಡರ ಜೆಡಿಎಸ್ 3 ಸ್ಥಾನಗಳನ್ನು ಗೆದ್ದಿದ್ದರೆ ಜಯಲಲಿತಾರ ಅಣ್ಣಾ ಡಿಎಂಕೆ ಶೂನ್ಯ ಸಂಪಾದನೆ ಮಾಡುವ ಮೂಲಕ ತೀರಾ ಕಳಪೆ ಪ್ರದರ್ಶನ ತೋರಿದ್ದವು. ಇದ್ದುದರಲ್ಲಿ ಮಾಯಾವತಿಯ ಬಹುಜನ ಸಮಾಜ ಪಾರ್ಟಿ ಕಳೆದ ಚುನಾವಣೆಯಲ್ಲಿ 19 ಸ್ಥಾನಗಳನ್ನು ಗೆದ್ದಿತ್ತು. ಆದರೆ, ತನ್ನನ್ನು ಪ್ರಧಾನಿ ಅಭ್ಯರ್ಥಿಯನ್ನಾಗಿ ಘೋಷಿಸಲಿಲ್ಲ ಎಂಬ ಕಾರಣಕ್ಕೆ ಅವರು ಈಗ ತೃತೀಯ ರಂಗದಿಂದ ದೂರ ಉಳಿದಿದ್ದಾರೆ. ಈ ಎಲ್ಲಾ ಲೆಕ್ಕಾಚಾರಗಳನ್ನು ನೋಡಿದರೆ ಈ ಚುನಾವಣೆಯಲ್ಲಿ ತೃತೀಯ ರಂಗದ ಒಟ್ಟು ಸ್ಥಾನಗಳು ನೂರರ ಗಡಿ ದಾಟುವುದು ಕಷ್ಟ.

ಚುನಾವಣಾ ನಂತರದಲ್ಲಿ ಕೇಂದ್ರದಲ್ಲಿ ಸರ್ಕಾರ ಸ್ಥಾಪಿಸುವುದಕ್ಕೆ ಬಿಜೆಪಿ ನೇತೃತ್ವದ ಎನ್‌ಡಿಎ ಮತ್ತು ಕಾಂಗ್ರೆಸ್ ನೇತೃತ್ವದ ಯುಪಿಎಗಳ ನಡುವೆಯೇ ಪೈಪೋಟಿ ಉಂಟಾಗುವುದು ಗ್ಯಾರಂಟಿ. ಆಗ ಮತ್ತೆ ತೃತೀಯ ರಂಗ ಒಡೆದು ಛಿದ್ರವಾಗಿ ಅದರಲ್ಲಿನ ಬಿಡಿಬಿಡಿ ಪಕ್ಷಗಳು ತಾವು ಚುನಾವಣೆಯಲ್ಲಿ ಗಳಿಸಿದ ಸೀಟುಗಳ ಸಂಖ್ಯೆಗನುಗುಣವಾಗಿ ಯುಪಿಎ ಮತ್ತು ಎನ್‌ಡಿಎಗಳೊಂದಿಗೆ ಬಾರ್ಗೇನ್ ಮಾಡಲು ಪ್ರಾರಂಭಿಸುತ್ತವೆಯಷ್ಟೇ.

ಒಂದು ವೇಳೆ ಬಿಜೆಪಿ ಮಾಯಾವತಿಗೆ ಮಣೆ ಹಾಕಿದರೆ ಕೋಮುವಾದಿಗಳು ಅಧಿಕಾರಕ್ಕೆ ಬರುವುದನ್ನು ಶತಗತಾಯ ತಪ್ಪಿಸಲು ವಿಧಿಯಿಲ್ಲದೇ ಎಡಪಕ್ಷಗಳು ಮತ್ತೆ ಕಾಂಗ್ರೆಸ್ ಕಡೆ ವಾಲಬಹುದು. ಇನ್ನು ಬಿಜೆಪಿಯೊಂದಿಗೆ ದೇವೇಗೌಡರ ಜನತಾದಳ, ಬಿಜು ಜನತಾದಳಗಳ ಸಂಬಂಧಗಳು ಈಗತಾನೆ ಹಳಸಿಕೊಂಡಿರುವುದರಿಂದ ಸದ್ಯಕ್ಕೆ ಬಿಜೆಪಿ ಹತ್ತಿರ ಸುಳಿಯುವ ಛಾನ್ಸು ಕಡಿಮೆ. ಒಂದೊಂದು ಮಂತ್ರಿಗಿರಿ ಸಿಗುತ್ತೆ ಎಂದಾದರೆ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತು ಐದು ವರ್ಷ ಕಾಲಾಹರಣ ಮಾಡುವುದಕ್ಕಿಂತ ಸರ್ಕಾರ ಸೇರೋದೆ ವಾಸಿ ಎಂದುಕೊಂಡು ಅವು ಕಾಂಗ್ರೆಸ್ ಕಡೆ ವಾಲಬಹುದು. ಇದಕ್ಕೆ ಚಂದ್ರಶೇಖರ್ ರಾವ್ ನೇತೃತ್ವದ ತೆಲಂಗಾಣ ರಾಷ್ಟ್ರ ಸಮಿತಿ ಕೂಡ ಹೊರತಲ್ಲ.

ಮೇಲಿನ ಎಲ್ಲಾ ವಿಶ್ಲೇಷಣೆಗಳನ್ನು ಸಾರಾಂಶೀಕರಿಸಿ ಹೇಳುವುದಾದರೆ ಯಾವುದೇ ಒಂದು ಪಕ್ಷ ಅಧಿಕಾರಕ್ಕೇರುವುದು ಮಿಥ್ಯ, ಅತಂತ್ರ ಸಂಸತ್ತು ಮತ್ತು ಮೈತ್ರಿಕೂಟ ರಾಜಕಾರಣವೇ ಸತ್ಯ. ಇರುವ ಮೂರು ಮೈತ್ರಿಕೂಟಗಳಲ್ಲಿ ಸದ್ಯಕ್ಕೆ ಗದ್ದುಗೆಗೆ ಹೆಚ್ಚು ಹತ್ತಿರವಾಗಿರುವುದು ಯುಪಿಎ. ಎರಡನೇ ಮತ್ತು ಮೂರನೇ ಸ್ಥಾನಗಳಲ್ಲಿ ಕ್ರಮವಾಗಿ ಎನ್‌ಡಿಎ ಹಾಗೂ ತೃತೀಯ ರಂಗಗಳು ಬರಲಿವೆ. ಏನಾದರೂ ... ಪ್ರಧಾನಿಯಾಗೇ ತೀರಬೇಕೆಂದು ತುದಿಗಾಲಲ್ಲಿ [illegible] ... ದೊಡ್ಡ ಸಂಖ್ಯೆಯ ಸ್ಥಾನಗಳನ್ನು ಗೆದ್ದ[illegible] ... ಯಾರು ಸಿದ್ಧರಿದ್ದಾರೆ ಎಂಬುದರ ಮೇಲೆ ಈ [illegible] ಗಳ ಒಟ್ಟಿಷ್ಟು [illegible] ■

ಕೊಪ್ಪಳ ಕೈ, ಹೊರೆ ಅಬ್ಬರಕ್ಕೆ ಕಮರಿದ ಕಮಲ

ರಾಜ್ಯ ಬಿಜೆಪಿ ಕೃಪಾ ಪೋಷಿತ ಹರಿಹರದ ಪಂಚಮಸಾಲಿ ಪೀಠದ ಸ್ಥಿರ-ಚರ ಎಂಬ ಸ್ವಾಮಿಗಳ [illegible] ಕೊಪ್ಪಳ ಬಿಜೆಪಿ ಕ್ಯಾಂಡಿಡೇಟ್ ಆಗಿರುವ ಶಿವರಾಮೇಗೌಡ ಈಗಾಗಲೇ ಒಂದು ರೌಂಡು ಕ್ಷೇತ್ರ ಸುತ್ತಿ ಬಂದು "ನಾ..ಗೆದ್ದೇ ಬಿಟ್ಟೆ. ಪಾರ್ಲಿಮೆಂಟಲ್ಲಿ ನನ್ನ ಸೀಟ್ ನಂಬರ್ ಎಷ್ಟಿರಬಹುದು...?'' ಎಂದು ಕನಸಿಗೆ ಬಿದ್ದನಲ್ಲದೆ ಈ ಪಂಚಮಸಾಲಿ ಲ್ಯಾಂಡು- ಮೊಬೈಲ್ ಸ್ವಾಮಿಗಳ ಫೋಟೋ ಮುಂದೆ ಕುಳಿತು "ಗುರುವಿನ ಬಲವೊಂದಿದ್ದರೆ ಸಾಕು ಗುಲಾಮ ಮತದಾರರು ತಾವೇ ಒತ್ತುತ್ತಾರೆ" ಅಂತಿದ್ದಾನಂತೆ. ಆದರೀಗ ಕಾಂಗ್ರೆಸ್‌ನ ಮಾಜಿ ಮಂತ್ರಿ ಬಸವರಾಜ ರಾಯರೆಡ್ಡಿ ಮತ್ತು ಜೆಡಿಎಸ್‌ನಿಂದ ರಾಜ್ಯ ಅಲ್ಪ ಸಂಖ್ಯಾತ ಮುಖಂಡ ಮಾಜಿ ಮಂತ್ರಿ ಇಕ್ಬಾಲ ಅನ್ಸಾರಿ ಕ್ಯಾಂಡಿಡೇಟು ಎಂದು ಸುದ್ದಿ ಕೇಳಿ ಕರೆಂಟ್ ಹೊಡೆದ ಕಾಗೆಯಂತೆ ಗೂಡು ಸೇರಿ ಜಪಕ್ಕೆ ಕೂತಿದ್ದಾನಂತೆ. ಚುನಾವಣೆಯಲ್ಲಿ ಪೈಪೋಟಿ ಬೀಳುವುದು ಜೆಡಿಎಸ್ ಮತ್ತು ಕಾಂಗ್ರೆಸ್‌ಗೆ ಹೊರತು ಬಿಜೆಪಿಯಿಲ್ಲಿ ಲೆಕ್ಕಕ್ಕೂ ಇಲ್ಲ.. ಜಮಾಕ್ಕೂ ಇಲ್ಲ, ಎಂದು ಜನ ಲೆಕ್ಕಾಚಾರಕ್ಕಿಳಿದಿರುವುದು ಬಿಜೆಪಿಗೆ ತಿಂಗಳ ಮುಂಚೆ ಆಸ್ಪತ್ರೆಗೆ ಸೇರುವಂತಾಗಿದೆ.


ಅನ್ಸಾರಿ

ಯಾರಿಗೂ ಪರಿಚಿತನಲ್ಲದ, ಒಬ್ಬರಿಗೊಂದು ಸಣ್ಣ ಸಹಾಯವನ್ನೂ ಮಾಡದ ಏಕಾಂಗಿ ಶಿವರಾಮೇಗೌಡ ರಾಜ್ಯ ಪಂಚಮಸಾಲಿ ಸಂಘಟನೆಯ ಉಪಾಧ್ಯಕ್ಷ ಎಂಬ ಒಂದೇ ಒಂದು ಸರ್ಟಿಫಿಕೇಟು ಇಟ್ಟುಕೊಂಡು ಪೀಠ ಸ್ವಾಮಿಗಳ ಆದೇಶಕ್ಕೆ ಜೋತುಬಿದ್ದ ಯಡಿಯೂರಪ್ಪ ಅವನನ್ನು ಅಭ್ಯರ್ಥಿ ಎಂದು ಘೋಷಣೆ ಮಾಡಿದ್ದಾರೆ. ಕ್ಷೇತ್ರದಲ್ಲಿ ಪ್ರಬಲವಾಗಿರುವ ಕುರುಬ ಮತ್ತು ರೆಡ್ಡಿ ಜನಾಂಗಕ್ಕೆ ಅವಕಾಶ ದೊರೆಯಬಹುದು ಎಂಬ ಆಶಾಭಾವನೆಗೆ ಎಳ್ಳು-ನೀರು ಹಾಕಿಬಿಟ್ಟ ಎಂಬ ಬಿಜೆಪಿಯ ಅಸಮಾಧಾನವೀಗ ಕೊಪ್ಪಳದಲ್ಲಿ ಕೇಸರಿ ಪಕ್ಷಕ್ಕೆ ಅಂಟಿಕೊಂಡಿದೆ. ಅದೇ ಇವತ್ತು ಚುನಾವಣೆಗೂ ತಿಂಗಳ ಮುಂಚೆ ಸೋಲಿನ ಭವಿಷ್ಯ ಕೂಡ ಬರೆದಿದೆ.

ಬಿಜೆಪಿಯ ಟಿಕೆಟು ಆಕಾಂಕ್ಷಿಗಳಾಗಿದ್ದ ಜಿಲ್ಲಾಧ್ಯಕ್ಷ ಹಾಲಪ್ಪ ಆಚಾರ್, ಬಸವರಾಜ ಪಾಟೀಲ ಅನ್ವರಿ, ಡಾ. ರಾಂಪೂರನಂಥವರು ಶಿವರಾಮೇಗೌಡನನ್ನು ಹಣಿಯುವುದು ಹೇಗೆ ಎಂದು ಸ್ಕೆಚ್ ಹಾಕಲು ಶುರುಹಚ್ಚಿಕೊಂಡಿದ್ದಾರೆ. ಅಸಲಿಗೆ ಈ ಪೈಪೋಟಿಯಲ್ಲಿದ್ದ ಮೂವರ ಪೈಕಿ ಒಬ್ಬರಿಗೆ ಟಿಕೆಟು ಸಿಕ್ಕರೂ ಒಗ್ಗಟ್ಟಾಗಿ ದುಡಿಯಬೇಕು ಎಂಬ ಇರಾದೆಯಲ್ಲಿದ್ದರು. ಅದರಲ್ಲೂ ಬವರಾಜ ಪಾಟೀಲ ಅನ್ವರಿಗೆ ಕೊನೆಗಳಿಗೆಯಲ್ಲಾದರೂ ಟಿಕೆಟ್ ಸಿಗಬಹುದೆಂಬ ಬಲವಾದ ಲೆಕ್ಕಾಚಾರ ಕೂಡ ಕ್ಷೇತ್ರದ ಬಿಜೆಪಿಯಲ್ಲಿತ್ತು. ಆದರೆ ಜಾತಿ ಲಾಬಿಗೆ ಮುಂದಾದ ಯಡಿಯೂರಪ್ಪ ಪಂಚಮಸಾಲಿ ಸ್ವಾಮಿಗಳ ಮಾತಿಗೆ ಮಣೆಹಾಕಿ ಯಾರಿಗೂ ಪರಿಚಿತನಲ್ಲದ ಶಿವರಾಮೇಗೌಡನನ್ನು ಫೈನಲ್ ಮಾಡಿ ಗೆಲ್ಲಿಸುವ ಜವಾಬ್ದಾರಿ ನಿಮ್ಮದು ಎಂದು ಹೇಳಿದ್ದಾನೆ. ಆದರೆ ಜಿಲ್ಲಾಧ್ಯಕ್ಷ ಹಾಲಪ್ಪ ಆಚಾರ ಇನ್ನೂ ಅಸಮಾಧಾನದಿಂದ ಹೊರ ಬಂದಿಲ್ಲ, ಬರುವ ಲಕ್ಷಣಗಳೂ ಕಾಣುತ್ತಿಲ್ಲ. ಹೀಗಾಗಿ ಶಿವರಾಮೇಗೌಡನನ್ನು ಸೋಲಿಸುವ, ಸೇಫಾಗಿ ಮನೆ ಸೇರಿಸುವ ಜವಾಬ್ದಾರಿ ನಮ್ಮದು ಎಂದು ಠರಾವು ಮಾಡಿಕೊಂಡು ಕೆಲಸ ಶುರುಹಚ್ಚಿಕೊಂಡಿದ್ದಾರೆ.

ಶಿವರಾಮೇಗೌಡ ದಿಲ್ಲಿಯವರಿಗೆ ಗೊತ್ತಿರಬಹುದು ಆದರೆ ಇಲ್ಲಿಯವರಿಗೆ ಗೊತ್ತಿಲ್ಲ. ನಾಳೆ-ನಾಡಿದ್ದು ಮನೆ-ಮನೆಗೆ ಹೋಗಿ ಇಂವಾ ಯಾರು ಅಂತ ವೋಟು ಕೇಳೋದು ಎಂಬ ಸುದ್ದಿಯನ್ನೇ ತೇಲಿಬಿಟ್ಟಿರುವ ಅಸಮಾಧಾನಿಗಳು ಕಟ್ಟಾ ಬಿಜೆಪಿಗರು ಎಲೆಕ್ಷನ್ ಫೀಲ್ಡಿನಿಂದ ಹೊರಹೋಗುವಂತಹ ವಾತಾವರಣ ಸೃಷ್ಟಿಸಿದ್ದಾರೆ. ಅಲ್ಲದೆ ಜಿಲ್ಲಾಧ್ಯಕ್ಷ ಹಾಲಪ್ಪ ಆಚಾರ ಯಲಬುರ್ಗಾ, ಡಾರಾಂಪೂರ ಕೊಪ್ಪಳ, ಬಸನಗೌಡ ಪಾಟೀಲ ಅನ್ವರಿ ತಮ್ಮ ಪ್ರಭಾವವಿರುವ ಲಿಂಗಸೂರು, ಮಸ್ಕಿ, ಸಿಂಧನೂರು ತಾಲ್ಲೂಕುಗಳಲ್ಲಿ ಶಿವರಾಮೇಗೌಡನ ವಿರುದ್ಧ ಪಿತೂರಿ ಶುರುಹಚ್ಚಿಕೊಂಡಿದ್ದಾರೆ. ಈ ಭಾಗಗಳಲ್ಲಿ ಬಿಜೆಪಿಗೆ ಹೊಡೆತ ಗ್ಯಾರಂಟಿ ಎಂಬ ಸುದ್ದಿ ಈಗ ಹೊರಬಿದ್ದಿದೆ. ಟಿಕೆಟ್ ತಂದು ತಂಡಾ ಹೊಡೆದಿರುವ ಶಿವರಾಮೇಗೌಡ ಇದನ್ನೆಲ್ಲಾ ಕಂಡು ದಿನಬೆಳಗಾದರೆ ಯಡಿಯೂರಪ್ಪ ಸದಾನಂದಗೌಡನಿಗೆ ಫೋನಚ್ಚಿ "ಕಾಪಾಡಿ.. ಕಾಪಾಡಿ..'' ಎಂದು ಗೋಗರೆಯುತ್ತಿದ್ದಾನೆ. ಮಗನನ್ನು ಚುನಾವಣೆಯಲ್ಲಿ ನಿಲ್ಲಿಸಿ ಮಂಗ್ಯಾ ಆಗಿರುವ ಯಡ್ಡಿ ಸ್ವತಃ ಸೋಲಿನ ಭಯದಲ್ಲಿರುವ ಕೋಲ್ಗೇಟ್ ಸದಾನಂದ ಇವನ ನೆರವಿಗೆ ಬರುವುದಾದರೂ ಹೇಗೆ ಸಾಧ್ಯ.


ಸಹನೆ ಕಳೆದುಕೊಂಡು ಪಾರ್ಲಿಮೆಂಟನ್ನು ಫೋಟೋದಲ್ಲೇ ನೋಡುತ್ತಿರುವ ಶಿವರಾಮೇಗೌಡ ಜಿಲ್ಲಾಧ್ಯಕ್ಷ ಹಾಲಪ್ಪನಿಗೆ "ನೀ ಜಾಸ್ತಿ ಹಾರಾಡಿದರೆ ಜಿಲ್ಲಾಧ್ಯಕ್ಷಗಿರಿ ಕಸಕೊಂಡು ಅನ್ವರಿಗೆ ಕೊಡತೇನಿ ಹುಷಾರ್'' ಎಂದು ಧಮಕಿ ಕೂಡಾ ಕೊಟ್ಟಿದ್ದಾನಂತೆ. ಆದರೆ ಅಸಲಿಗೆ ಶಿವಬಸನಗೌಡ ಪಾಟೀಲ ಅನ್ವರಿಗೆ ಬಿಜೆಪಿ ಟಿಕೆಟ್ ಸಿಗದಿದ್ದಾಗ ಕಾಂಗ್ರೆಸ್ ಜತೆ ಕಾಂಟ್ಯಾಕ್ಟ್ ಬೆಳೆಸಿಕೊಂಡಿದ್ದ. ಈಗಲೂ ಬಸವರಾಜ ರಾಯರೆಡ್ಡಿ ತನ್ನ ಪರ ಪ್ರಚಾರ ಮಾಡಲು ಕರೆದರೆ ಮುಲಾಜಿಲ್ಲದೆ ಹೋಗುವ ತಯಾರಿಯಲ್ಲಿದ್ದಾನೆ. ಹಾಗೂ ಡಾರಾಂಪುರ ಸಾಹೇಬ ಜೆಡಿಎಸ್‌ನ ಕದ ತಟ್ಟಿದ್ದಾನೆ. ಹೀಗಿರುವಾಗ ಒಬ್ಬರನ್ನು ತಡವಿದರೂ ಮೂರು ಕಡೆಯಿಂದ ಕರೆಂಟ್ ಹೊಡೆಯುವ ಸ್ಥಿತಿ ಶಿವರಾಮೇಗೌಡ ಮತ್ತು ಬಿಜೆಪಿಗೆ ಬಂದಿದೆ.

ಸ್ವಪಕ್ಷದಲ್ಲಿ ಎದ್ದಿರುವ ಅಸಮಾಧಾನದ ಬೆಂಕಿಯಿಂದ ಈ ಚುನಾವಣೆಯಲ್ಲಿ ತಾನು ಸುಡುವುದು ನಿಶ್ಚಿತ ಎಂದು ಗೊತ್ತಾದ ಮೇಲೆ ಶಿವರಾಮೇಗೌಡ ಸ್ವಜಾತಿಗೆ ಕೈ ಹಚ್ಚಿದ್ದಾನೆ. ಪಂಚಮಸಾಲಿ ಪೀಠದ ಸ್ಥಿರ-ಚರ ಸ್ವಾಮಿಗಳಿಂದ ಕಾಂಗ್ರೆಸ್, ಜೆಡಿಎಸ್‌ನಲ್ಲಿರುವ ಸ್ವಜಾತಿ ಲೀಡರ್‌ಗಳನ್ನು ತನ್ನತ್ತ ಬರುವಂತೆ ಹೇಳಿಸುತ್ತಿದ್ದಾನೆ. ಜೆಡಿಎಸ್‌ನಲ್ಲಿದ್ದ ಎಂ.ಬಿ. ಪಾಟೀಲ ಈಗಾಗಲೇ ಕಮಲ ಬಾವುಟ ಕೈಯಲ್ಲಿ ಹಿಡಿದು ಹೊರಬಿದ್ದಿದ್ದಾನೆ. ಕೊಪ್ಪಳ ಶಾಸಕ ಸಂಗಣ್ಣ ಕರಡಿ, ಕುಷ್ಟಗಿಯ ಮಾಜಿ ಶಾಸಕ ಕೆ. ಶರಣಪ್ಪ, ಯಲಬುರ್ಗದ ಜಿ.ಪಂ. ಸದಸ್ಯ ಚನ್ನನಗೌಡ ಜಾತಿ ಚುನಾವಣೆಗೆ ನಿಲ್ಲುವುದು ಗ್ಯಾರಂಟಿ ಎನ್ನುವ ಮಾತಿದೆ. ಆದರೆ ಅಸಲಿಗೆ ಇವರೆಲ್ಲಾ ಶಿವರಾಮೇಗೌಡನ ಬೀಗರು ಎನ್ನುವುದೂ ಜನರಿಗೆ ಗೊತ್ತಿರುವ ವಿಷಯ.

ಜೆಡಿಎಸ್ ಶಾಸಕ ಮತ್ತು ಲೀಡರ್‌ಗಳು ಬಿಜೆಪಿ ಜತೆ ಸೇರಿ ಜಾತಿ ಒಪ್ಪಂದ ಮಾಡಿಕೊಂಡು ಸ್ವಾಮಿಗಳಿಗೆ ಜೈ ಎನ್ನುತ್ತಿರುವುದನ್ನು ಬಿಜೆಪಿ ಟಿಕೆಟ್ ಅಸಮಾಧಾನಿಗಳು ಕಂಡು ದೇವೇಗೌಡರಿಗೆ ಮತ್ತು ಕುಮಾರಸ್ವಾಮಿಗೆ ಮೂಗರ್ಜಿಯೊಂದನ್ನು ಬರೆದು ಇವರ ಮೇಲೊಂದು ಕಣ್ಣಿಡುವಂತೆ ಹೇಳಿದ್ದಾರಂತೆ.

ಕ್ಷೇತ್ರ ಮರುವಿಂಗಡಣೆಯ ನಂತರ ನಡೆಯುತ್ತಿರುವ ಈ ಲೋಕಸಭಾ ಚುನಾವಣೆಯಲ್ಲಿ ಕೊಪ್ಪಳ ಕ್ಷೇತ್ರಕ್ಕೆ ಪಕ್ಕದ ರಾಯಚೂರು, ಬಳ್ಳಾರಿಯ ಸ್ವಲ್ಪ ಪ್ರದೇಶಗಳು ಸೇರಿಕೊಂಡಿವೆ. ಕೊಪ್ಪಳ ಜಿಲ್ಲೆಯ ಐದು ಕ್ಷೇತ್ರಗಳೊಂದಿಗೆ ರಾಯಚೂರು ಜಿಲ್ಲೆಯ ಮಸ್ಕಿ ರಾಯಚೂರು, ಬಳ್ಳಾರಿಯ ಶಿರಗುಪ್ಪ ಕ್ಷೇತ್ರ ಈ ಕಡೆ ಸೇರಿವೆ. ಹಾಲಿ ಎಂಪಿ ವೆಂಕಟೇಶ ನಾಯಕನ ಹಿಡಿತದಲ್ಲಿರುವ ರಾಯಚೂರು ಭಾಗ ಕಾಂಗ್ರೆಸ್‌ನ ವರವಾಗಲಿದೆ. ಜಾತಿವಾರು ಲೆಕ್ಕಾಚಾರ ತೆಗೆದರೆ ಕುರುಬ ಮತ್ತು ರೆಡ್ಡಿ ಅಲ್ಪಸಂಖ್ಯಾತರು ಪ್ರತಿ ಚುನಾವಣೆಯಲ್ಲೂ ನಿರ್ಣಾಯಕವಾಗಿ ಹೊರಹೊಮ್ಮಿದ್ದಾರೆ. ಇವ್ಯಾವ ಕೋಮುಗಳೂ ಬಿಜೆಪಿಗೆ ಮತ ಹಾಕುವ, ಗೆಲ್ಲಿಸುವ ಇರಾದೆ ಹೊಂದಿಲ್ಲ. ಯಾವ ಮಗ್ಗುಲಿನಿಂದ ನೋಡಿದರೂ ಬಿಜೆಪಿಗೆ ಸೋಲು ನಿಶ್ಚಿತ ಎನ್ನುವುದು ಇಲ್ಲಿಯ ರಾಜಕೀಯ ಪರಿಣತರ ವಿಚಾರ.


ಶಿವರಾಮೇಗೌಡ


ವಿರೂಪಾಕ್ಷ


ಸಂಗಣ್ಣ

ಇನ್ನು ಕಾಂಗ್ರೆಸ್ ಮತ್ತು ಜೆಡಿಎಸ್ ತಮ್ಮ ಅಭ್ಯರ್ಥಿಗಳನ್ನು ತಡವಾಗಿ ಆಯ್ಕೆ ಮಾಡಿದರೂ ಯೋಗ್ಯ ಮತ್ತು ಪ್ರಬಲ ಪೈಪೋಟಿ ನೀಡಬಲ್ಲವರನ್ನು ಕಣಕ್ಕೆ ನೂಕಿವೆ. ಜೆಡಿಎಸ್‌ನ ಇಕ್ಬಾಲ್ ಅನ್ಸಾರಿ ಕೊಪ್ಪಳ ಜಿಲ್ಲೆಯ ಅಭಿವೃದ್ಧಿ ಬಗ್ಗೆ ಆಲೋಚಿಸುವ ಏಕೈಕ ವ್ಯಕ್ತಿ ಎಂಬ ಹೆಸರು ಹೊಂದಿರುವಾತ. ಹಾಳು ಕೊಂಪೆಯಂತಿದ್ದ ಗಂಗಾವತಿ ತಾಲ್ಲೂಕಿಗೆ ಒಂದೇ ಅವಧಿಯಲ್ಲಿ ಸುಂದರ ರೂಪ ಕೊಟ್ಟಿದ್ದಾರೆ. 150 ಕೋಟಿಗೂ ಹೆಚ್ಚು ಹಣ ಅನ್ಸಾರಿಯ ಶಾಸಕ ಅವಧಿಯಲ್ಲಿ ವಿನಿಯೋಗವಾಗಿದೆ. ನೂತನ ಬಸ್‌ಸ್ಟ್ಯಾಂಡ್, ಸಭಾಭವನಗಳು, ಕುಡಿಯುವ ನೀರಿನ ವ್ಯವಸ್ಥೆಯಾಗಿದ್ದೆಲ್ಲಾ ಅವರ ಕಾಲದಲ್ಲೇ. ಕಾಂಗ್ರೆಸ್‌ನಲ್ಲಿ ರಾಜಕೀಯ ನಡೆ ಆರಂಭಿಸಿದ್ದ ಅನ್ಸಾರಿ ವೈಯಕ್ತಿಕವಾಗಿ ಬೆಳೆಯಲು ಅವಕಾಶ ಸಿಗಲಿಲ್ಲ ಎಂಬ ಕಾರಣಕ್ಕೆ ದೇವೇಗೌಡರ ಕಡೆ ವಾಲಿ ದೊಡ್ಡ-ಚಿಕ್ಕಗೌಡರ ನೆಚ್ಚಿನ ಭಂಟರಾಗಿ ರಾಜ್ಯದ ಅಲ್ಪಸಂಖ್ಯಾತ ಸಮುದಾಯಕ್ಕೆ ಯುವ ನಾಯಕನಾಗಿ ಬೆಳೆದು ನಿಂತಿದ್ದಾರೆ.

ಅನ್ಸಾರಿ ಅವರ ತಂದೆ ಮಾಡಿದ ಜನಸೇವೆ ವರ್ಚಸ್ಸು ಕೂಡ ಅವರ ಬೆನ್ನಿಗಿದೆ. ಅನ್ಸಾರಿ ತಂದೆ ಎಂ.ಎಸ್. ಅನ್ಸಾರಿ ಆ ಕಾಲದಲ್ಲಿ ಭಾವೈಕ್ಯ ಸಿರಿ ಎಂಬ ಬಿರುದಿನಿಂದ ಅಭಿನಂದಿಸಲ್ಪಟ್ಟಿದ್ದರು. ಸಾಮಾನ್ಯ ಜನರ ಕೈಗೆ ಸಿಗಲಿಲ್ಲವೆಂಬ ಆರೋಪವೊಂದನ್ನು ಬಿಟ್ಟರೆ ಅನ್ಸಾರಿಗೆ ಅಂಥಾ ಪ್ರಬಲ ವಿರೋಧವೇನಿಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸ್ವ-ಪಕ್ಷದ ಕೆಲ ಕುತಂತ್ರಿಗಳ ಭತ್ರಿ ಬುದ್ಧಿಯಿಂದ ಅಲ್ಪ ಮತದಲ್ಲಿ ಸೋತಿದ್ದರು. ಅದರ ಅನುಕಂಪದ ಫಲ ಮತ್ತು ಕುರುಬ ಜನಾಂಗದ ನಾಗಪ್ಪ ಸಾಲೋಣಿಯ ಬೆಂಬಲದಿಂದ ಈ ಲೋಕಸಭಾ ಚುನಾವಣೆಯಲ್ಲಿ ಪರಿಣಾಮಕಾರಿ ಪೈಪೋಟಿ ಜತೆಗೆ ಜಯದ ಹತ್ತಿರ ಹೋಗಬಹುದಾಗಿದೆ.


ಇನ್ನು ಕಾಂಗ್ರೆಸ್‌ನ ಬಸವರಾಜ ರಾಯರೆಡ್ಡಿ ಜಿಲ್ಲೆಯ ಹಿರಿಯ ರಾಜಕಾರಣಿ. ಒಂದು ಬಾರಿ ಲೋಕಸಭೆಗೆ ಆಯ್ಕೆಯಾಗಿ 3 ಬಾರಿ ಶಾಸಕ, 1 ಬಾರಿ ಸಚಿವನಾಗಿ ಕೆಲಸ ಮಾಡಿದ ಅನುಭವ ಅವರಲ್ಲಿದೆ. ಪ್ರಬಲ ರೆಡ್ಡಿ ಜನಾಂಗ ಸೇರಿದಂತೆ ಲಿಂಗಾಯತ ಮತಗಳು ರಾಯರೆಡ್ಡಿ ಬೆಂಬಲಕ್ಕೆ ಬರುತ್ತವೆ. ಹಾಲಿ ಸಂಸದ ವಿರೂಪಾಕ್ಷಪ್ಪ ಚುನಾಯಿತನಾಗಿದ್ದೇ ತಡ, ಕ್ಷೇತ್ರವನ್ನು ಮರೆತು ತನ್ನ ಅಳಿಯನನ್ನು ಮೇಯಲು ಬಿಟ್ಟು ಬಡ್ಡಿ ವ್ಯವಹಾರದಲ್ಲಿ ತಲ್ಲೀನನಾಗಿದ್ದ. ಇವನ ಅವಧಿಯಲ್ಲಿ ಕೊಪ್ಪಳ ಮುಂದೆ ಬರಲಿಲ್ಲ ಬದಲಾಗಿ ಹಿಂದಕ್ಕೋಡಿತ್ತು. ಜನರಿಗೆ ಮುಖ ತೋರಿಸದೆ ಎ.ಸಿ. ಕಾರಿನಲ್ಲಿ ಅಡ್ಡಾಡಿದವನು ವಿರೂಪಾಕ್ಷಪ್ಪ, ಈತ ದಿಢೀರನೆ ತನಗೆ ಟಿಕೆಟ್ ಬೇಕು, ಹಾಲಿ ಎಂಪಿಗೆ ಟಿಕೆಟ್ ಇಲ್ಲ ಅಂದರೆ ಹೇಗೆ? ಎಂದು ನಾಲ್ಕು ಜನ ಪುಟಗೋಸಿ ಲೀಡರ್‌ಗಳನ್ನಿಟ್ಟುಕೊಂಡು ದಿಲ್ಲಿ-ಬೆಂಗಳೂರು ಎಂದೆಲ್ಲಾ ತಿರುಗಿದ. ಆದರೆ ಕಾಂಗ್ರೆಸ್ ಹೈಕಮಾಂಡ್ ವಿರೂಪಾಕ್ಷನಿಗೆ ಮೋಕ್ಷ ಕೊಟ್ಟು ರಾಯರೆಡ್ಡಿಗೆ ಪಕ್ಷದ ಜವಾಬ್ದಾರಿ ಕೊಟ್ಟಿದ್ದು ಕೊಪ್ಪಳದ ಕಾಂಗ್ರೆಸ್‌ಗೆ ಅದೇ ಗೆಲುವು ತಂದು ಕೊಟ್ಟಂತಾಗಿದೆ. ಯಲಬುರ್ಗಾದಿಂದ ಕಳೆದ ವಿಧಾನಸಭೆಗೆ ನಿಂತು ಸೋತಿದ್ದರೂ ವರ್ಚಸ್ಸಿಗೇನೂ ಧಕ್ಕೆ ತಂದುಕೊಳ್ಳದ ಬಸವರಾಜ ರಾಯರೆಡ್ಡಿ ಹಿರಿಯ ಮುಖಂಡ ಸಿದ್ದರಾಮಯ್ಯನವರ ಕ್ಷೇತ್ರದ ಮೇಲಿರುವ ಹಿಡಿತವನ್ನು ಸರಿಯಾಗಿ ಬಳಸಿಕೊಂಡಲ್ಲಿ ಏನಾದರೂ ಭವಿಷ್ಯ ಕಾಣಲು ಸಾಧ್ಯ. ಒಟ್ಟಾರೆಯಾಗಿ ಕೊಪ್ಪಳ ಪ್ರತಿಬಾರಿಗಿಂತ ಈ ಬಾರಿ ಚುನಾವಣೆಯಲ್ಲಿ ಏರು ಕಾವನ್ನು ರೂಪಿಸಿಕೊಂಡಿದೆ. ಜಾತಿ ಲೆಕ್ಕಾಚಾರ, ಕೋಮುಗಳ ಮಧ್ಯೆ ದ್ವೇಷದ ಕಿಡಿಹಚ್ಚಿ ತನ್ನ ವೋಟ್‌ಬ್ಯಾಂಕ್ ಹೆಚ್ಚಿಸಿ ಕೊಳ್ಳುವ ಲೆಕ್ಕಾಚಾರದಲ್ಲಿರುವ ಬಿಜೆಪಿಗೆ ತನ್ನ ಹಳ್ಳ ತಾನೇ ತೋಡಿಕೊಂಡಿದೆ. ಕಾಂಗ್ರೆಸ್, ಜೆಡಿಎಸ್‌ನಿಂದ ಮಾಸ್ ಲೀಡರ್‌ಗಳು ಕಣದಲ್ಲಿ ಧುಮುಕಿರುವುದು ಕೇಸರಿಗಳಿಗೆ ಪ್ರಾರಂಭದಲ್ಲೇ ನಡುಕ ಹಚ್ಚಿದೆ. ಅನ್ಸಾರಿಯ ಆಕ್ಷನ್, ರಾಯರೆಡ್ಡಿಯ ರೆಪ್ಯುಟೇಷನ್‌ಗಳ ಮುಂದೆ ಬಿಜೆಪಿಯ ಶಿವರಾಮೇಗೌಡ ಪಂಚಮಸಾಲಿ ಲ್ಯಾಂಡು... ಮೊಬೈಲ್... ಸ್ವಾಮಿಗಳ ಪಾದುಕೆಗಳಿಗೆ ಪರ್ಮನೆಂಟಾಗಿ ಫಿಕ್ಸ್ ಆಗೋದು ಆ ಸ್ವಾಮಿಗಳಾಣೆಗೂ ಸತ್ಯ.. ಸತ್ಯ.. ■


ಧಾರವಾಡ: ಕುನ್ನೂರ್‌ಗಾಗಿ ಒಂದಾಗುತ್ತಿರುವ ಹಳೆ ತಲೆಗಳು

ವಿನಯ್ ಹುರುಳಿಕುಪ್ಪಿ

ಒಡೆದ ಮನೆಯಂತಾಗಿದ್ದ ಧಾರವಾಡ ಜಿಲ್ಲಾ ಕಾಂಗ್ರೆಸ್ ಈಗ ಮತ್ತೆ ಒಂದಾಗುತ್ತಿದೆ. ಕಳೆದ ದಶಕದಿಂದೀಚೆಗೆ ಪ್ರತಿಯೊಂದು ಸಂದರ್ಭದಲ್ಲೂ ಒಬ್ಬರ ಕಾಲನ್ನು ಮತ್ತೊಬ್ಬರು ಎಳೆಯುತ್ತಿದ್ದ ಹಳೆ ತಲೆಗಳು ಈಗ ಕೆಟ್ಟ ಮೇಲೆ ಬುದ್ಧಿ ಬಂತು ಎನ್ನುವ ಹಾಗೆ ಒಗ್ಗೂಡತೊಡಗಿದ್ದಾರೆ. ಇದಕ್ಕೆ ಮಂಜುನಾಥ್ ಕುನ್ನೂರೇ ಪ್ರಮುಖ ಪ್ರೇರಣೆ. ದೊಡ್ಡ ದೊಡ್ಡ ತಲೆಗಳಿಂದ ಭಾರವಾಗಿದ್ದ ಕಾಂಗ್ರೆಸ್ ಎಂಬ ಟೈಟಾನಿಕ್ ಹಡಗು ಇನ್ನೇನು ಮುಳುಗುವ ಹಂತ ತಲುಪಿದ್ದಾಗಲೇ ಕುನ್ನೂರ್ ಪಕ್ಷಕ್ಕೆ ಮರಳಿದ್ದರಿಂದ ಅಂತಹದ್ದೊಂದು ಅನಾಹುತ ತಪ್ಪಿದಂತಾಗಿದೆ.

ಅಸಲಿಗೆ ಅಖಂಡ ಧಾರವಾಡ ಜಿಲ್ಲೆ ಕಾಂಗ್ರೆಸ್ಸಿನ ಭದ್ರಕೋಟೆಯಾಗಿದ್ದ ಜಮಾನವೊಂದಿತ್ತು. ಆಗೆಲ್ಲಾ ದುಡ್ಡಿನ ದೌಲತ್ತಿಗಿಂತ ಜನಚಿಂತನೆಯ ಕನಿಷ್ಠ ಕಾಳಜಿಯಿದ್ದವರಿಗೆ ಜನ ಮತಹಾಕಿ ಗೆಲ್ಲಿಸುತ್ತಿದ್ದರು. ಕಾಂಗ್ರೆಸ್ ಪಕ್ಷದಲ್ಲಿದ್ದ ಸಾಲು ಸಾಲು ನಾಯಕರು ಗ್ರಾಮಪಂಚಾಯತಿಯಿಂದ ಹಿಡಿದು ವಿಧಾನಸೌಧದ ತನಕ ಧಾರವಾಡ ಜಿಲ್ಲೆಯಿಂದ ಪ್ರಯಾಣ ಬೆಳೆಸಿದ್ದಕ್ಕೆ ಅವರಲ್ಲಿದ್ದ ಪ್ರಾಮಾಣಿಕತೆಯೇ ಕಾರಣವಾಗಿತ್ತು, ಯಾವಾಗ ತೊಂಭತ್ತರ ದಶಕದ ಕೊನೆಯ ವೇಳೆಗೆ ಜಿಲ್ಲಾ ಕಾಂಗ್ರೆಸ್‌ಗೆ ಕ್ಯಾನ್ಸರ್ ತಗುಲಿತೋ ಅಲ್ಲಿಂದ ಚಿಂದಿಯಾಗುತ್ತಾ ಸಾಗಿತು. ಸಾಲದ್ದಕ್ಕೆ ಈದ್ಗಾ ಗಲಾಟೆಯಲ್ಲಿ ಕಾಂಗ್ರೆಸ್ಸಿಗರು ಜವಾಬ್ದಾರಿ ಮರೆತು ನಡೆದುಕೊಂಡಿದ್ದಕ್ಕೆ ಬಿಜೆಪಿಯ ಗೆಲುವಿನ ಯಾತ್ರೆ, ಕಾಂಗ್ರೆಸ್‌ನ ಅವನತಿಯ ಯಾತ್ರೆಗಳ ಉದ್ಘಾಟನೆಯಾದಂತಾಯಿತು.





ಕ್ಷೇತ್ರ ಪುನರ್ವಿಂಗಡಣೆಯ ನಂತರ ಏಳು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವ ಧಾರವಾಡ ಜಿಲ್ಲೆಯಲ್ಲಿ 2004ರ ಚುನಾವಣೆ ಕಾಂಗ್ರೆಸ್‌ಗೆ ಭಾರಿ ಹೊಡೆತ ಕೊಟ್ಟಿತು. ಅಲ್ಲಿದ್ದ ಐದು ಕ್ಷೇತ್ರಗಳಲ್ಲಿ ಪ್ರಾಬಲ್ಯ ಹೊಂದಿದ್ದ ಕಾಂಗ್ರೆಸ್ ಮೂರು ಕ್ಷೇತ್ರಗಳಿಗೆ ಸೀಮಿತಗೊಂಡಿತು. ಜಬ್ಬಾರ್ ಖಾನ್ ಹೊನ್ನಳ್ಳಿ, ಎ.ಎಂ.ಹಿಂಡಸಗೇರಿ, ಎಸ್.ಆರ್.ಮೋರೆ, ವಿನಯ್ ಕುಲಕರ್ಣಿ, ಅನಿಲ್ ಕುಮಾರ್ ಪಾಟೀಲ್, ಸಿ.ಎಸ್.ಶಿವಳ್ಳಿಗಳು ತಾವೇ ಬಡಿದಾಡಿಕೊಳ್ಳಲು ಪ್ರಾರಂಭಿಸಿದರು. ದಿವಂಗತ ಡಿ.ಕೆ.ನಾಯ್ಕರ್ ನೇತೃತ್ವದಲ್ಲಿ ಕಾಂಗ್ರೆಸ್‌ನಲ್ಲಿ ಮೊಳಕೆಯೊಡೆದಿದ್ದ ಭಿನ್ನಮತ ಕಾಲಾನಂತರದಲ್ಲಿ ಎಚ್ಕೆ ಪಾಟೀಲರವರೆಗೂ ವ್ಯಾಪಿಸಿತು. ಪರಿಣಾಮವಾಗಿ ಧಾರವಾಡ ಕಾಂಗ್ರೆಸ್ ಬರೊಬ್ಬರಿ ಇಬ್ಭಾಗವಾಗಿ ಹೋಯಿತು. ಎಚ್ಕೆ ಪಾಟೀಲರು ಧಾರವಾಡ ಕಾಂಗ್ರೆಸ್ ಪಕ್ಷದ ನಾಯಕ ಸ್ಥಾನದಲ್ಲಿದ್ದರೂ ಕಿವಿ ಕಚ್ಚುವವರ ಮಾತು ಕೇಳಿ ಅನಿಲ್ ಕುಮಾರ್ ಪಾಟೀಲ್, ವೀರಣ್ಣ ಮತ್ತಿಕಟ್ಟಿ, ಡಿ.ಕೆ ನಾಯ್ಕರ್ ಮಗ ಲೋಹಿತ್ ನಾಯ್ಕರ್, ವಿನಯ್ ಕುಲಕರ್ಣಿಗಳ ಮಗ್ಗುಲು ಮುರಿಯುವುದಕ್ಕೆ ನಿಂತರು. ಅದರ ಪರಿಣಾಮವಾಗಿ ಕಾಂಗ್ರೆಸ್ ಧೂಳೀಪಟವಾಗಬೇಕಾಯಿತು. ತಮ್ಮ ತಂದೆ ದಿವಂಗತ ಕೆ.ಎಚ್.ಪಾಟೀಲರ ಕಾಲದಲ್ಲಿದ್ದ ಭಿನ್ನಾಭಿಪ್ರಾಯಗಳಿಗೆ ಮತ್ತೆ ಜೀವ ನೀಡಿದ್ದ ಎಚ್ಕೆ ಅದರ ಫಲವನ್ನು ಮೊನ್ನೆಯ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಉಂಡಿದ್ದಾರೆ. ತಮ್ಮ ತಪ್ಪಿನ ಅರಿವಾಗಿರುವಂತೆ ಕಾಣುತ್ತಿರುವ ಅವರು ಹಿಂದಿನ ಜಗಳವನ್ನೆಲ್ಲಾ ಬಿಟ್ಟು ಈಗ ಮತ್ತೆ ಒಗ್ಗಟ್ಟು ಪ್ರದರ್ಶಿಸುತ್ತಿದ್ದಾರೆ.


ಧಾರವಾಡ ಕಾಂಗ್ರೆಸ್‌ನಲ್ಲಿದ್ದ ಒಳಜಗಳಗಳ ಬೆಂಕಿಗೆ ತುಪ್ಪ ಸುರಿದ ಮಂದಿಯೇ ಹೆಚ್ಚು, ಯಾರೂ ಕೂಡ ಜಗಳ ಬಗೆಹರಿಸಿಕೊಳ್ಳುವ ಸಣ್ಣ ಪ್ರಯತ್ನ ಮಾಡಿದ ಉದಾಹರಣೆಗಳಿಲ್ಲ. ಆದರೆ, ಸದ್ಯ ಧಾರವಾಡ ಪಾರ್ಲಿಮೆಂಟ್ ಕ್ಷೇತ್ರದಲ್ಲಿದ್ದ ಈ ಜಗಳಗಳನ್ನು ಮೊದಲಿನಿಂದಲೂ ಅವಲೋಕಿಸಿದ್ದ ಮಂಜುನಾಥ್ ಕುನ್ನೂರ್ ಇದರ ಅಪಾಯ ಅರಿತುಕೊಂಡೇ ವಿರುದ್ಧ ದಿಕ್ಕಿಗಿದ್ದ ನಾಯಕರನ್ನು ವೈಯಕ್ತಿಕವಾಗಿ ಭೇಟಿಯಾಗಿ ಚರ್ಚಿಸಿದ್ದಾರೆ. ಇದು ಕೇವಲ ಕುನ್ನೂರ್ ಗೆಲುವಾಗಿರದೇ ಜಿಲ್ಲೆಯಲ್ಲಿ ನರಸತ್ತಂತಾಗಿದ್ದ ಕಾಂಗ್ರೆಸ್‌ನ ಗೆಲುವಾಗಿದೆ.

ಮೊನ್ನೆ ಹುಬ್ಬಳ್ಳಿಯ ನವೀನ್ ಹೋಟೆಲ್‌ನಲ್ಲಿ ಸಭೆ ಸೇರಿದ್ದ ಎಲ್ಲಾ ನಾಯಕರು ಕುನ್ನೂರ್ ಗೆಲುವಿಗೆ ಶಪಥ ಮಾಡಿ ಪತ್ರಿಕಾಗೋಷ್ಠಿ ನಡೆಸಿದ್ದಾರೆ. ಈ ಸಭೆಗೆ ರೋಣದ ಬಿ.ಎಸ್.ಪಾಟೀಲರು ಬರದಿದ್ದರೂ ತಮ್ಮ ಬೆಂಬಲ ವ್ಯಕ್ತಪಡಿಸಿದ್ದಾರೆ.

ಒಟ್ಟಾರೆಯಾಗಿ ಧಾರವಾಡ ಜಿಲ್ಲಾ ಕಾಂಗ್ರೆಸ್‌ನಲ್ಲಿ ಗುಂಪುಗಾರಿಕೆ, ಗುದ್ದಾಟಗಳಿಗೆ ತೆರೆಬಿದ್ದಿರುವುದು ಹಳೆ ಹುಲಿಗಳೆಲ್ಲಾ ಒಗ್ಗೂಡಿ ಸೂಸುತ್ತಿರುವುದು ಬರುವ ಚುನಾವಣೆಯಲ್ಲಿ ಕುನ್ನೂರ್‌ಗೆ ಆನೆ ಬಲ ತಂದು ಕೊಟ್ಟಂತಾಗಿದೆ.

ವೇರಿ: ಸಲಿಂ ಅಹ್ಮದ್ ಎಂಟ್ರಿ

ಉದಾಸಿ ಮಗನಿಗೆ ಡಿಸೆಂಟ್ರಿ!




...ನಾರು ಏನೇ ಹೇಳಲಿ. ನನ್ನ ಮಗನನ್ನು ಹೊಲಸು ...ಮುಕ್ಕೆ ತರಲ್ಲಾ ಅಂದ್ರೆ ತರಲ್ಲಾ" ಎಂದು ...ರಪ್ಪನ ಹಾಗೆ ಏನೇನೋ ಡೈಲಾಗ್ ಹೊಡೆದಿದ್ದ ...ಂತ್ರಿ ಚನ್ನಬಸಪ್ಪ ಉದಾಸಿ. ಆದರೆ ತಾನಾಡಿದ ... ನೆನಪಿಸಿಕೊಳ್ಳದೆ, ಪಕ್ಷಕ್ಕಾಗಿ ದುಡಿದವರನ್ನು ...ಗೆದು, ರಾಜಕಾರಣದ ಗಂಧ ಗಾಳಿನೂ ಗೊತ್ತಿ...ಸಾ ಅಂದ್ರೆ ಏನೂ ಅಂತನೂ ... ಕಾಂಕ್ರೀಟ್ ಪ್ರಾಣಿ ತನ್ನ ಮಗ ...ರನನ್ನು ಲೋಕಸಭಾ ಅಖಾಡಕ್ಕೆ ...ಸಿದ್ದಾನೆ. ನಾಲ್ಕು ಜನ ಲಿಕ್ಕರ್ ...ಲೀಡರ್‌ಗಳನ್ನು ಬೆನ್ನಿಗಿಟ್ಟುಕೊಂಡು, ...ಾಗೆ ಎರಡೂ ಕೈ ಎತ್ತಿ ಹದಿನೈದು ...ದ್ದೇ ತಡ, ಪುಟಗೋಸಿಗಳು ಜೈ ... ಕಂಡು "ಅಪ್ಪಾ ನಾ ಗೆದ್ದೆ... ...ದಾದೆ" ಎಂದು ಹಾಡು ಹೇಳುತ್ತಿದ್ದ ...ಷ ಕಳೆದೆರಡು ದಿನಗಳಿಂದ ಕಾಂಗ್ರೆಸ್ ...ಯಂಗ್ ಟೈಗರ್ ಸಲಿಂ ಅಹ್ಮದ್‌ರ ... ಭರಾಟೆ, ಅವರಿದ್ದಲ್ಲಿ ಕಿಕ್ಕಿರಿದು ...ವ ಜನರನ್ನು ಕಂಡು ಅದೇ ... ಡಿಸೆಂಟ್ರಿ ಹಚ್ಚಿಕೊಂಡು "ಮಾತ್ರೆ.. ..." ಎಂದೆಲ್ಲಾ ಹೇಳುತ್ತಿರುವುದು ...ಫ್‌ಪ್ಯಾಂಟ್ ಸಡಿಲಾಗಿರುವಂತಾಗಿದೆ. ..., ಕನಕದಾಸರಂಥ ದಾರ್ಶನಿಕರಿಗೆ ...ದ, ಭಾವೈಕ್ಯತೆಯ ತವರು ಎಂದೇ ...ವ ಹಾವೇರಿಗೆ ರಾಕ್ಷಸರಂತೆ ಕಾಲಿಟ್ಟ ...ಬಿಜೆಪಿಗಳು ಕಳೆದ ನಾಲ್ಕು ವರ್ಷ ...ಮ್ಮ ದಾಹಕ್ಕಾಗಿ ಏನೆಲ್ಲಾ ಹೀನ ...ಚಿದ್ದರು ಎನ್ನುವುದೀಗ ಪ್ರತಿಯೊಬ್ಬನ ...ಟ್ಟಿದೆ. ಅದನ್ನು ಕಾಂಗ್ರೆಸ್ ಅಭ್ಯರ್ಥಿ ...ಹ್ಮದ್‌ನನ್ನು ಗೆಲ್ಲಿಸುವ ಮೂಲಕ ... ತವಕದಲ್ಲಿ ಈ ಕ್ಷೇತ್ರದ ಜನ ...ದ್ದಾರೆ. ಯಾಕೆಂದರೆ ಕಾಂಗ್ರೆಸ್ ಅಭ್ಯರ್ಥಿಯಾಗಿ ...ದ್‌ನ ಹೆಸರು ಫೈನಲ್ ಆದಾಕ್ಷಣ ಕ್ಷೇತ್ರದಲ್ಲಿ ... ಉತ್ಸಾಹಭರಿತ ವಾತಾವರಣ, ಸ್ವಯಂ ... ಜನ ಪ್ರಚಾರಕ್ಕೆ ಸುಗ್ಗುತ್ತಿರುವುದು, ಅಲ್ಲದೆ ಒಡೆದ ಮನಸುಗಳು ಮತ್ತೆ ಪ್ರೀತಿ ಬಯಸಿ ಒಂದಾಗುತ್ತಿರುವುಧು ಶಿವಕುಮಾರ್ ಉದಾಸಿಯ ಚೆಡ್ಡಿ ಒದ್ದೆ ಮಾಡುತ್ತಿವೆ.






ಕೋಳಿವಾಡ



ಶಿವರಾಜ್

ಎಲ್ಲದಕ್ಕಿಂತ ಮೊದಲು ಎಲೆಕ್ಷನ್ ಫೀಲ್ಡಿಗಿಳಿದಿದ್ದ ಬಿಜೆಪಿ ಎದುರಾಳಿಗಳಿಲ್ಲದೆ, ಗೆದ್ದುಬಿಟ್ಟೆವು ಎಂಬ ಭ್ರಮೆಯಲ್ಲಿ ತೇಲಾಡುತ್ತಿತ್ತು. ಈ ಒಂದು ವಾರದಲ್ಲಾದ ಬದಲಾವಣೆಯಿಂದ ಅದು ಹಗಲುಗನಸು ಎಂಬುದು ಗೊತ್ತಾದಂತಿದೆ. ಅದಕ್ಕೆ ಅಭ್ಯರ್ಥಿ ಶಿವಕುಮಾರನ ದಿನಚರಿಯಲ್ಲಾದ ಏರುಪೇರುಗಳೇ ಸಾಕ್ಷಿ. ಕನಿಷ್ಠ ಗ್ರಾಮ ಪಂಚಾಯತ್ ಚುನಾವಣೆಯನ್ನು ಅರಿಯದ ಉದಾಸಿ ಪುತ್ರ ಡೈರೆಕ್ಟ್ ಪಾರ್ಲಿಮೆಂಟಗೆ ನಿಂತು ಅದರಲ್ಲೂ ಸೋಲುವ ಭೀತಿ ಎದುರಾಗಿದ್ದನ್ನು ಕಂಡು ಹೆಂಡ ಕುಡಿದ ಮಂಗನ ಹಾಗೆ ಯಾರು ಎಲ್ಲೇ ಕರೆದರೂ ನಾಲ್ಕು ಕಾರುಗಳನ್ನು ಹಿಂದೆ ಮುಂದೆ ಇಟ್ಟುಕೊಂಡು ಅಲೆದಾಡುತ್ತಿದ್ದಾನೆ. ಸ್ಥಳೀಯ ಜನರ ಸಮಸ್ಯೆ ಕುರಿತು ಏನೂ ಜ್ಞಾನವಿಲ್ಲದ, ಜಿಲ್ಲೆಯ ಹಿನ್ನೆಲೆ ಏನೂ ಅಂತ ಗೊತ್ತಿರದ ಶಿವಕುಮಾರ ಭಾಷಣಕ್ಕೆ ವಿಷಯ ವಿಲ್ಲದೆ 'ಸ್ಥಳೀಯರಿಗೆ ಓಟು ನೀಡಿ, ನಾನು ಜಿಲ್ಲೆಯ ಮಗಾ.. ನಿಮ್ಮವಾ' ಎಂತೆಲ್ಲಾ ಪುಂಗಿ ಊದುತ್ತಿದ್ದಾನೆ. ಆದರೆ ಅಸಲಿಗೆ ಈ ಶಿವ ಕುಮಾರನೇ ಹೊರಗಿನವನು ಎನ್ನುವುದು ಇಲ್ಲಿಯ ಜನರಿಗೇನು ಗೊತ್ತಿರದ ವಿಚಾರ ವೇನಲ್ಲ, ಬೆಂಗಳೂರು ಸೇರಿ ಅಪ್ಪನ ಹರಾಮಿ ಹಣದಲ್ಲಿ ಲ್ಯಾಂಡ್ ಮಾಫಿಯಾವನ್ನೇ ಮೂಲ ಕಸುಬನ್ನಾಗಿಸಿಕೊಂಡ ಶಿವಕುಮಾರ್ ಉದಾಸಿ ಈಗ ಅಪ್ಪ ಸಿ.ಎಂ. ಉದಾಸಿಯ ಬೆಂಬಲ ದೊಂದಿಗೆ ಪಾಲಿಟಿಕ್ಸ್‌ಗೆ ಎಂಟ್ರಿಕೊಟ್ಟಿದ್ದಾನೆ. ಆದರೀಗ ಸಲೀಮ್ ಅಹ್ಮದ್ ಅವನ ದಾರಿಗೆ ಅಕ್ಷರಶಃ ಮುಳ್ಳಾಗಿದ್ದಾರೆ.




ಉದಾಸಿ


ಸಲಿಂ ಅಹ್ಮದ್ ಮೂಲತಃ ಮಂಗಳೂರಿನವರಾದರೂ ಬೆಳೆದಿದ್ದೆಲ್ಲಾ ಹಾವೇರಿ ನೆಲದಲ್ಲೇ. ಎನ್‌ಎಸ್‌ಯುಐದಂತಹ ವಿದ್ಯಾರ್ಥಿ ಸಂಘಟನೆಯ ರಾಷ್ಟ್ರೀಯ ಮುಖಂಡನಾಗಿ ಬಡವರ ತುಳಿತಕ್ಕೆ ಒಳಗಾದ ಜನರ ಧ್ವನಿಯಾಗಿ ಬೆಳೆದವರು. ಎರಡು ಬಾರಿ ವಿಧಾನ ಪರಿಷತ್ ಸದಸ್ಯರಾಗಿ ಮುಖ್ಯ ಸಚೇತಕರಾಗಿ, ಕಾಂಗ್ರೆಸ್ ಪಕ್ಷದ ಯುವ ಮುಖಂಡರಾಗಿ ರಾಜಕೀಯ ನೆಲೆ ಕಂಡುಕೊಂಡಿರುವ ಸಲೀಂ ತಮ್ಮ ಪರಿಷತ್ ಅನುದಾನದ ಬಹುಪಾಲು ಹಣವನ್ನು ಹಾವೇರಿ ಜಿಲ್ಲೆಯಲ್ಲಿ ವಿನಿಯೋಗಿಸಿದ್ದಾರೆ. ಒಂದು ಸಣ್ಣ ಗ್ರಾಮದಲ್ಲಿನ ಕ್ರಿಕೆಟ್ ಟೂರ್ನಮೆಂಟ್‌ನಿಂದ ಹಿಡಿದು ಜಿಲ್ಲೆಯಲ್ಲಿ ಜರುಗಿದ ದೊಡ್ಡ ಜಾತ್ರೆಗಳವರೆಗೂ ನಿಂತು ದುಡಿದಿರುವ ಸಲಿಂ ಕ್ಷೇತ್ರದ ಪ್ರತಿಯೊಬ್ಬ ಮತದಾರನಿಗೆ ಚಿರಪರಿಚಿತ.

'ಗೆಳೆಯರ ಬಳಗ' ಸಂಘಟನೆಯೊಂದನ್ನು ಕಟ್ಟಿ ಕೋಮುವಾದಿಗಳ ಮುಷ್ಠಿಯಿಂದ ದಾರಿ ತಪ್ಪುತ್ತಿರುವ ಯುವಕರನ್ನು ಸರಿದಾರಿಗೆ ತರುವ ಮತ್ತು ಅವರಲ್ಲಿ ಸಾಮರಸ್ಯದ ಭಾವನೆ ಮೂಡಿಸುವಂತಹ ಮಹತ್ತರ ಕೆಲಸಕ್ಕೆ ಸಲಿಂ ಕೈ ಹಾಕಿದ್ದು ಜಿಲ್ಲೆಯ ಬಿಜೆಪಿಗರಿಗೆ ಉರಿಬಿದ್ದಂತಾಗಿತ್ತು. ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸಲಿಂ ಬರುವುದು ಗ್ಯಾರಂಟಿ ಎಂದು ಗೊತ್ತಾಗಿದ್ದೇ ತಡ, ಮೊನ್ನೆಯ ಹೋಳಿ ಹುಣ್ಣಿಮೆಯ ಕಾಮನ ಹಬ್ಬವನ್ನು ಟಾರ್ಗೆಟ್ ಮಾಡಿಕೊಂಡು ಹಾವೇರಿ ನಗರದಲ್ಲಿ ಕೋಮು ಗಲಭೆ ಸೃಷ್ಟಿಸಲು ಹೊಂಚು ಹಾಕಿ ಬೆಂಕಿಯಿಟ್ಟರು. ದಲಿತ, ಅಲ್ಪಸಂಖ್ಯಾತ ಜನರ ಮಧ್ಯೆ ಕ್ಷುಲ್ಲಕ ಕಾರಣಕ್ಕೆ ಜಗಳ ಹಚ್ಚಿ ಗಲ್ಲಿ-ಗಲ್ಲಿಯಲ್ಲಿ ಭಗವಾಧ್ವಜ ಕಟ್ಟಿ ಮೋಜು ನೋಡಿದರು. ಆದರೆ ಪ್ರಜ್ಞಾವಂತ ಹಾವೇರಿ ಜನ ಈ ಕೊಳ್ಳಿದೆವ್ವಗಳ ಕೃತ್ಯಕ್ಕೆ ಛೀಮಾರಿ ಹಾಕಿ 'ಚುನಾವಣೆಯಲ್ಲಿ ಪರಿಣಾಮ ತೋರಿಸುತ್ತೇವೆ, ಬೆಂಕಿ ಇಟ್ಟವರಿಗೆ ಓಟಿನ ಮೂಲಕ ಬತ್ತಿ ಇಡತೇವಿ' ಎಂದಿದ್ದಾರೆ.

ಸಾಬರು ಬಂದರೆ ಸರಿದು ನಿಲ್ಲುವ, ದಲಿತರು ಬಂದರೆ ದೂರ ಸರಿಯುವ ಮಡಿವಂತ ಉದಾಸಿ ಮಗ ಶಿವಕುಮಾರ ಹಣ ಚೆಲ್ಲಿ ಹಾವೇರಿಯನ್ನು ಹೊತ್ತಿ ಉರಿಸಿ ಆ ಬೆಂಕಿಯಲ್ಲಿ ಚಳಿಕಾಯಿಸಿಕೊಳ್ಳುವ ತವಕ ತಿರುಗುಬಾಣವಾಗುವುದರಲ್ಲಿ ಸಂಶಯವಿಲ್ಲ. ಇದರಿಂದ ದೂರಾಗಿದ್ದ ದಲಿತ-ಅಲ್ಪಸಂಖ್ಯಾತ ಸಹೋದರರು ಸಲಿಂ ಮೂಲಕ ಒಂದಾಗಿ ಇದೇ ಚೆಡ್ಡಿಗಳ ವಿರುದ್ಧ ಘೋಷಣೆ ಹಾಕುತ್ತಿರುವುದು ಉದಾಸಿ ಸೋಲಿಗೆ ಮುನ್ನುಡಿಯಾಗಿದೆ.

ಧಾರವಾಡ ದಕ್ಷಿಣ ಎಂದು ಕರೆಯಿಸಿಕೊಳ್ಳುತ್ತಿದ್ದದ್ದು ಈಗ ಹಾವೇರಿ ಎಂಬ ಹೊಸದನ್ನು ಡಿಲಿಮಿಟೇಷನ್ ಮೂಲಕ ಪಡೆದ ಮೇಲೆ ಗದಗ ಜಿಲ್ಲೆಯನ್ನು ತನ್ನ ತೆಕ್ಕೆಗೆ ಹಾಕಿಕೊಂಡಿದೆ. ಹಾವೇರಿ ಜಿಲ್ಲೆಯ ಐದು ತಾಲ್ಲೂಕುಗಳು ಸೇರ್ಪಡೆಗೊಂಡು ಶಿಗ್ಗಾವಿ ಸವಣೂರುಗಳೆರಡು ಧಾರವಾಡಕ್ಕೆ ಹೋಗಿವೆ. ಇನ್ನು ಗದಗ ಜಿಲ್ಲೆಯ ನರಗುಂದವೊಂದನ್ನು ಬಿಟ್ಟು ಉಳಿದ ತಾಲ್ಲೂಕುಗಳು ಸೇರಿಕೊಂಡು ಹಾವೇರಿ ಲೋಕಸಭಾ ಕ್ಷೇತ್ರವಾಗಿ ಮಾರ್ಪಾಟಾಗಿದೆ. ಈ ಕ್ಷೇತ್ರದ ಇತಿಹಾಸವನ್ನು ಅವಲೋಕಿಸಿದರೆ ಬಹಳಷ್ಟು ಸಾರಿ ಅಲ್ಪಸಂಖ್ಯಾತ ಅಭ್ಯರ್ಥಿಗಳು ಅದರಲ್ಲೂ ಕಾಂಗ್ರೆಸಿಗರೇ ಗೆದ್ದಿದ್ದು ಜಾಸ್ತಿ. 1973ರ ಸಂದರ್ಭದಲ್ಲಿ ಇಲ್ಲಿ ಅಜಿತ್ ಸೇಠ್ ಮೂರು ಬಾರಿ ಗೆದ್ದರು. ನಂತರ ಹುಬ್ಬಳ್ಳಿಯ ಬಿ.ಎಂ. ಮುಜಾಹಿದ್ ಕೂಡಾ ಮೂರು ಬಾರಿ ಇಲ್ಲಿ ಅಧಿಕಾರ ಹಿಡಿದಿದ್ದರು. 1994ರಲ್ಲಷ್ಟೇ ಹಾವೇರಿಯ ಬಿ.ಎಂ.ಮೆಣಸಿನಕಾಯಿ ಲೋಕ ಶಕ್ತಿ ಪಕ್ಷದಿಂದ ಗೆದ್ದು ಎಂ.ಪಿ.ಯಾಗಿದ್ದರು. ಮುಂದೆ ಎರಡು ಅವಧಿಗೆ ಪ್ರೊ.ಐ.ಜಿ. ಸನದಿ ಅಧಿಕಾರ ನಡೆಸಿದರು. ನಂತರ ಇವರ ಅಸಮರ್ಥ ಆಡಳಿತ ವೈಖರಿಗೆ ಬೇಸತ್ತು ಜನ ಬಿಜೆಪಿಯಿಂದ ಮಂಜುನಾಥ ಕುನ್ನೂರರನ್ನು ಗೆಲ್ಲಿಸಿದ್ದರು.







ಶಿವಕುಮಾರ



ಬಸವರಾಜ್

ಅಲ್ಲಿಂದಲೇ ಜಿಲ್ಲೆಯಾದ್ಯಂತ ಕಾಂಗ್ರೆಸ್‌ನ ಶವಯಾತ್ರೆ ಆರಂಭಗೊಂಡಿದ್ದು. ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ಸೋತಿದ್ದೇ ತಡ, ಐ.ಜಿ. ಸನದಿ ಪಕ್ಷ ಸಂಘಟನೆಯಿಂದ ವಿಮುಖರಾಗಿ ಜಿಲ್ಲಾಧ್ಯಕ್ಷ ಪದವಿಯನ್ನು ತಳದಲ್ಲಿಟ್ಟುಕೊಂಡು ರಾಣೆಬೆನ್ನೂರಿನಿಂದ ನಿಂತು ಸೋತಿದ್ದ ಮಾಜಿ ಮಂತ್ರಿ ಕೋಳಿವಾಡನೊಂದಿಗೆ ಸೇರಿ ಹಂತ-ಹಂತವಾಗಿ ಪಕ್ಷವನ್ನು ಜನರಿಂದ ದೂರಾಗಿಸಿ ಪಕ್ಷದಲ್ಲಿ ಗುಂಪುಗಾರಿಕೆ ಶುರುಹಚ್ಚಿದರು. ಇನ್ನೇನು ಪಕ್ಷ ಜಿಲ್ಲೆಯಿಂದ ಕಣ್ಮರೆಯಾಗುತ್ತಿದೆ ಅನ್ನುವಷ್ಟರಲ್ಲಿ ಕಾಂಗ್ರೆಸ್ಸಿಗೆ ಮರುಜನ್ಮ ನೀಡಿದ್ದು ಸಲಿಂ ಅಹ್ಮದ್. ಮಾಜಿ ಮಂತ್ರಿಗಳಾದ ಬಸವರಾಜ ಶಿವಣ್ಣನವರ, ಮನೋಹರ ತಹಶೀಲ್ದಾರ, ಶಿಗ್ಗಾವಿಯ ಅಜ್ಜಂಪೀರ ಖಾದ್ರಿಗಳು ಸಲಿಂ ಜತೆ ಕೈಜೋಡಿಸಿ ಉಸಿರು ಕಳೆದುಕೊಂಡಿದ್ದ ಪಕ್ಷ ಹಾಗೂ ಕಾರ್ಯಕರ್ತರಿಗೆ ಜೀವ ತುಂಬಿದರು. ವಿಧಾನ ಸಭಾ ಚುನಾವಣೆಯಲ್ಲಿ ಹಿರೇಕೆರೂರಿನ ಬಿ.ಸಿ. ಪಾಟೀಲರನ್ನು ಹೊರತುಪಡಿಸಿ ಉಳಿದವರೆಲ್ಲ ಕ್ಷೇತ್ರಗಳಲ್ಲಿ ಸೋಲಲು ಕಾರಣಕರ್ತರಾಗಿದ್ದ ಐನಾತಿ ಸನದಿ, ಕೋಳಿವಾಡರು ಪಾರ್ಲಿಮೆಂಟ್ ಚುನಾವಣೆಗೂ ತಮ್ಮ ಹರಾಮಿ ಬುದ್ಧಿ ಪ್ರದರ್ಶನಕ್ಕಿಟ್ಟಿದ್ದಾರೆ. ಸಲಿಂಗೆ ತೊಡರಾಗಲು ಬ್ಯಾಡಗಿಯ ಎಸ್.ಆರ್. ಪಾಟೀಲನೆಂಬ ಮೆಣಸಿನಕಾಯಿ ವ್ಯಾಪಾರಿಯನ್ನು ಟಿಕೆಟ್ ರೇಸಿಗಿಳಿಸಿ ಟಿಕೆಟ್ ನಮಗೂ ಬೇಕು ಎಂದು ಹೈಕಮಾಂಡ್ ಮುಂದೆ ಕ್ಯಾಕರಿಸಿ ಉಗಿಸಿಕೊಂಡು ಬಂದಿದ್ದಾರೆ. ಹುಟ್ಟಾ ಕಾಂಗ್ರೆಸಿಗರ ರೀತಿ ಮಾತಾಡಿದ್ದ ಎಸ್.ಆರ್. ಪಾಟೀಲ ಟಿಕೆಟ್ ಸಿಗದಿದ್ದಾಕ್ಷಣ ಜೆಡಿಎಸ್‌ಗೆ ಹೋಗಿ ಒಂದು ಚಾನ್ಸ್ ಕೊಡಿ ಎನ್ನುವ ಮೂಲಕ ತನ್ನ ಪಾತರಗಿತ್ತಿ ಬುದ್ಧಿ ತೋರಿಸಿಯೇಬಿಟ್ಟಿದ್ದಾನೆ.

ಇವನಿಗೆ ಇಂದಿಗೂ ಬೆಂಗಾವಲಾಗಿರುವುದು ಅದೇ ಸನದಿ. ಎಸ್.ಆರ್.ಪಾಟೀಲನಾಗಲೀ ಸನದಿಯಾಗಲಿ ನಿಜವಾಗಲೂ ತಾಕತ್ತಿದ್ದರೆ ಚುನಾವಣೆಗೆ ನಿಂತು ಸೆದ್ದು ತೊಡೆಯಲಿ ಎಂದು ಕಾಂಗ್ರೆಸಿಗರು ಧೈರ್ಯದಿಂದ ಹೇಳುತ್ತಿದ್ದಾರೆ. ಈ ಪೀಡೆಗಳನ್ನು ಬಿಟ್ಟು ಕಾಂಗ್ರೆಸ್ ಈ ಚುನಾವಣೆಯನ್ನ ಗೆಲ್ಲಬಹುದಾಗಿದೆ.

ಸಲಿಂ ಅಹ್ಮದ್ ಪರವಾಗಿ ಗದಗ ಭಾಗದಲ್ಲಿ ಪ್ರಭಾವಿ ಎಚ್.ಕೆ. ಪಾಟೀಲ, ಡಿ.ಆರ್. ಪಾಟೀಲ, ಶಿರಹಟ್ಟಿಯ ಗದ್ದುಗೇವರ ಮಠ ರೋಣದ ಪಾಟೀಲ ಬ್ರದರ್ಸ್‌ಗಳು ಟೊಂಕಕಟ್ಟಿ ನಿಂತಿದ್ದರೆ, ಹಾವೇರಿಯಲ್ಲಿ ಶಿವಣ್ಣನವರ್, ಮನೋಹರ್ ತಹಶೀಲ್ದಾರ, ರುದ್ರಪ್ಪ ಲಮಾಣಿಯಂತವರು ಈ ಚುನಾವಣೆಯನ್ನು ಪ್ರತಿಷ್ಠೆಯನ್ನಾಗಿ ತೆಗೆದುಕೊಂಡಿದ್ದಾರೆ. ಹೀಗಾಗಿ ಯಂಗ್ ಟೈಗರ್ ಸಲಿಂ ಅಹ್ಮದ್ ಯುವಕರೊಂದಿಗೆ ಬೆರೆತು ಗೆಲುವಿಗೆ ಸಮೀಪಿಸುತ್ತಿರುವುದು ಯಾವ ಆ್ಯಂಗಲ್‌ನಿಂದ ನೋಡಿದರೂ ಗೊತ್ತಾಗುತ್ತದೆ.

ಜಾತಿವಾರು ಲೆಕ್ಕಾಚಾರಕ್ಕೆ ಹೋದರೆ ಲಿಂಗಾಯತರೇ ಪ್ರಬಲರು ಅದರಲ್ಲೂ ಪಂಚಮಸಾಲಿ ಸಮುದಾಯ. ಕುರುಬರು, ಅಲ್ಪಸಂಖ್ಯಾತರು ಎರಡನೇ ಸ್ಥಾನದಲ್ಲಿದ್ದಾರೆ. ಹಿಂದುಳಿದ ವರ್ಗ ಸೇರಿದಂತೆ ಇತರರು ನಿರ್ಣಾಯಕರು. ಪಂಚಮಸಾಲಿಗಳಿಂದ ಮತ ಪಡೆದು ಜಿಲ್ಲೆಯಲ್ಲಿ ಅಧಿಕಾರಕ್ಕೇರಿದ ಬಿಜೆಪಿಯಿಂದ ಈ ಬಾರಿ ಪಂಚಮಸಾಲಿಗಳಿಗೆ ಟಿಕೆಟ್ ದೊರೆಯುತ್ತೆ ಎಂಬ ಆಶಾಭಾವನೆ ಹೊಂದಿದ್ದರು. ಜಿಲ್ಲಾಧ್ಯಕ್ಷ ಸೋಮಣ್ಣ ಬೇವಿನಮರದಗೆ ಆಸೆ ಹಚ್ಚಿ ಕೊನೆಗೆ ಕೈಕೊಟ್ಟರು. ಇದು ಈಗ ಬಿಜೆಪಿಗೆ ತಿರುಗುಬಾಣವಾಗಲಿದೆ.

ಕಡಿಮೆ ಜನಸಮುದಾಯದ ಬಣಜಿಗನಾದ ಉದಾಸಿ ಮತ್ತವನ ಮಗನಿಗೆ ಟಿಕೆಟ್ ಕೊಟ್ಟಿರುವುದು ಇದೀಗ ಕಾಂಗ್ರೆಸ್‌ಗೆ ವರವಾಗಿದೆ. ಜತೆಗೆ ಸಿದ್ದರಾಮಯ್ಯನವರ ಕುರುಬ ಸಮಾಜ ಕಾಗಿನೆಲೆ ಮೂಲಕ ಸಲಿಂ ಪರ ನಿಲ್ಲಲು ನಿರ್ಣಯಿಸಿದ ವದಂತಿಗಳು ದಟ್ಟವಾಗಿದೆ. ಬಿಜೆಪಿಯಲ್ಲಿನ ಒಳಜಗಳ ಅಸಮಾಧಾನ ಬೀದಿಗೆ ಬಿದ್ದದ್ದೂ ದಿನದಿನಕ್ಕೆ ಹಳಬರು ಪಕ್ಷದಿಂದ ಅದರಲ್ಲೂ ಶಿವಕುಮಾರ ಉದಾಸಿಯ ಉದ್ಧಟತನದಿಂದ ಬೇಸತ್ತು ಹೊರನಡೆಯುತ್ತಿದ್ದಾರೆ. ಸ್ವತಃ ಜಿಲ್ಲಾಧ್ಯಕ್ಷ ಬೇವಿನಮರದ, ಹಿರಿಯ ಮುಖಂಡರಾದ ಜಗದೀಶ ಬಸೆಗಣ್ಣಿ ಕೆ. ಶಿವಲಿಂಗಪ್ಪ ಎಚ್.ಎಸ್.ಪಾಟೀಲ, ಪ್ರಹ್ಲಾದ ಆಳಂದಿಕರ, ಹನುಮಂತನಾಯ್ಕ ಬದಾಮಿ, ಪಾಲಾಕ್ಷಗೌಡ ಪಾಟೀಲರಂತಹ ಹಳಬರು ನಿಷ್ಕಾಳಜಿಯಿಂದ ತಟಸ್ಥ ಉಳಿದು ಒಳಗಿಂದೊಳಗೆ ಕಾಂಗ್ರೆಸಿನತ್ತ ಕೈ ತೋರಿಸುತ್ತಿದ್ದಾರೆ. ಇದಷ್ಟೇ ಅಲ್ಲದೆ ತನ್ನ ಸ್ವಂತ ಊರಾದ ಹಾನಗಲ್‌ನಲ್ಲೇ ಉದಾಸಿ ವಿರೋಧಿ ಅಲೆ ಎದುರಿಸುತ್ತಿದ್ದಾನೆ.

ಅಧಿಕಾರಕ್ಕೆ ಬಂದಿದ್ದೇ ಕೊಳ್ಳೆಹೊಡೆಯಲು ಎಂದು ಪ್ರಮಾಣ ಮಾಡಿದಂತಿರುವ ಉದಾಸಿ ಮತ್ತು ಅವನ ಪಟಾಲಂ ಶಾಸಕರು ಅಧಿಕಾರಕ್ಕೇರಿ ಕೆಲವೇ ದಿನಗಳಲ್ಲಿ ಗೋಲಿಬಾರ್ ಮಾಡಿಸಿ ರೈತರ ಜೀವಕ್ಕೂ ಕೈಹಚ್ಚಿ ಕೊಲೆಗಡುಕರು ಎಂದು ಜನರಿಂದ ಬಿರುದು ಪಡೆದರು. "ಕರ್ಮಾನುಸಾರ ಫಲ ಸಿಗುತ್ತದೆ" ಎಂಬ ಕೇಸರಿಗಳ ಮಾತಿನಂತೆ ಕಳೆದ ಒಂದು ವರ್ಷ ಜಿಲ್ಲೆಯಲ್ಲಿ ಇವರು ಆಡಿದ ರಕ್ತದೋಕುಳಿಯ ಫಲವನ್ನು ಜನತಾ ಜನಾರ್ಧನರು ಈ ಎಲೆಕ್ಷನ್‌ನಲ್ಲಿ ತೋರಿಸಲಿದ್ದಾರೆಯೇ ಎಂಬ ಪ್ರಶ್ನೆಗೆ ಇಲ್ಲಿನ ಜನ "ಅದು ಸುಳ್ಳಲ್ಲಾ, ಕರೇ..ಕರೇ.." ಎಂದು ಉತ್ತರಿಸುತ್ತಿದ್ದಾರೆ.


●ವಿನಯ್ ಹುರುಳಿಕುಪ್ಪಿ

...ಎಸ್‌ನಿಂದ ಯಾರು?

...ಿ ಜೆಡಿಎಸ್ ಪಕ್ಷದ ಪಾರ್ಲಿಮೆಂಟ್ ಕಸರತ್ತು ಅರ್ಥವಾಗುತ್ತಿಲ್ಲ, ನಿಜವಾಗಿ ಹೇಳಬೇಕೆಂದರೆ ಕುರಿತು ಯಾರೂ ತಲೆಕೆಡಿಸಿಕೊಳ್ಳುತ್ತಿಲ್ಲ. ...ಂತ್ರಿ ಎಸ್.ಎಸ್. ಪಾಟೀಲನ ಮಗ ...ಗೌಡ ಟಿಕೆಟ್ ಆಕಾಂಕ್ಷಿ, ಅವನೇ ಅಭ್ಯರ್ಥಿ ...ದ್ದಿದ್ದೂ ದಟ್ಟವಾಗಿತ್ತು. ರೈತರ ...ಾಗಿದ್ದ ಕೆ.ಸಿ.ಸಿ. ಬ್ಯಾಂಕನ್ನು ತನ್ನ ಅಧಿಕಾರ ...ಪೂರ್ಣ ದಿವಾಳಿಗೆ ಹಚ್ಚಿ ಕುಖ್ಯಾತನಾಗಿದ್ದ ...ದೇವೇಗೌಡ ಅವಾಚ್ಯ ... ಮೇಲೆ ... ಕಾಂಗ್ರೆಸ್‌ನಿಂದ ...ಸಿಕೊಂಡಿರುವ ಬ್ಯಾಡಗಿಯ ಎಸ್.ಆರ್. ...ವು ಜೆಡಿಎಸ್ ಸೇರುತ್ತೇನೆ, ನನಗೇ ಟಿಕೆಟ್ ... ಬಿಟ್ಟಿದ್ದಾನೆ. ಆದರೆ ದೇವೇಗೌಡರು ... ಕೈಕೊಟ್ಟು ಹೊಡೆದು ... ಆದ್ದಾಗ ... ಹೇಳಿದರು.

ಸೈಡ್ ಹಚ್ಚಿದ ಓಲೇಕಾರ

ಉದಾಸಿ ಜೀವಮಾನದಲ್ಲಿ ಮಾಡಿದ ಎಲ್ಲಾ ದಂಧೆಗಳಿಗೆ ಸಾಥ್ ನೀಡಿ ಈಗ ಶಾಸಕನಾಗಿರುವ ಶಿವರಾಜ ಸಜ್ಜನ್, ಶಿವಕುಮಾರನ ಚುನಾವಣೆಗೂ ಬಾಸ್ ಆಗಿದ್ದಾನಂತೆ! ಹೀಗಾಗಿ ಹಾವೇರಿ ಶಾಸಕ ನೆಹರು ಓಲೇಕಾರ ಒತಿಕ್ಯಾತನ ಹಾಗೆ ಸೆಟಕೊಂಡು ಮನೆ ಸೇರಿದ್ದಾನೆ. "ಎಲ್ಲಾ ಬೆಂಕಿ ಹಚ್ಚೋ ಕೆಲಸಕ್ಕೆ ನಾ ಬೇಕು... ಅಧಿಕಾರಿಗಳ ಮೇಲೆ ಹರಿಹಾಯ್ದು ಬಡಿದಾಡಲು ನಾ ಬೇಕು... ಆದರೆ ಚುನಾವಣೆಯಲ್ಲಿ ಖದರ್ ಖಾವಿ ಹಾಕಿಕೊಂಡು ದೊಡ್ಡ ಲೀಡರ್ ಹಾಗೆ ಪೋಜ್ ಮಾತ್ರ ಸಜ್ಜನ ಕೊಡಬೇಕಾ..! ಹಳಬರೆಲ್ಲಾ ಹೊರಗೆ ಹೋಗಿದ್ದಾರೆ. ನಾನೂ ಹೊರಗೆ ಹೋಗುತ್ತೇನೆ. ... ಇಟ್ಟುಕೊಂಡು ನೀವೇ ... ಸೋಲೋದು ಗ್ಯಾರಂಟಿ ... ಜೊತೆ ... ಬೇಕು" ಎನ್ನುತ್ತಿರುತ್ತಾನೆ ... ಕಾರ.




ಮಂಡ್ಯ: ಪೋರ್ಕಿ ಪೊಲೀಸರಿಗೆ ದುಬೈ ಟೂರ್!

'ಮಂಡ್ಯದ ಪೊಲೀಸರು ಪೋಲಿಗಳಾಗಿದ್ದಾರೆ!' ಇದು ಮಂಡ್ಯದ ಮಾನವಂತ ಜನ ನಾಚಿಕೆಯಿಂದ ಹೇಳುತ್ತಿರುವ ಮಾತು. ಮೊನ್ನೆ ಮೊನ್ನೆ ತನಕ ನಗರಸಭೆಯ ಸದಸ್ಯರಿಂದ ಹಿಡಿದು ಎಮ್ಮೆಲ್ಲೆ ಎಂಪಿಗಳತನಕ ಎಲ್ಲಾ ರೀತಿಯ ಪುಂಡ ಪೋಕರಿ ರಾಜಕಾರಣಿಗಳನ್ನು ಕಟ್ಟಿಕೊಂಡು ಮುಂಬೈ, ದುಬೈ ಅಂತೆಲ್ಲಾ ಸುತ್ತಾಡಿಸುತ್ತಾ ಅವರಿಗೆ ಬೇಕಿದ್ದೆಲ್ಲವನ್ನೂ ಸಪ್ಲೈ ಮಾಡಿ ತನ್ನ ಕೆಲಸ ಸಾಧಿಸಿಕೊಳ್ಳುತ್ತಿದ್ದ (ಕು)ಖ್ಯಾತ ಉದ್ಯಮಿ ಜಫ್ರುಲ್ಲಾ ಅಲಿಯಾಸ್ ಜಫ್ರುಲ್ಲಾ ಖಾನ್ ಮೊನ್ನೆ ಐದು ಜನ ಪೊಲೀಸರಿಗೂ ದುಬೈ ಟೂರ್ ಮಾಡಿಸಿದ್ದಾನೆ.

ಜಫ್ರುಲ್ಲಾನ ದುಡ್ಡಿನಲ್ಲಿ ದುಬೈ ಯಾತ್ರೆ ಕೈಗೊಂಡ ಈ ಖಾಕಿ ಖದೀಮರು ಯಾರು ಗೊತ್ತೆ? ಪಶ್ಚಿಮ ಠಾಣೆಯ ನಟರಾಜ್, ಕ್ರೈಂ ಬ್ರಾಂಚಿನ ಲಿಂಗರಾಜ, ರೂರಲ್ ಸ್ಟೇಶನ್‌ನ ದೇವರಾಜು, ಎಸ್ಪಿ ಆಫೀಸಿನ ಕ್ಯಾಮರಾಮೆನ್ ಕೇಶವ, ಡಿವೈಎಸ್ಪಿ ಆಫೀಸಿನ ಶಂಕರ್. ಅಸಲಿಗೆ ಇವರೆಲ್ಲಾ ಮಂಡ್ಯದ ನಟೋರಿಯಸ್ ರೌಡಿ ಜಡೇಜಾ ರವಿ ಹತ್ಯೆಯಾಗುವತನಕ ಅವನ ಮನೆಯ ಹಿಂದೆ, ಮುಂದೆ ಸುತ್ತಾಡಿಕೊಂಡಿದ್ದವರು. ರೌಡಿ ಪಡೆಗಳಿಂದ ಮೊಬೈಲು, ಪಾಕೆಟ್ ಮನಿ ಈಸ್ಕೊಂಡು ಅವರ ಸಾಲುಸಾಲು ಭೂಗತ ಕೆಲಸಗಳನ್ನೆಲ್ಲಾ ಕಾನೂನಿನ ಕಣ್ಣಿನಿಂದ ಮುಚ್ಚಿಟ್ಟವರು.

ಯಾವಾಗ ಜಡೇಜಾ ರವಿಯನ್ನೂ ಒಳಗೊಂಡಂತೆ ಚೀರ್ನಳ್ಳಿ ಶಂಕ್ರ, ಶಿವರಾಮರಂಥ ಪಾತಕಿಗಳೆಲ್ಲರೂ ಒಬ್ಬರಾದ ಮೇಲೊಬ್ಬರಂತೆ ಸಾಲುಸಾಲಾಗಿ ನೆಲಕ್ಕುರುಳಿದರೋ ಈ ಪೊಲೀಸಪ್ಪಗಳಿಗೆ ಸಿಗುತ್ತಿದ್ದ ಪಾಕೆಟ್ ಮನಿಯೂ ನಿಂತು ಹೋಯಿತು; ಹಫ್ತಾ ವಸೂಲಿಯಿಂದ ಬರುತ್ತಿದ್ದ ಆಮದನಿಯೂ ಸೊರಗಿಬಿಟ್ಟಿತು. ಆದ್ದರಿಂದ ಅವರೆಲ್ಲ ಈಗ ಜಫ್ರುಲ್ಲಾ ಖಾನ್ ಅಂಗಳಕ್ಕೆ ಜಿಗಿದು ಅಲ್ಲಿಂದ ಆಶೀರ್ವಾದ ಪಡೆದು ದುಬೈ ಟೂರ್‌ಗಾಗಿ ಹಾರಿದ್ದಾರೆ.

ತಾನೋರ್ವ ಮರ್ಯಾದಸ್ಥ ಉದ್ಯಮಿ, ಕನ್ನಡದ ಸೇವಕ, ದೇಶಪ್ರೇಮಿ, ಸಮಾಜೋದ್ಧಾರಕ ಎಂದೆಲ್ಲ ಹೇಳಿಕೊಳ್ಳುವ ಜಫ್ರುಲ್ಲಾ ಈ ಪೋರ್ಕಿ ಪೊಲೀಸಪ್ಪಗಳನ್ನು







ದುಬೈಗೆ ಕರೆಸಿಕೊಂಡಿದ್ದು ಯಾಕೆ ಎಂದು ಮಂಡ್ಯದ ಹೈದರು ಈಗ ಪ್ರಶ್ನೆ ಕೇಳಿಕೊಳ್ಳುತ್ತಿದ್ದಾರೆ.

ಪೊಲೀಸರಲ್ಲ, ಪೋರ್ಕಿಗಳು!

ಅಂದಹಾಗೆ ಇವತ್ತು ಮಂಡ್ಯದ ಹಲವು ಪೊಲೀಸಪ್ಪಗಳು ಖಾಕಿಯಲ್ಲಿರುವ ಮರಿ ರೌಡಿಗಳಂತಾಗಿದ್ದಾರೆ. ಈ ಕಾರಣಕ್ಕೇ ಇರಬೇಕು ಮಂಡ್ಯದ ಜನ ಇವರನ್ನು 'ಪೊಲೀಸ್ ರೌಡಿಗಳು' ಎಂದೇ ಕರೆಯುತ್ತಾರೆ.

ಒಂದು ಹಂತದಲ್ಲಿ ಮಂಡ್ಯದ ಎಲ್ಲಾ ರೀತಿಯ ಅಕ್ರಮ ದಂಧೆಗಳನ್ನು, ಹಫ್ತಾ ವಸೂಲಿಗಳನ್ನು ಜಡೇಜಾ ರವಿ ಮತ್ತು ಚೀರ್ನಳ್ಳಿ ಶಂಕ್ರ ಕಂಟ್ರೋಲ್ ಮಾಡುತ್ತಿದ್ದರು. ಜಡೇಜಾ ರವಿ ಮತ್ತು ಚೀರ್ನಳ್ಳಿ ಶಂಕ್ರ ಶಿವನಪಾದ ಸೇರಿದ ಮೇಲೆ, ಅವರನ್ನು ಫಿನಿಶ್ ಮಾಡಿದ ಅಶೋಕ್ ಪೈ ಮತ್ತು ಚೇತನ್ ಗ್ಯಾಂಗ್ ಈ ದಂಧೆಗಳನ್ನು ನಿಯಂತ್ರಿಸುತ್ತದೆಂದು ಭಾವಿಸಲಾಗಿತ್ತು, ಆದರೆ ಅವರು ಜೈಲುಪಾಲಾದರು. ಇನ್ನು ಅಳಿದುಳಿದ ಜಡೇಜಾ ರವಿಯ ಶಿಷ್ಯರೂ ಕೂಡ ಮಂಡ್ಯ ಬಿಟ್ಟು ಓಡಿಹೋಗಿದ್ದಾರೆ. ಹಾಗಾಗಿ ಸದ್ಯಕ್ಕೆ ಮಂಡ್ಯದಲ್ಲಿ ಇಂಥ ಅಕ್ರಮ ದಂಧೆಗಳನ್ನು ನಿಯಂತ್ರಿಸುವ ಅಂಡರ್‌ವರ್ಲ್ಡ್ ಡಾನ್‌ಗಳಿಲ್ಲ.

ಹೀಗಾಗಿ ರೌಡಿಗಳಿಂದ ಪೊಲೀಸರಿಗೆ ಸಿಗುತ್ತಿದ್ದ ಆಮದನಿಯೂ ನಿಂತುಹೋಗಿದ್ದರಿಂದ ಈಗ ಖುದ್ದಾಗಿ ಪೊಲೀಸರೇ ಹಫ್ತಾ ವಸೂಲಿಗಿಳಿದಿದ್ದಾರೆ. ನಕಲಿ ಪೆಟ್ರೋಲ್, ಮಟ್ಕಾ, ಮರಳು ಲಾರಿ, ಜೂಜು ಅಡ್ಡೆ, ವೇಶ್ಯಾವಾಟಿಕೆ ಅಡ್ಡೆ - ಇವರ ವಸೂಲಿಗೆ ಯಾವುದೂ ಹೊರತಾಗಿಲ್ಲ, ಬೇಕಿದ್ದರೆ ಅಂಡರ್‌ವರ್ಲ್ಡ್ ಡಾನ್‌ಗಳಿಗಿಂತಲೂ ಇವರು ಒಂದು ಹೆಜ್ಜೆ ಮುಂದೆ ಎಂದು ಹೇಳಿದರೂ ತಪ್ಪಾಗಲಾರದು.

ಮುಂದೆಂದಾದರೂ ಮಂಡ್ಯದಲ್ಲಿ ಈ ಅಕ್ರಮ ದಂಧೆಗಳನ್ನೆಲ್ಲಾ ಕಂಟ್ರೋಲ್ ಮಾಡಬಲ್ಲ ರೌಡಿಯೇನಾದರೂ ಹುಟ್ಟಿಕೊಂಡರೆ ಪೊಲೀಸರೇ ಅವನನ್ನು ಮುಗಿಸಿ ತಮ್ಮ ವಸೂಲಿ ಸಾಮ್ರಾಜ್ಯವನ್ನು ರಕ್ಷಿಸಿಕೊಳ್ಳುತ್ತಾರಷ್ಟೆ.

ಇದು ಎಸ್ಪಿ ಕೌಶಲೇಂದ್ರ ಕುಮಾರ್‌ಗೆ ಗೊತ್ತಿಲ್ಲವೆಂದೇನಲ್ಲ, ಅವರು ಸೋಮಾರಿತನ ಬಿಟ್ಟು ಮೇಲೆದ್ದರೆ ಇಲಾಖೆ ಒಂದಿಷ್ಟು ಸುಧಾರಿಸಬಹುದೇನೊ?

● ಲಕ್ಷ್ಮಣ್ ಚೀರನಹಳ್ಳಿ

ಚಿತ್ರದುರ್ಗ: ಕಾಂಗ್ರೆಸ್ ಅಭ್ಯರ್ಥಿ ಜೆ.ಜೆ.ಹಟ್ಟಿ ತಿಪ್ಪೇಸ್ವಾಮಿ ಎಂಬ ಶಾಕ್



ಚಿತ್ರದುರ್ಗ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಅಭ್ಯರ್ಥಿಯಾಗಿ ಯುವ ಕಾಂಗ್ರೆ ಅಧ್ಯಕ್ಷ ಡಾ. ಜೆ.ಜೆ. ಹಟ್ಟಿ ತಿಪ್ಪೇಸ್ವಾಮಿಯನ್ನು ಕಣಕ್ಕಿಳಿಸಿರುವುದು ಜಿಲ್ಲೆಯ ರಾಜಕೀಯ ವಲಯದಲ್ಲಿ ಸಖೇದಾಶ್ಚರ್ಯವನ್ನುಂಟುಮಾಡಿದೆ. ಶತಮಾನದ ಇತಿಹಾಸವುಳ್ಳ ಕಾಂಗ್ರೆಸ್ ಪಕ್ಷಕ್ಕೆ ಒಬ್ಬ ಸಮರ್ಥ, ಸಜ್ಜನ ಅಭ್ಯರ್ಥಿ ಸಿಗಲಿಲ್ಲವೆ ಎಂದು ಜನ ಹಾದಿಬೀದಿಯಲ್ಲಿ ಮಾತನಾಡಿಕೊಳ್ಳುವಷ್ಟು ಆಕ್ಷೇಪಣೆಗಳು ವ್ಯಕ್ತವಾಗುತ್ತಿವೆ.

ಜೆ.ಜೆ. ಹಟ್ಟಿ ತಿಪ್ಪೇಸ್ವಾಮಿಗೆ ಟಿಕೆಟ್ ಅನೌನ್ಸ್ ಆಗುತ್ತಿದ್ದಂತೆಯೇ ಕಾಂಗ್ರೆಸ್ ಪಕ್ಷದೊಂದಿಗೆ ದಶಕಗಳ ಕಾಲ ಗುರುತಿಸಿಕೊಂಡು ರಾಜಕೀಯವಾಗಿ ಸಕ್ರಿಯವಾಗಿದ್ದವರೆಲ್ಲ ಮುಖ ಮುಚ್ಚಿಕೊಂಡು ತಿರುಗುವ ವಾತಾವರಣ ನಿರ್ಮಾಣವಾಗಿದೆ. ಮಾನವಂತ ಹಿರಿಯ ಕಾಂಗ್ರೆಸ್ಸಿಗರೆಲ್ಲಾ ತಲೆಮರೆಸಿಕೊಳ್ಳುವ ಬಗ್ಗೆ ಆಲೋಚಿಸುತ್ತಿದ್ದಾರೆ. ಮತ್ತೊಂದು ಕಡೆ "ಏನೇ ಆಗಲಿ, ಜೆ.ಜೆ.ಹಟ್ಟಿ ಎಂ.ಪಿ. ಟಿಕೆಟ್ ತಗೊಂಡನಲ್ರೀ.... ಗ್ರೇಟ್!" ಎಂಬಂತಹ ಮೆಚ್ಚುಗೆಗಳೂ ವ್ಯಕ್ತವಾಗುತ್ತಿವೆ. ಅಸಲಿಗೆ ಈ ಜೆ.ಜೆ. ಹಟ್ಟಿ ತಿಪ್ಪೇಸ್ವಾಮಿ ಅದು ಹೇಗೆ ಟಿಕೆಟ್ ಗಿಟ್ಟಿಸಿಕೊಂಡ ಎಂಬುದೇ ಬಹು ಚರ್ಚೆಯ ವಿಷಯವಾಗಿದೆ.


ಚಿತ್ರದುರ್ಗ ನಗರದ ಜೆ.ಜೆ. ಹಟ್ಟಿಯವನಾದ ಈತ ಸಮರ್ಥ ಸಂಘಟಕನೂ ಅಲ್ಲ, ಯುವ ಜನಾಂಗಕ್ಕೆ ಮಾದರಿಯಾಗಬಲ್ಲಂತವನೂ ಅಲ್ಲ. ಇದೆಲ್ಲಕ್ಕಿಂತ ಮಿಗಿಲಾಗಿ ಸಾರ್ವಜನಿಕರನ್ನು ಪ್ರತಿನಿಧಿಸಬಹುದಾದಂತಹ ಪ್ರಬುದ್ಧತೆಯಾಗಲಿ, ಬದ್ಧತೆಯಾಗಲಿ ಈತನಿಗಿಲ್ಲ. ಅಷ್ಟು ಬಿಡಿ [illegible] ಈತನನ್ನು ಜಿಲ್ಲಾ ಕಾಂಗ್ರೆಸ್‌ನ ಮುಖಮಣಿಗಳು [illegible] ಅಗತ್ಯಗಳಿಗೆ ತಕ್ಕಂತೆ ಬಳಸಿಕೊಂಡೇ 'ನಾಯಕ'ನನ್ನಾಗಿ ಬೆಳೆಸಿದ್ದಾರೆ. ಒಂದು ಕಾಲದಲ್ಲಿ ಈತನಿಗೆ ಮಣೆಹಾಕಿ ಬೆಳೆಸಿದ ಮಾಜಿ ಶಾಸಕ ಜಿ.ಹೆಚ್. ತಿಪ್ಪಾರೆಡ್ಡಿಯವರೇ ಈಗ ಜೆ.ಜೆ. ಹಟ್ಟಿ ತಿಪ್ಪೇಸ್ವಾಮಿ ಎಂದರೆ ಮಾರುದ್ದ ಸರಿಯುತ್ತಾರೆ.

ಅಪರಾಧ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಈತ ಚಿತ್ರದುರ್ಗ ಸರಸ್ವತಿ ಲಾ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ವಿದ್ಯಾರ್ಥಿ ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡ. ಪುಂಡು ಸ್ವಭಾವದ ಹುಡುಗರನ್ನು ಗುಂಪು ಕಟ್ಟಿಕೊಂಡು ಅಂಡಲೆಯುವುದನ್ನೇ ಕಾಯಕ ಮಾಡಿಕೊಂಡ. ಇದೇ ಕಾರಣಕ್ಕೆ ಸಾಕಷ್ಟು ಕುಖ್ಯಾತಿಯನ್ನು ಪಡೆದು, ಅದೇ ಕುಖ್ಯಾತಿಯನ್ನೇ ಎನ್‌ಕ್ಯಾಷ್ ಮಾಡಿಕೊಂಡ ಈತ ತಾನೊಬ್ಬ ಲೀಡರ್ ಎಂಬಂತೆ ಪೋಜು ಕೊಡಲಾರಂಭಿಸಿದ. ಹಿರಿಯ ಕಾಂಗ್ರೆಸ್ ನಾಯಕರುಗಳನ್ನೇ ಏಕವಚನದಲ್ಲಿ ಮಾತನಾಡಿಸಿ ಶೇಮು ತೆಗೆಯುವಷ್ಟು ಉದ್ಧಟತನ ಪ್ರದರ್ಶಿಸುತ್ತಿದ್ದ. ಅದೆಷ್ಟೋ ಹಿರಿಯ ಕಾಂಗ್ರೆಸ್ ಮುಖಂಡರು ಅನ್ನುವ ಹಾಗಿಲ್ಲ, ಅನುಭವಿಸುವ ಹಾಗಿಲ್ಲ ಎಂಬಂತೆ ಈತನನ್ನು ಸಹಿಸಿಕೊಳ್ಳಲೂ ಆಗದೇ ದೂರವಿಡಲೂ ಆಗದೇ ಸಂದಿಗ್ಧದಲ್ಲಿ ಸಿಲುಕುತ್ತಿದ್ದರು. ಇಂತಹ ದಾಂಧಲೆ ಪ್ರವೃತ್ತಿಯ ಡಾ. ಜೆ.ಜೆ.ಹಟ್ಟಿ ತಿಪ್ಪೇಸ್ವಾಮಿ ಅದು ಹೇಗೆ ಕಾನೂನು ಪದವಿ ಮುಗಿಸಿದ? ಜೊತೆಗೊಂದು ಡಾಕ್ಟರೇಟ್ ಪಡೆದ? ಎಂಬುದೇ ಸೋಜಿಗದ ಸಂಗತಿಯಾಗಿತ್ತು.

ಈತನ ಪ್ರಕಾರ ಕಾನೂನು ಪದವಿ ಅಭ್ಯಸಿಸುವ ಸಂದರ್ಭದಲ್ಲೇ ಪಿ.ಹೆಚ್‌ಡಿ. ಪದವಿಯನ್ನು ಅಧ್ಯಯನ ಮಾಡುತ್ತಿದ್ದನಂತೆ. ಆದರೆ ಕಾನೂನಿನ ಪ್ರಕಾರ ಇದು ಸಾಧ್ಯವಿಲ್ಲ. ಈತನ ಡಾಕ್ಟರೇಟ್ ಪದವಿಯ ಸಾಚಾತನದ ಬಗ್ಗೆ ವ್ಯಾಪಕ ಟೀಕೆ ಟಿಪ್ಪಣಿಗಳು ಕೇಳಿಬರುತ್ತಿದ್ದವು. ಮುಖ್ಯಮಂತ್ರಿ ಯಡಿಯೂರಪ್ಪ ಗೌರವ ಡಾಕ್ಟರೇಟ್ ಪದವಿ ಪಡೆದ ನಂತರವೇ ಈತನ ಡಾಕ್ಟರೇಟ್ ಪದವಿ ಕುರಿತ ಕುತೂಹಲಗಳಿಗೆ, ಸಂಶಯಗಳಿಗೆ ತೆರೆಬಿತ್ತು. ಪುಸ್ತಕಗಳೆಂದರೆ ಅಲರ್ಜಿ ಪಡುವ ಈತ ಪದವಿ, ಸ್ನಾತಕೋತ್ತರ ಪದವಿ, ಕಾನೂನು ಪದವಿ, ಡಾಕ್ಟರೇಟ್ ಪದವಿಗಳನ್ನೆಲ್ಲಾ ಗಳಿಸಿದ್ದು ಪವಾಡವೇ ಸರಿ.

ನಾಲ್ಕೈದು ವರ್ಷದ ಕೆಳಗೆ ವಿದ್ಯಾರ್ಥಿ ಕಾಂಗ್ರೆಸ್‌ನಿಂದ ಯುವ ಕಾಂಗ್ರೆ ಅಧ್ಯಕ್ಷನಾಗಿ ಪ್ರಮೋಷನ್ ಪಡೆದುಕೊಂಡ. ಸ್ನಾತಕೋತ್ತರ ಕೇಂದ್ರ ಸ್ಥಾಪನೆ, ಜಿಲ್ಲಾಧಿಕಾರಿ ಅಮರ್ ನಾರಾಯಣರ ವರ್ಗಾವಣೆಯಂತಹ ಪ್ರತಿಭಟನೆಗಳಲ್ಲಿ ಯುವ ಕಾಂಗ್ರೆಸ್‌ನ ಸಕ್ರಿಯ ಹೋರಾಟ ನಡೆಸಿತ್ತಾದರೂ ಅದರಲ್ಲಿ ವಕೀಲ ಶಿವುಯಾದವ್ ಪಾತ್ರವೇ ಪ್ರಧಾನವಾಗಿತ್ತು. ಯುವ ಕಾಂಗ್ರೆಸ್ ಜೀವಂತವಾಗಿದ್ದುದೇ ಈ ಶಿವುಯಾದವ್ ಕ್ರಿಯಾಶೀಲತೆಯಿಂದಾಗಿ. ತಿಪ್ಪೇಸ್ವಾಮಿಯದೇನಿದ್ದರೂ ಉತ್ಸವಮೂರ್ತಿ ಪಾತ್ರವಷ್ಟೇ. ಈತ ಕಾಂಗ್ರೆಸ್ ಪಕ್ಷದ ಬ್ಯಾನರ್‌ನ್ನು ತನ್ನ ದಂಧೆಗಳಿಗೆ ಹೇಗೆ ಬೇಕೋ ಹಾಗೆ ಬಳಸಿಕೊಂಡನೇ ವಿನಃ ನಿಜವಾದ ಕಾಂಗ್ರೆಸ್ಸಿಗನಾಗಲೇ ಇಲ್ಲ. ಕಳೆದ ಎರಡು ವಿಧಾನಸಭಾ ಚುನಾವಣೆಗಳಲ್ಲಿ ಈತ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೆ ಎದುರಾಗಿ ಸ್ಪರ್ಧಿಸಿದ್ದ ಬಸವರಾಜನ್ ಜೊತೆ ಶಾಮೀಲಾಗಿದ್ದ. ಪಕ್ಷಕ್ಕಾಗಿ ಏನನ್ನೂ ಕಿಸಿಯಲಿಲ್ಲ. ಹಾಗಾಗಿ ಚುನಾವಣೆಗಳಲ್ಲಿ ಈತನನ್ನು ಬ್ರೀಫ್‌ಕೇಸ್ ಎಂದೇ ಗುರುತಿಸುತ್ತಾರೆ. ಈ ನಡುವೆ ಜಿಲ್ಲಾ ಪಂಚಾಯತಿ ಚುನಾವಣೆಯೊಂದರಲ್ಲಿ ಹರಸಾಹಸ ಪಟ್ಟರೂ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಲಾಗಿರಲಿಲ್ಲ. ನಗರಸಭೆ ಚುನಾವಣೆಗೆ ಸ್ಪರ್ಧಿಸಲೂ ಟಿಕೆಟ್ ನಿರಾಕರಿಸಲಾಗಿತ್ತು. ಆದರೆ ಯಾವಾಗ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹೊಳಲ್ಕೆರೆ ಮೀಸಲು ಕ್ಷೇತ್ರದಿಂದ ಈತನಿಗೆ ಟಿಕೆಟ್ ಘೋಷಣೆಯಾಯಿತೋ ಆಗ ಈತನ ನಸೀಬೇ ಬದಲಾಯಿತು. ನಂತರ ಟಿಕೆಟ್ ಹೆಚ್. ಆಂಜನೇಯರವರ ಪಾಲಾಗಿ ಈತ ಕಡೆಗಣಿಸಲ್ಪಟ್ಟ. "ಎಂ.ಎಲ್.ಎ ಟಿಕೆಟ್ ಕ್ಯಾನ್ಸಲ್ ಆದರೇನಂತೆ ಎಂಪಿ ಟಿಕೆಟ್ ತರ್ತೀನಿ" ಅಂತ ಹೇಳಿಕೊಂಡೇ ತಿರುಗುತ್ತಿದ್ದ. ಅದ್ಯಾವ ಮಾನದಂಡಗಳ ಆಧಾರದ ಮೇಲೆ ಈತ ಟಿಕೆಟ್ ಗಿಟ್ಟಿಸಿಕೊಂಡನೋ ಗೊತ್ತಿಲ್ಲ, ಈಗ ಡಾ. ಜೆ.ಜೆ. ಹ. ತಿಪ್ಪೇಸ್ವಾಮಿ ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿ.

ಈಗ ಈತ "ನಾನು ಹಿಂದೆ ಏನಾದರೂ ತಪ್ಪುಗಳನ್ನು ಮಾಡಿದ್ದಲ್ಲಿ ಕ್ಷಮಿಸಿ, ನನ್ನನ್ನು ಬೆಂಬಲಿಸಿ" ಎಂದು ಹೋದಲ್ಲಿಬಂದಲ್ಲಿ ಹೇಳುತ್ತಿರುವುದು ತಮಾಷೆಯಾಗಿದೆ. ತಿಪ್ಪೇಸ್ವಾಮಿ ಹೇಗೆ ಗೆಲ್ಲುತ್ತಾರೆ ಎಂದು ಆತನ ಆಪ್ತ ಬೆಂಬಲಿಗರು ಮಂಡಿಸುವ ಲೆಕ್ಕಾಚಾರಗಳು, ವಿಶ್ಲೇಷಣೆಗಳು ರಂಜನೀಯವಾಗಿವೆ. ಅಂತೂಇಂತೂ ಈತನಿಗೆ ಯೂತ್ ಖೋಟಾದಡಿ ಟಿಕೆಟ್ ನೀಡುವುದರೊಂದಿಗೆ ತಮ್ಮ ಪಕ್ಷದಲ್ಲಿ ತೊಡಗಿಸಿಕೊಳ್ಳುವ ಯುವಕರು ಹೇಗಿರಬೇಕು? ಎಂಥವರಿರಬೇಕು ಎಂಬುದನ್ನು ಸಾಂಕೇತಿಕವಾಗಿ ಕಾಂಗ್ರೆಸ್ ಬಿಂಬಿಸಿದೆ.



ಸೈಕಿಕ್ ಡಿಸಿಪಿ ರವಿ?

[illegible]

● [illegible]

ಡಿಬಿಸಿ 10 ಕೋಟಿಗೆ ಸೇಲ್!

...ಬಿ. ಚಂದ್ರೇಗೌಡ ಎಂಬ ತುಕ್ಕು ಹಿಡಿದಿದ್ದ ...ರ್ ನಾಯಕ ಕೊನೆಗೂ ಕಮಲದ ಕೆಸರಿನ ಗುಂಡಿಗೆ ...ದ್ದಾರೆ. ಬರೀ ಭಾಷಣ ಮಾಡಿಕೊಂಡು ಕಾಂಗ್ರೆಸ್‌ನಲ್ಲಿ ... ನಾಯಕನಂತೆ ಓಡಾಡಿಕೊಂಡಿದ್ದ ಈತನನ್ನು ...ತೆ 10 ಕೋಟಿ ಕೊಟ್ಟು ಖರೀದಿಸಿದೆ. ಬೆಂಗ...ರು ಉತ್ತರ ಕ್ಷೇತ್ರದಲ್ಲಿ ಅಭ್ಯರ್ಥಿಗಳಿಲ್ಲದೇ ...ಡುತ್ತಿದ್ದ ಬಿಜೆಪಿ ಕಾಂಗ್ರೆಸ್‌ನಲ್ಲಿನ ಒಕ್ಕಲಿಗರ ...ರಿಗೆ ಬಲೆ ಬೀಸಿತ್ತು. ಈ ಬಲೆಗೆ ಬಿದ್ದ ಮಿಕವೆಂದರೆ ...ೇಗೌಡ ಮಾತ್ರ.

...ಂದು ದಿನವೂ ಜನರೊಂದಿಗೆ ಬೆರೆಯದೇ, ದೊಡ್ಡ ... ಮಾತುಗಳನ್ನಾಡುತ್ತಾ ಕಾಂಗ್ರೆಸ್‌ನಲ್ಲಿ ಅಧಿಕಾರ ...ವಿಸುತ್ತಿದ್ದ ಚಂದ್ರೇಗೌಡನ ಯೋಗ್ಯತೆ ಏನೆಂಬುದು ...ಗಲೇ ಕಾಂಗ್ರೆಸ್ ಹೈಕಮಾಂಡ್‌ಗೆ ಗೊತ್ತಾಗಿ...ತ್ತು. ಹೀಗಾಗಿ ಕೆಪಿಸಿಸಿ ಅಧ್ಯಕ್ಷ ಸ್ಥಾನ ತನಗೇ ...ಬೇಕೆಂದು ಒತ್ತಾಯಿಸಲು ಈತ ದೆಲ್ಲಿ ಯಾತ್ರೆ ...ಂಡಿದ್ದಾಗ, "ಇತ್ತೀಚೆಗೆ ಪ್ರತಿ ಚುನಾವಣೆಯಲ್ಲಿ ...ಸುತ್ತಿರುವ ನಿಮಗೆ ಪಕ್ಷದ ಚುಕ್ಕಾಣಿ ನೀಡಿದರೆ ...ನಾಶವಾಗುವುದು ಗ್ಯಾರಂಟಿ'' ಎಂದು ಮುಖದ ... ಹೊಡೆದಂತೆ ಹೇಳಿದ ಹೈಕಮಾಂಡ್ ಅವರನ್ನು ...ಪ ಕಳುಹಿಸಿತ್ತು. ಇನ್ನು ಕಾಂಗ್ರೆಸ್‌ನಲ್ಲಿ ಬೇಳೆ ...ಸಿಕೊಳ್ಳಬೇಕೆಂದರೆ ಚುನಾವಣೆಯಲ್ಲಿ ಗೆಲ್ಲಲೇ...ವ ಅನಿವಾರ್ಯತೆ ಇದೆ ಎಂದು ಗೊತ್ತಾಗುತ್ತಿ...ದ್ದಂತೆಯೇ ಚಂದ್ರೇಗೌಡ ಮಾರಾಟಕ್ಕೆ ಸಿದ್ಧರಾದರು.

...ನಾತ್ಯತೀತ ಸಿದ್ಧಾಂತದ ಬಗ್ಗೆ ಆಕರ್ಷಕವಾಗಿ ...ನಾಡುತ್ತಿದ್ದ ಚಂದ್ರೇಗೌಡ ತಾವು ಚಿಕ್ಕಮಗಳೂರು ... ಉಸ್ತುವಾರಿ ಸಚಿವರಾಗಿದ್ದಾಗ ಬಾಬಾಬುಡನ್ ...ಎಲ್ಲಿ ಹೋಮ ಮಾಡಿ ಕೇಸರಿಪಡೆಯ ಕೂಗು...ಳಿಗೆ ಭಾಷಣಕ್ಕೆ ವಿಷಯವೊಂದನ್ನು ಒದಗಿಸಿದ್ದರು. ... ಇದೇ ಹೋಮ-ಹವನಗಳನ್ನು ವಿರೋಧಿಸಿ ... ಮಾಡಿದ್ದರು. ಹೀಗೆ ಅವಕಾಶವಾದಿಯಂತೆ ಮಾತನಾಡುವ ಚಂದ್ರೇಗೌಡ ಈಗ ಕಾಂಗ್ರೆಸ್ ಪಕ್ಷವನ್ನು ಬಾಯಿಗೆ ಬಂದಂತೆ ಟೀಕಿಸುತ್ತಿದ್ದಾರೆ. ಅಧಿಕಾರ ಕೊಡಲಿಲ್ಲ ಎಂಬ ಕಾರಣಕ್ಕೆ ಸಿದ್ಧಾಂತವನ್ನು ಬಿಟ್ಟು, ತಾವು ಇದುವರೆಗೆ ವಿರೋಧಿಸಿಕೊಂಡು ಬಂದಿದ್ದ ಚಡ್ಡಿಪಡೆಯನ್ನು ಸೇರಿಕೊಂಡಿದ್ದಾರೆ. ಅಲ್ಲಿಂದ ಮತ್ತೆಲ್ಲಿಗೆ ಹಾರುತ್ತಾರೋ ಗೊತ್ತಿಲ್ಲ.

ಒಂದಿಷ್ಟು ದಿನ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ನಂತರ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯಲ್ಲಿ ರಾಜಕೀಯ ಮಾಡಿದ್ದ ಚಂದ್ರೇಗೌಡ 'ವೈಟ್ ಕಾಲರ್'ಗೌಡ ಎಂದೇ ಹೆಸರು ಮಾಡಿದವರು. ಅಧಿಕಾರ ಇರಲಿ, ಇಲ್ಲದಿರಲಿ ಎಂದೂ ಜನತೆಯೊಂದಿಗೆ ನೇರವಾಗಿ ಬೆರೆತವರಲ್ಲ. ಬೆಂಗಳೂರಿನಿಂದ ಅಪರೂಪಕ್ಕೆ ಕ್ಷೇತ್ರಕ್ಕೆ ಭೇಟಿ ನೀಡಿದಾಗ ಶ್ರೀಮಂತರ ಮನೆಯಲ್ಲಿಯೋ, ಗೆಸ್ಟ್‌ಹೌಸ್‌ನಲ್ಲಿಯೋ ಉಳಿದುಕೊಂಡು, ಹಿಂಬಾಲಕರ ಮೂಲಕ ರಾಜಕಾರಣ ಮಾಡಿದವರು. ಇಂತಹ ನಕಲಿ ನಾಯಕ ಬಿಜೆಪಿಗೆ ಹೋಗಿದ್ದರಿಂದ ಪೀಡೆ ತೊಲಗಿತು ಎಂದು ಶೃಂಗೇರಿ ಕ್ಷೇತ್ರದ ಕಾಂಗ್ರೆಸ್ ಮುಖಂಡರು ಖುಷಿಯಾಗಿದ್ದಾರೆ. ಹೀಗಾಗಿಯೇ ಅವರ ಹಿಂದೆ ಶೃಂಗೇರಿ ಕ್ಷೇತ್ರದ ಒಂದು ನರಪಿಳ್ಳೆಯೂ ಬಿಜೆಪಿ ಸೇರುತ್ತಿಲ್ಲ!



10 ಕೋಟಿ ಕೊಡಿ ಎಂದು ಪಟ್ಟು

ಕಾಂಗ್ರೆಸ್‌ನಲ್ಲಿ ಮೂಲೆಗುಂಪಾಗಿದ್ದ ಚಂದ್ರೇಗೌಡರನ್ನು ಅದ್ಯಾವ ಚಡ್ಡಿ ನಾಯಕ ಪತ್ತೆ ಹಚ್ಚಿದನೋ ಗೊತ್ತಿಲ್ಲ. ಈತನನ್ನು ಮುಖ್ಯಮಂತ್ರಿ ಯಡ್ಡಿ ಕರೆಸಿ ಮಾತನಾಡಿಸಿದರು. "ಏನಿಲ್ಲ, ಹತ್ತು ಕೋಟಿ ಕೊಟ್ಟರೆ ಬರುತ್ತೇನೆ'' ಎಂದುಬಿಡಬೇಕೆ ಈ ಮಾಜಿ ಸಮಾಜವಾದಿ. ರಾಜಕಾರಣಿಗಳ ಖರೀದಿಯಲ್ಲಿ ಮತ್ತು ಅವರ ಬೆಲೆಯ ಚೌಕಾಸಿಯಲ್ಲಿ ಈಗ ನಿಪುಣರಾಗಿರುವ ಯಡ್ಡಿಗೆ ಈ ಮನುಷ್ಯನಿಗೆ ಹತ್ತು ಕೋಟಿ ಜಾಸ್ತಿಯಾಯಿತು ಎಂದೆನಿಸಿರಬೇಕು. "ಅಷ್ಟು ಕಷ್ಟ ನೋಡೋಣ'' ಎಂದರು. ಆದರೆ ತನ್ನನ್ನು ಪಕ್ಷಕ್ಕೆ ಬರಮಾಡಿಕೊಳ್ಳಲು ಯಡ್ಡಿ ತುದಿಗಾಲಿನಲ್ಲಿ ನಿಂತಿದ್ದಾರೆ ಎಂದು ಭಾವಿಸಿದ ಚಂದ್ರೇಗೌಡ, "ನೋಡಿ, ಹತ್ತು ಕೊಟ್ಟರೆ ಬರುತ್ತೇನೆ, ಪಕ್ಷದ ಪರವಾಗಿ ಮಾತನಾಡುತ್ತೇನೆ'' ಎಂದು ತಮ್ಮ ಎಂದಿನ ಶೈಲಿಯಲ್ಲಿ ಗಡ್ಡ ತುರಿಸುತ್ತಾ ಭಾಷಣ ಆರಂಭಿಸಿದರು. ಆಗ "ಎಲ್ಲರನ್ನೂ ಕೇಳಿ ತೀರ್ಮಾನಕ್ಕೆ ಬಂದು ತಿಳಿಸುತ್ತೇನೆ'' ಎಂದ ಯಡ್ಡಿ ಗೌಡರನ್ನು ಸಾಗಹಾಕಿದರು.

ಈ ಸುದ್ದಿ ತಿಳಿಯುತ್ತಿದ್ದಂತೆಯೇ ಶೃಂಗೇರಿ ಕ್ಷೇತ್ರದ ಶಾಸಕ ಜೀವರಾಜ್ ಮತ್ತು ಚಿಕ್ಕಮಗಳೂರಿನ ಸಿ.ಟಿ.ರವಿ "ಆತ ಪಕ್ಷಕ್ಕೆ ಬಂದರೆ ನಮಗೆ ಮರ್ಯಾದೆ ಇರುವುದಿಲ್ಲ, ಅವನನ್ನು ಒಳಗೆ ಬಿಟ್ಟುಕೊಳ್ಳಬೇಡಿ'' ಎಂದು ಏಕವಚನದಲ್ಲಿ ಚಂದ್ರೇಗೌಡರನ್ನು ಬೈಯುತ್ತಾ ಯಡ್ಡಿಯ ತಲೆತಿಂದರು. ಆದರೆ ಚಿಕ್ಕಮಗಳೂರು-ಉಡುಪಿ ಕ್ಷೇತ್ರದಿಂದ ಸ್ಪರ್ಧಿಸಿರುವ ಹಲ್ಲುಬಿಗೌಡ, ಚಂದ್ರೇಗೌಡ ಬಂದರೆ ತಮಗೊಂದಿಷ್ಟು ಲಾಭವಾಗಬಹುದು ಎಂದು ಲೆಕ್ಕಾಚಾರ ಹಾಕಿ "ಬರೋರನ್ನ ಬೇಡ ಎನ್ನಲಾಗುತ್ಯೇ?'' ಎಂದು ನಕ್ಕರು. ಹೀಗಾಗಿ ಯಡ್ಡಿ-ಡಿಬಿಸಿ ಮಾತುಕತೆ ನಡೆಸಿ ಒಂದು ವಾರವಾಗಿದ್ದರೂ ಅಂತಿಮ ತೀರ್ಮಾನವಾಗಿರಲಿಲ್ಲ. ಈ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಡಿಬಿಸಿ "ನಾನು ಭಿಕ್ಷುಕ, ಬಿಜೆಪಿ ಮನೆಮುಂದೆ ನಿಂತಿದ್ದೇನೆ, ಭಿಕ್ಷೆ ಹಾಕುತ್ತಾರೋ ಬಿಡುತ್ತಾರೋ ಗೊತ್ತಿಲ್ಲ'' ಎಂದು ನಾಚಿಕೆ ಬಿಟ್ಟು ಹೇಳಿದರು.

ಕೊನೆಯ ಕ್ಷಣದವರೆಗೂ ಬೆಂಗಳೂರು ಉತ್ತರ ಕ್ಷೇತ್ರಕ್ಕೆ ಅರ್ಹ ಅಭ್ಯರ್ಥಿ ಸಿಗದೇ ಇದ್ದುದ್ದರಿಂದ, ಡಿಬಿಸಿಯನ್ನು ಖರೀದಿಸುವ ತೀರ್ಮಾನಕ್ಕೆ ಬಿಜೆಪಿ ಬಂತು. ಈಗಾಗಲೇ ಪ್ರತಿ ಕ್ಷೇತ್ರಕ್ಕೊಂದು ರೆಡ್ಡಿ ಪಡೆ ನೀಡಿದ್ದ ಹತ್ತು ಕೋಟಿ ಇತ್ತಲ್ಲ, ಅದನ್ನು ಚಂದ್ರೇಗೌಡನಿಗೆ ಕೊಟ್ಟು ಪಕ್ಷಕ್ಕೆ ಸೇರಿಸಿಕೊಳ್ಳಲಾಗಿದೆ. ಬೆಂಗಳೂರು ಉತ್ತರ ಕ್ಷೇತ್ರದಲ್ಲಿ ನಿಂತು, ನೆಪಮಾತ್ರಕ್ಕೆ ಒಂದಿಷ್ಟು ಹಣ ಖರ್ಚು ಮಾಡಿ, ಉಳಿದಿದ್ದರಲ್ಲಿ ನಿವೃತ್ತಿ ಜೀವನ ನಡೆಸಲು ಚಂದ್ರೇಗೌಡ ಉದ್ದೇಶಿಸಿದ್ದಾರೆ. ಅವರ ಈ ಲದ್ದಿ ಬುದ್ಧಿಗೆ ಏನನ್ನಬೇಕು?!

● ವರದಿಗಾರ


ಲಿಂಗದೇವರು ಹಳೆಮನೆ: ಅರವತ್ತು

...ಬ್ಬ ಮನುಷ್ಯನ ಆಯುಷ್ಯದಲ್ಲಿ ಅರವತ್ತನೆ ವರ್ಷ ... ಪ್ರಮುಖ ಘಟ್ಟ. ವೈಯಕ್ತಿಕವಾಗಿ ಈ ಘಟ್ಟದ ...ಹತ್ತಿ ತನ್ನ ಈ ಜೀವಮಾನದ ಆಗುಹೋಗು... ತಿರುಗಿ ನೋಡುವ ಕಾಲ. ಅಂತೆಯೇ ...ಸಮುಖಿಯಾದ ವ್ಯಕ್ತಿಯ ಜೀವನವನ್ನು ಆತ ...ಪಕ್ಕೆ ಕೊಟ್ಟ ಕೊಡುಗೆಯಾಗಿ ಉಳಿದವರು ಸಹ ...ಸುವುದು ಇನ್ನೊಂದು ದೃಷ್ಟಿ.

...ಳೆಮನೆಗೆ ಈಗ ಅರವತ್ತು. ಅವರ ಕಾಣ್ಕೆ, ...ಣ್ಣೀಟಿ ಮುಂತಾದವುಗಳನ್ನು ನೋಡುವ ಕಾಲಘಟ್ಟ. ...ಹೊರು ಜಿಲ್ಲೆ ಹಾಲ್ಗುಣ ಎಂಬ ಹಳ್ಳಿಯ ಮುಗ್ಧ ...ನೊಬ್ಬ ದಿಲ್ಲಿಗೆ ಬಂದು ಎಲ್ಲಿಯೂ ಕಳೆದುಹೋಗದೆ ...ಚಿಂತಕನಾಗಿ ಬೆಳೆದದ್ದು ಕನ್ನಡ ಸಾಂಸ್ಕೃತಿಕ ಲೋಕಕ್ಕೆ ... ಕೊಟ್ಟ ಕಾಣಿಕೆ ಅಪಾರ. ತಿಪಟೂರಿನಂತಹ ...ಜಿನಲ್ಲಿ ಓದಿ, ಕನ್ನಡದಲ್ಲಿ ಅತ್ಯಂತ ಹೆಚ್ಚು ಅಂಕ ...ತಮಿಳುನಾಡಿನ ಅಣ್ಣಾಮಲೈ ವಿಶ್ವವಿದ್ಯಾನಿಲಯ ...ಭಾಷಾಶಾಸ್ತ್ರದ ಎಂ.ಎ. ಮಾಡಿ ಮೈಸೂರಿನ ...ೀಯ ಭಾಷಾ ಸಂಸ್ಥಾನಕ್ಕೆ ಕನ್ನಡ ಅಧ್ಯಾಪಕರಾಗಿ ...ದ್ದು 1973ರಲ್ಲಿ. ಆಗಿನ ಕಾಲದ ಮೈಸೂರಿನ ...ರು, ಸಾಹಿತಿಗಳೂ ಆದ ಹಲವರ ಜೊತೆ ...ಟಿ. ಭಾಷಾ ಸಂಸ್ಥಾನದ ಸ್ಥಾಪಕ ನಿರ್ದೇಶಕರೂ, ...ಜವಾದಿ ಚಿಂತಕರೂ ಆದ ಅಂತರ್‌ದೇಶೀಯ ... ಪಡೆದಿದ್ದ ಡಾ. ಡಿ.ಪಿ. ಪಟ್ಟನಾಯಕರ ...ನಾಳತ್ವದಲ್ಲಿ ಭಾಷೆಗೂ ಮತ್ತು ಸಮಾಜಕ್ಕೂ ... ನಂಟಿನ ಸ್ಪಷ್ಟ ಪರಿಕಲ್ಪನೆ ಮೂಡಿತು.

...ತಂತ್ರ್ಯ ಹೋರಾಟದ ನಂತರ ಈ ದೇಶ ಮತ್ತೊಂದು ...ಕ ಹೋರಾಟಕ್ಕೆ ಸಿದ್ಧರಾಗಬೇಕಾಗಿದ್ದ ಕಾಲ ...ಪರಿಸ್ಥಿತಿ. ಯುವಕರಾಗಿದ್ದ ನಾವು ಹಳೆಮನೆಯ ...ನಾಳತ್ವದಲ್ಲಿ ತುರ್ತುಪರಿಸ್ಥಿತಿಯನ್ನು ಎದುರಿಸಲು ...ಯವಾಗಿ, ಸಾಂಸ್ಕೃತಿಕವಾಗಿ ಹೋರಾಡುವ ಕಾಲ ...ಬಂತು. ಎಡಪಂಥೀಯ ಧೋರಣೆಯ ಅನೇಕ ...ಕರು ತುರ್ತುಪರಿಸ್ಥಿತಿಯನ್ನು ಎದುರಿಸಲು ...ಕ ಮಾಧ್ಯಮವನ್ನು ಬಳಸಬೇಕಾಗಿ ಬಂತು. ...ಳಿದ ಮಾಧ್ಯಮಗಳಲ್ಲಿ ಒಂದು ಬೀದಿ ನಾಟಕ. ... ಹೊತ್ತಿಗಾಗಲೇ ಪ್ರಸಿದ್ಧ ನಾಟಕಕಾರ ಪ್ರಸನ್ನ ...ಸಮುದಾಯ ನಾಟಕ ತಂಡ ಹುಟ್ಟಿಕೊಂಡಿತ್ತು. ...ನ ಮೈಸೂರು ಸಮುದಾಯದ ಮುಂದಾಳತ್ವವನ್ನು ...ಂಡು ಇಡೀ ನಾಡಿನಾದ್ಯಂತ ಬೀದಿ ನಾಟಕಗಳ ...ಕ ಎಡಪಂಥೀಯ, ಮಾನವೀಯ ಮುಖಗಳ ... ಮಾಡಿಸಿದ್ದರು. ಇದು ಅವರ ವರ್ಗ ಸಂಘರ್ಷದ ...ಗೆ ಅಪಾರ ಅನುಭವವನ್ನು ನೀಡಿತು. ಇದಕ್ಕಾಗಿ ...ೂರಿನಲ್ಲಿ study circle ಪ್ರಾರಂಭಿಸಿ ...ವಾದದ ಚಿಂತನ, ಮಂಥನಗಳನ್ನು ನಡೆಸಿದರು. ...ಟಿತ ಕಾರ್ಮಿಕರನ್ನು ಸಂಘಟಿಸಿ ಹೋರಾಟ...ಚಳವಳಿಗಳನ್ನು ನಡೆಸಿದರು. ಇದರಿಂದ ಸಿದ್ಧಾಂತ ಮತ್ತು ...ನುಭವ ಎರಡನ್ನೂ ಬೆಸೆಯಲು ಸಾಧ್ಯವಾಯಿತು.

1976 ರಿಂದ ಮೈಸೂರು ಸಮುದಾಯವು ಪ್ರಸನ್ನ ಅವರ ನಿರ್ದೇಶನದಲ್ಲಿ ಮ್ಯಾಕ್ಸಿಮ್ ಗಾರ್ಕಿಯ 'ತಾಯಿ' ನಾಟಕ ಆಡಿಸುವುದರ ಮೂಲಕ ಹೊಸ ರೀತಿಯ ನಾಟಕ ಪರಂಪರೆಯೊಂದು ಹುಟ್ಟಿ ಬಂತು. ಮೈಸೂರು ಸಾಂಸ್ಕೃತಿಕ ರಂಗಕ್ಕೆ ಹೊಸ ರಕ್ತಚಲನೆ ಉಂಟಾಯಿತು.. ಆಗಿನ ನಾಟಕದ ಮುಂಚೂಣಿಯಲ್ಲಿದ್ದ ಮೈಸೂರಿನ ಘಟಾನುಘಟಿಗಳಾದ ನ. ರತ್ನ, ವಿಶ್ವನಾಥ ಮಿರ್ಲೆ, ಬಾಲಗೋಪಾಲ ವರ್ಮ, ಸಿನಿಮಾ ನಟರುಗಳಾದ ಸಂಪತ್, ಅಶ್ವಥ್ ಮುಂತಾದವರುಗಳು ಈ ನಾಟಕವನ್ನು ನೋಡಿ ಚಕಿತರಾದರು. ಇದರ ಮುಂದಾಳತ್ವವನ್ನು ವಹಿಸಿದವರಲ್ಲಿ ಒಬ್ಬರು ಹಳೆಮನೆ.



ನಂತರ ಹಳೆಮನೆಯನ್ನು ಆಕರ್ಷಿಸಿದ್ದು ಚರಿತ್ರೆ. ಅಂದಿನವರೆಗೂ ಚರಿತ್ರೆ ಎಂದರೆ ಅದು ರಾಜಮಹಾರಾಜರುಗಳ ಆವರ, ಸೋಲು, ಗೆಲುವುಗಳ ವಿಲಾಸಿ ಜೀವನದ, ವೀರತ್ವದ ಚರಿತ್ರೆಯೇ ಆಗಿತ್ತು. ಆದರೆ ಚರಿತ್ರೆ ಎಂಬುದು ಬರೀ ಮೇಲೆ ಹೇಳಿದ್ದು ಅಷ್ಟೇ ಅಲ್ಲ; ಆಗಲೂ ಸಹ ಎಂದಿನಂತೆ ಸಾಮಾನ್ಯ ಮನುಷ್ಯರು, ಅವರ ಕಷ್ಟ ಸುಖಗಳು ಪ್ರತಿಯೊಬ್ಬ ರಾಜನೂ ಪಟ್ಟಕ್ಕೆ ಬಂದಾಗ ಅವನ ಆಡಳಿತಕ್ಕೆ ತಕ್ಕಂತೆ ಆಡುವುದು, ಅಂದರೆ ಸಾಮಾನ್ಯ ಮನುಷ್ಯನ ಚರಿತ್ರೆಯನ್ನು ಹೇಳುವುದು ಹಳೆಮನೆಯವರ ನಾಟಕಗಳ ಉದ್ದೇಶವಾಗಿತ್ತು. ಚರಿತ್ರೆಯ ಗತಿತಾರ್ಕಿಕತೆಯನ್ನು ಗುರುತಿಸುವುದೇ ಆಗಿತ್ತು. 1982ರಲ್ಲಿ ಹಳೆಮನೆಯವರು ಬರೆದ 'ಚಿಕ್ಕದೇವಭೂಪ' ನಾಟಕವು ಒಂದು ಉದಾಹರಣೆ. ಚಿಕ್ಕದೇವಭೂಪ ನಾಡಿನಾದ್ಯಂತ ವಿಧಿಸಿದ ಅನೇಕ ತೆರಿಗೆಗಳನ್ನು ಕೊಡಲು ನಿರಾಕರಿಸಿದ ರೈತರ ಮಾರಣಹೋಮದ ವಸ್ತುವಾಗಿ ಈ ನಾಟಕ ಮೂಡಿಬಂತು. ಈ ನಾಟಕ ಕರ್ನಾಟಕದ ಅನೇಕ ಕಡೆಗಳಲ್ಲಿ ಪ್ರದರ್ಶನಗೊಂಡಿತು. ಅಲ್ಲದೇ 20ನೇ ಶತಮಾನದ ಜನಪ್ರಿಯ ನಾಟಕವೆಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ತನ್ನ ನಾಟಕ ಸಂಗ್ರಹದಲ್ಲಿ ಇದನ್ನು ಸೇರಿಸಿಕೊಂಡಿತು.

1986ರಲ್ಲಿ ಬರೆದ 'ಹೈದರ್' ನಾಟಕವೂ ಮತ್ತೊಂದು ಯಶಸ್ವಿ ನಾಟಕ. ಇದೂ ಸಹ ಕರ್ನಾಟಕ ವಿಶ್ವವಿದ್ಯಾನಿಲಯ, ಮೈಸೂರು ವಿಶ್ವವಿದ್ಯಾನಿಲಯ, ಗುಲ್ಬರ್ಗಾ ವಿಶ್ವವಿದ್ಯಾನಿಲಯದಲ್ಲಿ ಪಠ್ಯ ಪುಸ್ತಕವಾಗಿ ಬೋಧಿಸಲ್ಪಟ್ಟಿದೆ. ಅಂತೆಯೇ 'ಅಂತೆಂಬರಗಂಡ (1996)', 'ತಸ್ಕರ' ನಾಟಕಕ್ಕೆ ಕೆ.ವಿ. ಸುಬ್ಬಣ್ಣರವರ ಹೆಸರಿನ ಬಹುಮಾನವೂ ದೊರಕಿತು. ಈ ನಾಟಕಗಳೇ ಅಲ್ಲದೇ ಶಾಪ ಮತ್ತು ಗಡಿಯಂಕ ಕುಡಿಮುದ್ದ ಎಂಬ ನಾಟಕವನ್ನೂ ಸಹ ಇವರು ರಚಿಸಿದ್ದಾರೆ. ಇಷ್ಟೇ ಅಲ್ಲದೇ ಇವರ ಡಾ. ಬೆಥುನೆ, ಧರ್ಮಪುರಿಯ ದೇವದಾಸಿ, **Bertolt Brecht. Good women of Schetzuvan),** ಮದರ್ ಕರೇಜ್, ಮನುಷ್ಯ ಅಂದ್ರೆ ಮನುಷ್ಯನೆ (**Man is Man**) ಮತ್ತು ಮಟಾಶ್ ರಾಜ (**Orthro ui**) ಮುಂತಾದ ನಾಟಕಗಳ ಕನ್ನಡ ಭಾಷಾಂತರ ಅಥವಾ ರೂಪಾಂತರಗಳಾಗಿ ಅನೇಕ ಪ್ರದರ್ಶನಗಳನ್ನು ಕಂಡವು.

ಹಳೆಮನೆ ಇವೆಲ್ಲದರ ನಡುವೆಯೂ ಆಗ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ್ದ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ. ಸೇರಿ ಮೊದಲ ರ್‍ಯಾಂಕ್ ಪಡೆಯುವುದರ ಜೊತೆಗೆ ಕನ್ನಡ ಎಂ.ಎ. ಗಾಗಿ ನೀಡಲಾಗುತ್ತಿದ್ದ ಎಲ್ಲಾ ಚಿನ್ನದ ಪದಕಗಳನ್ನು ಬಾಚಿಕೊಂಡು ಬಿಟ್ಟರು. ಆಗ ಮೈಸೂರು ವಿ.ವಿ.ಯ ನೇರ ವಿದ್ಯಾರ್ಥಿಗಳ ಹೊಟ್ಟೆಕಿಚ್ಚಿಗೆ ಒಳಗಾಗಬೇಕಾಗಿ ಬಂತು. ಹಳೆಮನೆಯಂತವರು ತಮ್ಮ ರ್‍ಯಾಂಕುಗಳನ್ನು ಕಸಿದುಕೊಳ್ಳುವರೆಂದು ಹೋರಾಟ ಮಾಡಿ ಮುಕ್ತ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ರ್‍ಯಾಂಕ್ ಅನ್ನು ಕೊಡಬಾರದೆಂದು ವಿಶ್ವವಿದ್ಯಾನಿಲಯಕ್ಕೆ ತಾಕೀತು ಮಾಡಿ ವಿ.ವಿ. ಒಪ್ಪಿಕೊಳ್ಳುವಂತೆ ಮಾಡಿದರು.

ಪ್ರಗತಿಪರ ಚಿಂತಕರಾದ ಹಳೆಮನೆ ಕೆಟ್ಟದ್ದು ಎಲ್ಲಿ ಕಂಡುಬಂದರೂ ಅದನ್ನು ಪ್ರತಿಭಟಿಸುವುದೇ ಅಲ್ಲದೇ ಪರಿಹಾರವನ್ನೂ ಹೇಳುವ ಕ್ರಿಯೆಯನ್ನು ನಡೆಸಿಕೊಂಡೇ ಬಂದಿದ್ದಾರೆ. ಭಾರತೀಯ ಭಾಷಾ ಸಂಸ್ಥಾನದ ಒಬ್ಬ ಆಗಿನ ನಿರ್ದೇಶಕರು ಮಾಡಿದ ತಪ್ಪನ್ನು ಪ್ರತಿಭಟಿಸಿ ತಮ್ಮ ಕೆಲಸವನ್ನೂ ಕಳೆದುಕೊಳ್ಳುವ ಸಂಭವವಿತ್ತು. ಎಂ.ಎಚ್.ಆರ್.ಡಿ. ಯು ನೇಮಕ ಮಾಡಿದ ಸಮಿತಿಯ ಎದುರು ತಮ್ಮ ನಿಲುವನ್ನು ಸ್ಪಷ್ಟಪಡಿಸಿದರು. ಆ ನಿಲುವನ್ನು ಮೆಚ್ಚಿ ಹಳೆಮನೆಯವರನ್ನು ಕೆಲಸದಿಂದ ತೆಗೆಯದೆ ನಿರ್ದೇಶಕರೇ ಪದಚ್ಯುತಿಗೊಳ್ಳಬೇಕಾಯಿತು. ಹಳೆಮನೆ ಸಂಸ್ಥೆಗಿಂತ ಸಮಾಜ ದೊಡ್ಡದು ಎಂಬ ನಿಲುವನ್ನು ತಳೆದು ಅನ್ಯಾಯವನ್ನು ಪ್ರತಿಭಟಿಸಿದರು. ಇಂತಹ ಹೋರಾಟಗಳು ಅವರ ಜೀವನದಲ್ಲಿ ಅನೇಕ. ಇಷ್ಟೆಲ್ಲದರ ನಡುವೆಯೂ ಅವರೊಳಗೆ ಒಬ್ಬ ಮುಗ್ಧ ಬಾಲಕ ಕುಳಿತುಕೊಂಡೇ ಇದ್ದಾನೆ. ಬೌದ್ಧಿಕತೆ, ಚಿಂತನಾಶೀಲತೆ, ಕ್ರಿಯಾಶೀಲತೆ ಇವುಗಳ ಜೊತೆಯಲ್ಲಿಯೇ ಅಂತಃಕರಣವೂ ತುಂಬಿರುವುದರಿಂದ ಅವರ ಬರವಣಿಗೆಗೆ ವಿಶಿಷ್ಟ ಮೆರಗು ಬಂದಿದೆ.

ಮೈಸೂರು ಅರಮನೆಯ ಚರಿತ್ರೆಯ ಹಿನ್ನಲೆಯಲ್ಲಿ ಕರ್ನಾಟಕ ಸರ್ಕಾರಕ್ಕೆ ಮಾಡಿದ ಇವರ ಸಿ.ಡಿ. ನಾಲ್ಕೈದು ವರ್ಷಗಳಿಂದ ನಾನಾ ವಿಧವಾದ ಆಕ್ಷೇಪಣೆಗಳಿಗೆ ತುತ್ತಾಗಿದೆ. ಆಳುವ ಪಕ್ಷಕ್ಕೆ ಮತ್ತು ಮಹಾರಾಜರ ವಂಶಸ್ಥರಿಗೆ ಇದು ಸರಿಯಾಗಿ ಕಂಡುಬಂದಿಲ್ಲ. ಆದರೆ ಮೈಸೂರು ಚರಿತ್ರೆಯನ್ನು ಸಮಗ್ರವಾಗಿ ಅಧ್ಯಯನ ಮಾಡಿರುವ ಹಿನ್ನಲೆಯಲ್ಲಿ ಇವರ್‍ಯಾರು ಈ ಸಿ.ಡಿ.ಯನ್ನು ನೋಡುವ ತಾಳ್ಮೆಯನ್ನು ಹೊಂದಿಲ್ಲ.

ಭಾರತೀಯ ಭಾಷಾ ಸಂಸ್ಥಾನಕ್ಕಾಗಿ ಕನ್ನಡ ಭಾಷಾ ಮಂದಾಕಿನಿಯ ಸಂಯೋಜಕರಾಗಿ ಒಂದು ಸಾವಿರ (1000) ಎಪಿಸೋಡುಗಳನ್ನು ಹೊಂದಿರುವ **Visual Encyclopedia of Kannada Universe** ಎಂಬ ಕನ್ನಡ ನಾಡಿನ ಸಾಂಸ್ಕೃತಿಕ, ಚಾರಿತ್ರಿಕ, ಸಾಹಿತ್ಯಿಕ ವೈವಿಧ್ಯಗಳನ್ನು ಇಡೀ ದೇಶಕ್ಕೆ ತಿಳಿಸಿಕೊಡುವ ಕಾರ್ಯಕ್ರಮದ ರೂವಾರಿಯಾಗಿದ್ದಾರೆ. ಅಲ್ಲದೇ ಇವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರೂ ಆಗಿದ್ದರು (1995-98). ಮಲೇಷಿಯಾ, ಸಿಂಗಾಪುರ, ಜರ್ಮನಿ, ಫ್ರಾನ್ಸ್, ಶ್ರೀಲಂಕಾ ದೇಶಗಳಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ್ದಾರೆ.


ಮಾರ್ಕ್ಸ್‌ವಾದ ಇವರನ್ನು ಗೊಡ್ಡು ಮಾಡಿಲ್ಲ. ಯಾವುದೇ ವಾದವೂ ಒಂದು ಹಿನ್ನಲೆಯಾಗಿದ್ದಾಗ ಆಲೋಚನಾಕ್ರಮಕ್ಕೆ ಅಡಿಪಾಯವಾಗಿ ನಿಂತಿರುತ್ತದೆ. ಮತ್ತೆಲ್ಲಾ ಕ್ರಿಯಾತ್ಮಕತೆಗೂ ಆಧಾರಸ್ತಂಭವಾಗಿರುತ್ತದೆ ಎಂಬುದು ಹಳೆಮನೆಯವರ ನಿಲುವು. ಇವರು ಇದ್ದ ಕಡೆ ಎಳೆಯರು, ತರುಣರು, ಮುತ್ಸದ್ದಿಗಳು ಸೇರಿಯೇ ಇರುತ್ತಾರೆ. ಅವರೆಲ್ಲರಿಗೂ ದಾರಿ ತೋರಿಸುತ್ತಾ ವಿಮರ್ಶೆ ಮಾಡುತ್ತಾ ಜೊತೆಗೆ ಸ್ವವಿಮರ್ಶೆಗೂ ತೊಡಗುವ ವ್ಯಕ್ತಿತ್ವ ಹಳೆಮನೆಯವರದು. ಅವರ ಮಾರ್ಗದರ್ಶನ ಸಮಾಜಕ್ಕೆ ಎಂದಿಗಿಂತಲೂ ಈಗ ಹೆಚ್ಚಾಗಿ ಬೇಕಾಗಿದೆ. ಅರವತ್ತು ತುಂಬಿದ ಹಳೆಮನೆಯವರಿಗೆ ಈ ಎಲ್ಲಾ ಶಕ್ತಿಗಳು ಅವರ ... ನಡೆಸಬೇಕು ಎಂದು ಈ ಸಂದರ್ಭದಲ್ಲಿ ನಾವೆಲ್ಲಾ ಆಶಿಸೋಣ.

● ಕಿಕ್ಕೇರಿ ನಾರಾಯಣ

ವಿ.ಕ. ಸಂಪಾದಕರ 'ಇಮೋಶನಲ್ ಅತ್ಯಾಚಾರಗಳು'

ಅತಿಹೆಚ್ಚು ಸುಳ್ಳು ಹೇಳುವ ಕನ್ನಡ ದಿನಪತ್ರಿಕೆ ಯಾವುದು? ಸ್ಪರ್ಧೆಯ ಮುಂಚೂಣಿಯಲ್ಲಿ-ಉದಯವಾಣಿ (ಮಣಿಪಾಲ ಆವೃತ್ತಿ) ಮತ್ತು ವಿ.ಕ. ಇರುವುದರಿಂದ ನಿಖರವಾಗಿ ಹೇಳುವುದು ಕಷ್ಟ. ಎರಡು ಪತ್ರಿಕೆಗಳ ಸಂಪಾದಕರಲ್ಲಿ ಯಾರು ಹೆಚ್ಚು ಸೋಗಲಾಡಿ? ತನ್ನ ಶಂಖ ತಾನೇ ಹೆಚ್ಚು ಊದಿಕೊಳ್ಳುವ ದಾಸಯ್ಯ ಯಾರು? ಈ ಪ್ರಶ್ನೆಗಳಿಗೆ ಉತ್ತರಿಸುವುದು ಕಷ್ಟವೇನಲ್ಲ. ಸ್ಪರ್ಧೆಯ ಕಣದಲ್ಲಿ ವಿ.ಕ. ಸಂಪಾದಕ ಒಬ್ಬರೇ ಇದ್ದಾರೆ. ಇನ್ನೊಂದು ಪತ್ರಿಕೆಗೆ ಸಂಪಾದಕ ಇರುವುದು ಹೆಸರಿಗೆ ಮಾತ್ರ. ವಿ.ಕ. ಸಂಪಾದಕರಿಗೆ ಅವರ ಪತ್ರಿಕೆಯ ಹೆಸರಿನಲ್ಲೇ 'ವಿಜಯ' ಎಂದು ಇರುವುದಕ್ಕೋ ಏನೋ, ಸೋತವರನ್ನು ಕಂಡರೆ ಎಲ್ಲಿಲ್ಲದ ತಿರಸ್ಕಾರ.

ತಮ್ಮ ದೇವರನ್ನು ಪೂಜಿಸದ, ತಮ್ಮ ಹಾಗೆ ಯೋಚಿಸದ "ಅನ್ಯಮತೀಯ"ರ ಕುರಿತ ದ್ವೇಷ ಪ್ರತಿಪಾದನೆಗೆ ಇವರ ಪತ್ರಿಕೆಯೇ ದಿನನಿತ್ಯದ ಕರಪತ್ರ. ಅತ್ಯಧಿಕ ಪ್ರಸಾರದ ಕನ್ನಡ ದಿನಪತ್ರಿಕೆಯನ್ನು ಫ್ಯಾಸಿಸಂನ ಪ್ರಚಾರಕ್ಕೆ ತೆರವು ಮಾಡಿಕೊಡುವುದರ ಜೊತೆ, ಈ ಸಂಪಾದಕರು ಮೊದಲೇ ಸೋತು ನೆಲಕಚ್ಚಿದವರನ್ನು ಮೆಟ್ಟಿ ತುಳಿದು ಗಹಗಹಿಸಿ ನಗುವ ಫ್ಯಾಸಿಸಂನ ಅಮಾನುಷತೆಯನ್ನೂ ಮೈಗೂಡಿಸಿಕೊಂಡಿದ್ದಾರೆ. ಕಳೆದ ಸೆಪ್ಟಂಬರ್ ತಿಂಗಳಲ್ಲಿ ನಡೆದ ಚರ್ಚ್ ದಾಳಿಗಳ ನಂತರ, ಈ ಸಂಪಾದಕ, ಸತತವಾಗಿ ಒಂದು ತಿಂಗಳ ಕಾಲ, ತನ್ನ ಪತ್ರಿಕೆಯಲ್ಲಿ ಕ್ರೈಸ್ತ ಸಮುದಾಯದ ವಿರುದ್ಧ ನಡೆಸಿದ ದೈವನಿಂದನೆ, ಜನಾಂಗ ನಿಂದನೆ ಮತ್ತು ಅಪಪ್ರಚಾರಗಳ ಅಭಿಯಾನವನ್ನು ನೆನಪಿಸಿಕೊಳ್ಳಿ. ಅನಂತಮೂರ್ತಿ ವಿರುದ್ಧ ವಿಜಯ ಕರ್ನಾಟಕದಲ್ಲಿ ನಡೆದ ಎಸ್‌ಎಂಎಸ್ ವಾಗ್ದಾಳಿಯನ್ನು ನೆನಪಿಸಿಕೊಳ್ಳಿ.


8
ವಿಶ್ವೇಶ್ವರ ಭಟ್
ರ.ಕೃ. ರೆಡ್ಡಿಯೂ, ಜ.ರಾ. ಕಲ್ಮನೆಯೂ...

ಪತ್ರಿಕೆಯೊಂದು ತಾನೇ ನಡೆಸುವ ಇಂತಹ ವಾಗ್ವಾದಗಳಲ್ಲಿ ಎದುರಾಳಿ ಅಸಹಾಯಕ ಎಂದು ಗೊತ್ತಿದ್ದೇ ವಿ.ಕ. ಸಂಪಾದಕರು ಅಂತಹವರನ್ನು ನೆಲಕ್ಕೆ ಕೆಡವಿ ಅಟ್ಟಹಾಸದಲ್ಲಿ ನಗುತ್ತಾರೆ. ಈಗ ಈ ಅಲ್ಪನಿಂದ ಇಕ್ಕಿಸಿಕೊಳ್ಳುವ ಸರದಿ ವಿಕ್ರಾಂತ ಕರ್ನಾಟಕ ವಾರಪತ್ರಿಕೆಯ ರವಿಕೃಷ್ಣಾ ರೆಡ್ಡಿಯವರದ್ದು. ಇದೇ ತಾ. 29.3.09 ರ ಭಾನುವಾರದ ವಿ.ಕ. ಸಂಚಿಕೆಯಲ್ಲಿ ಬರುವ ಲೋಕಸಭಾ ಚುನಾವಣೆಯ ಅಭ್ಯರ್ಥಿಯಾಗಿರುವ ಜಗದೀಶ ರಾವ್ ಕಲ್ಮನೆ ಎಂಬ ಅನಿವಾಸಿ ಕನ್ನಡಿಗನ ಹುಂಬತನದ ಬಗ್ಗೆ ಬರೆದಿದ್ದಾರೆ. ಜೊತೆಗೆ ಅವರು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬೆಂಗಳೂರು ಜಯನಗರ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ವಿಕ್ರಾಂತ ಕರ್ನಾಟಕ ವಾರಪತ್ರಿಕೆಯ ರವಿಕೃಷ್ಣಾ ರೆಡ್ಡಿಯವರನ್ನೂ ತನ್ನ ಮಾತಿನಲ್ಲಿ ಎಳೆದು ತಂದಿದ್ದಾರೆ. ವಿ.ಕ. ಸಂಪಾದಕರ ಬಾಯಿಯ ತಾಂಬೂಲವಾಗಲು ರವಿಕೃಷ್ಣಾ ರೆಡ್ಡಿ ಮಾಡಿದ್ದಾದರೂ ಏನು?

1. ವಿ.ಕ. ಸಂಪಾದಕರ ಅನುಮತಿ ಇಲ್ಲದೆ ರವಿ ಕೃಷ್ಣಾ ರೆಡ್ಡಿ ಅಮೆರಿಕದಿಂದ ಬೆಂಗಳೂರು ಜಯನಗರದವರೆಗೆ ಬಂದು ಅಲ್ಲಿ ಬಿಜೆಪಿ ಅಭ್ಯರ್ಥಿ ವಿರುದ್ಧ ಸ್ಪರ್ಧಿಸಿದ್ದು
2. ಚುನಾವಣೆಯ ವೆಚ್ಚಕ್ಕೆಂದು ರವಿಕೃಷ್ಣಾ ರೆಡ್ಡಿ ತನ್ನ ಸ್ನೇಹಿತರಿಂದ ಸಂಗ್ರಹಿಸಿದ 4.20 ಲಕ್ಷ ರೂಪಾಯಿಯ ಲೆಕ್ಕವನ್ನು ವಿ.ಕ. ಸಂಪಾದಕರಿಗೆ ಕೊಡದೆ ಇದ್ದದು.
3. ಆ ಚುನಾವಣೆಯಲ್ಲಿ ರವಿಕೃಷ್ಣಾ ರೆಡ್ಡಿ 'ಎರಡೂ ನೂರು ಚಿಲ್ಲರೆ' ಮತಗಳನ್ನು ಪಡೆದುಕೊಂಡದ್ದು.

ಈ 'ಅಪರಾಧ'ಗಳ ಪೈಕಿ, ಮೊದಲ ಎರಡಕ್ಕೆ ರವಿಕೃಷ್ಣಾ ರೆಡ್ಡಿ ಚುನಾವಣೆ ಆಯೋಗಕ್ಕೆ ಮಾತ್ರ ಉತ್ತರದಾಯಿ. ಉಳಿದವರಿಗೆ ಅವರಿಗೆ ವಿವರಣೆ ನೀಡಬೇಕಾದ ಆಗತ್ಯವಿಲ್ಲ. ವಿ.ಕ. ಸಂಪಾದಕರ ಪ್ರಕಾರ ರವಿಕೃಷ್ಣಾ ರೆಡ್ಡಿ ಜಯನಗರ ಕ್ಷೇತ್ರದಲ್ಲಿ 200 ಚಿಲ್ಲರೆ ಮತ ಪಡೆದುಕೊಂಡು ತನ್ನ ಡಿಪಾಜಿಟ್ಟಿನ ಜೊತೆಗೆ ಮಾನವನ್ನೂ ಕಳೆದುಕೊಂಡಿದ್ದಾರೆ. ಆದರೆ ಚುನಾವಣೆಯ ಈ ಲೆಕ್ಕಾಚಾರದಲ್ಲಿ ನಿಜಕ್ಕೂ ಮಾನಗೆಟ್ಟವರು ಯಾರು? ರವಿಕೃಷ್ಣಾ ರೆಡ್ಡಿಯೋ, ಜಯನಗರದ ಸುಶಿಕ್ಷಿತ ಮತದಾರ-ಅಥವಾ ವಿ.ಕ. ಸಂಪಾದಕರೋ? ಆ ಕ್ಷೇತ್ರದಲ್ಲಿ ರವಿಕೃಷ್ಣಾ ರೆಡ್ಡಿಗೆ ಪ್ರತಿದ್ವಂದ್ವಿಗಳಾಗಿದ್ದ ಎರಡು ಪ್ರಮುಖ ಪಕ್ಷಗಳ ಅಭ್ಯರ್ಥಿಗಳು ಕೋಟಿಗಟ್ಟಲೆ ಹಣ ಖರ್ಚು ಮಾಡಿ, ಅವರಲ್ಲಿ ಒಬ್ಬ ಗೆದ್ದಿದ್ದಾನೆ. ಅವನು ಮಾನಬಿಟ್ಟವನು ಅಥವಾ ಹಾಸ್ಯಾಸ್ಪದ ಮನುಷ್ಯ ಎಂದು ವಿ.ಕ. ಸಂಪಾದಕರಿಗೆ ಖಂಡಿತ ಅನ್ನಿಸಿರಲಿಕ್ಕಿಲ್ಲ. ಯಾಕೆಂದರೆ ಗೆದ್ದವರನ್ನು ಆರಾಧಿಸುವುದು ಹಾಗೂ ಸೋತವರನ್ನು ತಿರಸ್ಕಾರದಲ್ಲಿ ತುಳಿಯುವುದು ವಿ.ಕ. ಪತ್ರಿಕೆಯ ವೃತ್ತಿಮೌಲ್ಯ.



ಆ ಚುನಾವಣೆಗಳಲ್ಲಿ ತಾನು ಯಾಕೆ ಸ್ಪರ್ಧಿಸುತ್ತಿದ್ದೇನೆ ಎಂದು ತನಗೆ ಗೊತ್ತಿರುವ ಎಲ್ಲರಿಗೂ ರವಿಕೃಷ್ಣಾ ರೆಡ್ಡಿ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದ್ದರು. ಅವರ ಈ ಪ್ರಯತ್ನದಲ್ಲಿ ಪ್ರಾಮಾಣಿಕತೆಯೂ ಇತ್ತು; ಆರ್ತತೆಯೂ ಇತ್ತು. ತನ್ನ ಚುನಾವಣಾ ಪ್ರಚಾರಕ್ಕೆ ಅವರು ಲಭ್ಯವಿರುವ ಎಲ್ಲ ನ್ಯಾಯಯುತ ಹಾಗೂ ಗೌರವಯುತ ಮಾರ್ಗಗಳನ್ನೂ ಅನುಸರಿಸಿದರು. ವಿ.ಕ. ಸಂಪಾದಕರನ್ನು ಭೇಟಿ ಮಾಡಿದ್ದೂ ಚುನಾವಣಾ ಪ್ರಚಾರದ ಅಂತಹ ಒಂದು ಗೌರವಯುತ ವಿಧಾನವಾಗಿತ್ತು. ವಿ.ಕ. ಸಂಪಾದಕ ಈಗ ಅದನ್ನೇ ಆಡಿಕೊಂಡು ನಗುತ್ತಿದ್ದಾರೆ! ನಗಬೇಕಾದ್ದೆ. ದಿ. ಲಂಕೇಶ್ ಹೇಳುತ್ತಿದ್ದ ಹಾಗೆ "ದಗಾಕೋರರ ಜಗತ್ತಿನಲ್ಲಿ ಪ್ರಾಮಾಣಿಕನಾಗಿರುವುದು ಮೂರ್ಖತನ." (ಆದರೆ ತನ್ನ ಈ ಮಾತಿಗೆ ಮೊದಲು ಅವರು "ಪ್ರಾಮಾಣಿಕರ ಜಗತ್ತಿನಲ್ಲಿ ದಗಾಕೋರನಾಗಿರುವುದು ಅನೈತಿಕ" ಎಂದೂ ಹೇಳಿದ್ದರು).

● ಜಿ. ರಾಜಶೇಖರ



ರವಿಕೃಷ್ಣಾ ರೆಡ್ಡಿ ಮತ್ತು ಜಗದೀಶ್ ರಾವ್ ಕಲ್ಮನೆ ಹುಂಬರೇ ಇರಬಹುದು. ಆದರೆ ಚುನಾವಣೆಗೆ ನಿಂತು ಸೋಲುವುದು ಅಪರಾಧವಲ್ಲ; ಅತ್ಯಂತ ಕಡಿಮೆ ಮತಗಳನ್ನು ಪಡೆಯುವುದೂ ಅಪರಾಧವಲ್ಲ. ಚುನಾವಣೆಯಲ್ಲಿ ಗಳಿಸಿದ ಮತಗಳಿಂದ ಅಭ್ಯರ್ಥಿಗಳ ಯೋಗ್ಯತೆ ಅಳೆಯುವುದಂತೂ ಮೂರ್ಖತನವೇ ಸರಿ. ಹಿಂದೆ ಬೆಂಗಳೂರಿನಿಂದ ಲೋಕಸಭೆಗೆ ಸ್ಪರ್ಧಿಸಿದ್ದ ಕವಿ ಗೋಪಾಲ ಕೃಷ್ಣ ಅಡಿಗ ಮತ್ತು ಉತ್ತರ ಕನ್ನಡ ಕ್ಷೇತ್ರದಿಂದ ಸ್ಪರ್ಧಿಸಿದ್ದ ಶಿವರಾಮ ಕಾರಂತ, ಇಬ್ಬರೂ ಭಾರೀ ಅಂತರದಲ್ಲಿ ಸೋತಿದ್ದರು. ಶಿವರಾಮ ಕಾರಂತರಂತೂ ಅವರ ನಂತರದ ಪ್ರತಿಸ್ಪರ್ಧಿ ಚಲನಚಿತ್ರ ನಟ ಅನಂತನಾಗ್ ಅವರಿಗಿಂತಲೂ ಕಡಿಮೆ ಮತ ಪಡೆದುಕೊಂಡು ಮೂರನೆಯ ಸ್ಥಾನದಲ್ಲಿದ್ದರು. ಹಾಗೆಂದು ವಿ.ಕ. ಸಂಪಾದಕರು ಕನ್ನಡದ ಆ ಇಬ್ಬರು ಧೀಮಂತರ ಮುಖಕ್ಕೂ ಮಂಗಳಾರತಿ ಮಾಡುವವರೋ?

ವಿ.ಕ. ಸಂಪಾದಕರ ಪ್ರಕಾರ ರವಿಕೃಷ್ಣಾ ರೆಡ್ಡಿ ಮತ್ತು ಜಗದೀಶರಾವ್ ಕಲ್ಮನೆ 'ಲೂಸು'ಗಳು ಹಾಗೂ ಅವರಿಬ್ಬರಿಂದ ವಿ.ಕ. ಪತ್ರಿಕಾ ಸಿಬ್ಬಂದಿ ಸಖತ್ತು ಮನರಂಜನೆ ಪಡೆದುಕೊಂಡಿದೆ. ಚುನಾವಣೆಗಳನ್ನು ಗೆಲ್ಲುವುದಕ್ಕಾಗಿ ಜನರನ್ನು ಕೊಲ್ಲಲು ಹಿಂದೆಮುಂದೆ ಯೋಚಿಸದ ಮೋದಿ, ಅಧ್ವಾಣಿ ವಗೈರೆಗಳು ಆ ಪತ್ರಿಕೆಯ ಹೀರೋಗಳಾಗಿರುವುದರಿಂದ ವಿ.ಕ.ದ ಸಂಪಾದಕ ಮತ್ತು ಅವರ ಸಿಬ್ಬಂದಿಗೆ ಮನರಂಜನೆ ಒದಗಿಸುವ ಚಟುವಟಿಕೆಗಳ ಕುರಿತು ಯೋಚಿಸಲೂ ಭಯವಾಗುತ್ತದೆ. ವಿ.ಕ. ಸಂಪಾದಕರು ಲೂಸೂ ಅಲ್ಲ, ಮೆಂಟಲ್ ಕೇಸು ಕೂಡ ಅಲ್ಲ ಎಂದೇ ಇಟ್ಟುಕೊಂಡರೂ ಅವರ ಪತ್ರಿಕೆಯಿಂದ ನಮ್ಮಂತಹವರು ಪಡೆಯುವ ಮನರಂಜನೆಯ ಬಗ್ಗೆ ಪ್ರಾಯಶಃ ಅವರಿಗೆ ಗೊತ್ತಿಲ್ಲ. ವಿ.ಕ. ಪ್ರತಿನಿತ್ಯ ಕೋಮುದ್ವೇಷದ ವಿಷವನ್ನು ಎಂತಹ ಹಾಸ್ಯಾಸ್ಪದ ಸುಳ್ಳುಗಳ ಜೊತೆ ಬೆರೆಸಿ, ತನ್ನ ಓದುಗರಿಗೆ ಉಣಬಡಿಸುತ್ತದೆ ಎನ್ನುವುದಕ್ಕೆ ಒಂದು ಉದಾಹರಣೆ, ವಿ.ಕ. ಸಂಪಾದಕರ ಮೇಲೆ ಹೇಳಿದ ಹೀನ ಅಭಿರುಚಿಯ ಬರಹ ಪ್ರಕಟವಾದ ದಿನ, ಅದೇ ಸಂಚಿಕೆಯ ಇನ್ನೊಂದು ಪುಟದಲ್ಲಿ (ಮಂಗಳೂರು ಆವೃತ್ತಿಯ ಪುಟ 2) ಪ್ರಕಟವಾಗಿರುವ ಈ ವರದಿಯಲ್ಲಿದೆ. ವಿ.ಕ.ದ ಹಸಿಸುಳ್ಳು (ಈ ಘಟನೆಯನ್ನು ವರದಿ ಮಾಡಿದ ಉದಯವಾಣಿಯೂ ಈ ಸುಳ್ಳನ್ನು ರಿಪೀಟ್ ಮಾಡಿದೆ) ಸುದ್ದಿ ಶೀರ್ಷಿಕೆಯಿಂದಲೇ ಪ್ರಾ... ವಾಗುತ್ತದೆ. "ಗೋಸಾಗಾಟ ವೇಳೆ ಅಪಘಾತ" ... ಸುದ್ದಿ ಶೀರ್ಷಿಕೆಯ ಈ ಅಪಘಾತವನ್ನು ... ಮಾಡಿದವರು ಕುಂದಾಪುರ ಪೊಲೀಸು ಠಾಣೆಯ... ಈ ಪೊಲೀಸು ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಕುಂದಾಪುರ... ಐಸ್‌ಕ್ರೀಮ್ ಪಾರ್ಲರ್ ಒಂದರಲ್ಲಿ ಕೆಲವು ದಿನ... ಕೆಳಗೆ ಹಿಂದೂ ಹುಡುಗಿಯರ ಜೊತೆ ಐಸ್‌ಕ್ರೀ... ತಿಂದ ತಪ್ಪಿಗೆ ಮುಸ್ಲಿಮ್ ವಿದ್ಯಾರ್ಥಿಗಳನ್ನು ಠಾಣೆ... ಎಳೆದುಕೊಂಡು ಹೋಗಿ ಬಾರಿಸಿದ್ದ. ಗೋಸಾಗಾಟ... ಬಗೆಗಿನ ಮೇಲೆ ಹೇಳಿದ ವಿ.ಕ. ವರದಿಯಲ್ಲಿ ಒ... ಕಾಣಿಸಲಾಗಿದೆ. "ಕುಂದಾಪುರ ವಕ್ವಾಡಿ ಪರಿಸರದ... ಜಾನುವಾರು ಕದ್ದು ಪಿಕ್‌ಅಪ್ ಮಿನಿ ಗೂಡ್ಸ್ ಟೆಂಪೋವೊಂದರಲ್ಲಿ ಹಿಂಸಾತ್ಮಕ ರೂಪ... ತುಂಬಿಕೊಂಡು ಸಾಗುತ್ತಿದ್ದ ... ರನ್ನು ಕುಂದಾಪುರ ಪೊಲೀಸ... ಶನಿವಾರ ಬೆಳಗ್ಗಿನ ಜಾವ ಬಂಧಿ... ದ್ದಾರೆ. ಜಾನುವಾರ ಸಾಗಾಟ... ಸಂದರ್ಭದಲ್ಲಿ ಅಪಘಾತ ಸಂಭ... ಸಿದ್ದೇ ಪ್ರಕರಣ ಬೆಳಕಿಗೆ ಬರ... ಕಾರಣವಾಯಿತು."

> ತಮ್ಮ ದೇವರನ್ನು ಪೂಜಿಸದ, ತಮ್ಮ ಹಾಗೆ ಯೋಚಿಸದ "ಅನ್ಯ ಮತೀಯ"ರ ಕುರಿತ ದ್ವೇಷ ಪ್ರತಿಪಾದನೆಗೆ ವಿ.ಕ. ಪತ್ರಿಕೆಯೇ ದಿನನಿತ್ಯದ ಕರಪತ್ರ. ಅತ್ಯಧಿಕ ಪ್ರಸಾರದ ಕನ್ನಡ ದಿನಪತ್ರಿಕೆಯನ್ನು ಫ್ಯಾಸಿಸಂನ ಪ್ರಚಾರಕ್ಕೆ ತೆರವು ಮಾಡಿಕೊಡುವುದರ ಜೊತೆ, ಈ ಪತ್ರಿಕೆಯ ಸಂಪಾದಕರು ಮೊದಲೇ ಸೋತು ನೆಲಕಚ್ಚಿದವರನ್ನು ಮೆಟ್ಟಿ ತುಳಿದು ಗಹಗಹಿಸಿ ನಗುವ ಫ್ಯಾಸಿಸಂನ ಅಮಾನುಷತೆಯನ್ನೂ ಮೈಗೂಡಿಸಿಕೊಂಡಿದ್ದಾರೆ.

ವಾಸ್ತವವಾಗಿ ಈ ವರದಿಯ... ಗಾಯಾಳುಗಳು ಎಂದು ಹೆಸ... ಲಾದ ಮಂಗಳೂರಿನ ನಜೀ... (30) ಹಾಗೂ ಮಹ್ಮದ್ ಹಸ... (48) ಜಾನುವಾರು ಕಳ್ಳರಲ್ಲ, ಅವರು ಹಲವು ವರ್ಷಗಳಿಂದ ಜಾನುವಾರು ವ್ಯಾಪಾರ ಮಾಡುತ್ತಿದ್ದು ಕುಂದಾಪುರದ ಆಸುಪಾಸಿನ ಹಳ್ಳಿಗಳ ದಲ್ಲಾಳಿಗಳಿಂದ ಜಾನುವಾರು ಖರೀದಿಸಿ, ಮಂಗಳೂರಿಗೆ ಸಾಗಿಸುವುದು ಅವರ ಉದ್ಯೋಗವಾಗಿತ್ತು. ಮೊ... ತಾ. 28.3.09 ರ ರಾತ್ರಿ ಅವರು ಕುಂದಾಪುರದ ವಕ್ವಾಡಿ ಮತ್ತು ಅದರ ಆಕ್ಕಪಕ್ಕದ ಹಳ್ಳಿಗಳ ದಲ್ಲಾಳಿಗಳಿಂದ 11 ಜಾನುವಾರುಗಳನ್ನು ಕ್ರಯಕ್ಕೆ ತೆಗೆದುಕೊಂಡು ತಮ್ಮ ಮಹೀಂದ್ರ ಪಿಕ್‌ಅಪ್ ವಾಹನದಲ್ಲಿ ಸಾಗಾಟ ಮಾಡುತ್ತಿದ್ದರು. ಆದರೆ ಅವರಿಗೆ ಜಾನುವಾರು ಮಾರಿದ ಒಬ್ಬ ಆಸಾಮಿಯೇ ಕುಂದಾಪುರದ ಭಜರಂಗಿಗಳಿಗೂ ಸುದ್ದಿ ಮುಟ್ಟಿಸಿದ್ದಾನೆ (ಆದಿ ಉಡುಪಿ ಬೆತ್ತಲೆ ಪ್ರಕರಣದಲ್ಲೂ ಹೀಗೇ ಆಗಿತ್ತು). ಸುಮಾರು ನೂರರಷ್ಟಿದ್ದ ಈ ಭಜರಂಗಿಗಳ ಗುಂಪು ನಜೀರ್ ಮತ್ತು ಹಸನ್‌ರ ವಾಹನವನ್ನು ತಡೆದು ಒಳಗಿದ್ದವರಿಗೆ ಮಾರಣಾಂತಿಕವಾಗಿ ಥಳಿಸಿ ಅವರ ಬಳಿ ಇದ್ದ 25,000 ರೂ. ನಗದು, ವಾಚು ಮತ್ತು ಮೊಬೈಲು ಪೋನುಗಳನ್ನು ದೋಚಿದೆ. ನಜೀರ್ ಅವರ ಎರಡೂ ಕಾಲುಗಳ ಎಲುಬು ತುಂಡಾಗಿದೆ; ಹಸನ್ ಅವರ ಮುಖದ ಎಲುಬು ಜಖಂ ಆಗಿದ್ದು ಮೂಗಿನ ಎಲುಬು ಮುರಿದಿದೆ. ಇಬ್ಬರಿಗೂ ಮೈಮೇಲೆಲ್ಲ ಹೊಡೆತ ಬಿದ್ದಿದೆ.

ಆದರೆ ಕುಂದಾಪುರ ಪೊಲೀಸರು ಹಾಗೂ ಭಜರಂಗಿಗಳ ಜೊತೆ ಶಾಮೀಲಾಗಿ ವಿ.ಕ. ಮತ್ತಿತರ ಪತ್ರಿಕೆಗಳು ಈ ಸತ್ಯಸಂಗತಿಯನ್ನು ಓದುಗರಿಂದ ಮುಚ್ಚಿಟ್ಟು ರಸ್ತೆ ಅಪಘಾತ ಮತ್ತು ಜಾನುವಾರು ಕಳ್ಳತನದ ಕಟ್ಟುಕತೆಯನ್ನು ವರದಿ ಎಂಬಂತೆ ಪ್ರಕಟಿಸಿವೆ. ವಿ.ಕ. ಉದಯವಾಣಿ ಮತ್ತು ಇತರ ಪತ್ರಿಕೆಗಳು ಜಾನುವಾರು ಕಳ್ಳತನದ ಈ ಬಗೆಯ ಸುಳ್ಳು ಸುದ್ದಿಗಳನ್ನು ಒಂದು ಅ... ಯಮಿತ ಸೀರಿಯಲ್‌ನಂತೆ ಮೇಲಿನಿಂದ ಮೇ... ಪ್ರಕಟಿಸುತ್ತಲೇ ಇರುತ್ತವೆ. "ಮುಸ್ಲಿಮ್ ವ್ಯಾಪಾರಿಗಳು ಸಾಗಿಸುವ ಜಾನುವಾರುಗಳೆಲ್ಲವೂ ಅವರು ಕದ್ದಿರುವುದೇ ಹೊರತು ಕ್ರಯಕೊಟ್ಟು ರೈತರಿಂದ ಪಡೆದುಕೊಂಡಿರುವು... ಹವಲ್ಲ ಹಾಗೂ ರೈತರು, ಅದರಲ್ಲೂ ಹಿಂದೂ ರೈತರು ತಮ್ಮ ಗೊಡ್ಡು ಹಸು ಎಮ್ಮೆಗಳನ್ನು, ಮುದಿ ಮತ್ತು ಕೋಣಗಳನ್ನು ಮಾರುವುದೇ ಇಲ್ಲ" ಎಂಬ ಹಸಿ ಸುಳ್ಳು... ಕರಾವಳಿಯ ಭಜರಂಗಿಗಳ ಜೊತೆ ಇಲ್ಲಿನ ಮತಾಧೀಶ... ಪತ್ರಿಕೆಗಳು ಮತ್ತು ಪೊಲೀಸರು ದನಿಗೂಡಿಸಿ ಜನ... ಕಾಮನ್‌ಸೆನ್ಸ್ ಆಗುವಂತೆ ಮಾಡಿದ್ದಾರೆ. ಹಾಗಾಗಿ ಗೋರಕ್ಷಣೆಯ ಹೆಸರಿನಲ್ಲಿ ಕರಾವಳಿಯಲ್ಲಿ ಎಂತಹ ಅಮಾನುಷ ಹಿಂಸೆ ನಡೆದರೂ ಪೊಲೀಸರು ಅಪರಾಧಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದಿಲ್ಲ. ಪತ್ರಿಕೆಗಳು ಅಂತಹ ಘಟನೆಗಳ ಕ್ರಿಮಿನಲ್ ಸ್ವರೂಪವನ್ನು ಕಾಣಿಸುವುದೇ ಇಲ್ಲ.

ವಿ.ಕ. ಸಂಪಾದಕರಂತೂ ಹಿಂದೂ ವೀರರ ಈ ಬಗೆಯ ಹಿಂಸಾಚಾರವನ್ನು ಸಮರ್ಥಿಸುವ ... ವೀರ. ಅವರಷ್ಟು ಹಾಸ್ಯಾಸ್ಪದ ವ್ಯಕ್ತಿ ಬೇರೆ ಯಾರಿದ್ದಾರೆ...

ಹಾಯ್ಕು
ಜುಗಲ್ ಬಂದಿ

ಸಾವು-1

ಅಶಾಶ್ವತತೆ
ಬದುಕು
ಶಾಶ್ವತತೆ ಸಾವು......


ಮನದ ಹರೆಯ
ಬದುಕಿನ ಹೊಳೆ
ಸಾವನ್ನು ಕೊಚ್ಚಿ ಸಾಗುತ್ತದೆ

ಅವಳ ಕಣಕಣದಲ್ಲಿ
ಬದುಕು ಅರಳುತ್ತದೆ
ಸಾವು ಸೋಲುತ್ತದೆ

ಬದುಕಿನ ಹನಿಗಳು
ಸಾವಿನ ಪಾತ್ರೆಯನ್ನು
ತುಂಬುತ್ತಿವೆ

ಇನಿಯಳ ತೋಳ್ತೆಕ್ಕೆಯಲ್ಲಿ
ಸಾವು
ಬದುಕುತ್ತದೆ

● ಡಾ. ಸಿ. ರವೀಂದ್ರನಾಥ್, ಮೈಸೂರು



ಸಾವು-2

ಮೊದಲ ಮಳೆಯ ದಿನ
ನಿನ್ನ ಸಾವು
ಮರುಹುಟ್ಟಿನ ಸಾಕ್ಷಿ

ಜೀವಂತವಾಗಿ ಇರುವವರಿಗೆ
ಬದುಕಿನೊಂದು
ಸತ್ಯದ ಅನಾವರಣ; ಸಾವು

ಸಾವಿಗೆದುರಾಗಿ
ಗೆದ್ದವರುಂಟೆ
ಪ್ರೀತಿಯ ವಿನಹ?

ಸಾವು ನಮ್ಮೊಳಗೆ ಕರಗುತ್ತದೆ
ಪ್ರೀತಿಯಾಗಿ
ರೂಪ ಪಡೆಯುತ್ತದೆ

ನನ್ನ ಭಯ ಸಾವಲ್ಲ
ಕನಸುಗಳ ಕಟ್ಟದೆಯೆ
ಕಳೆವ ಬದುಕು

● ಜ.ನಾ. ತೇಜಶ್ರೀ, ಹಾಸನ

(ಹೈಕು ಕವಿ ಡಾ. ರವಿ ಮತ್ತು ಯುವ ಕವಯಿತ್ರಿ ತೇಜಶ್ರೀ ಸಾವನ್ನು ಕುರಿತು ಬರೆದಿರುವ ಹೈಕುಗಳ ಜುಗಲ್‌ಬಂದಿ ಇದು)

...ದ್ರೇಗೌಡ ದತ್ತಮಾಲೆ ಆಯ್ಕಂಡು ಅತ್ತಮುಂದಾಗೇ ಹೋದನಂತೆ

...ವುನ್ಯಾರ್ಲ ಉಗ್ರಿ ವಲ್ಲೆ ಯಮ್ಮತ್ತಂಗೆ ...ದ್ನ?" ಎಂದಳು ಜುಮ್ಮಿ.

...ಳತಾಯಿದ್ನೆ?"

...ಲಿ ಕಂಡ್ಯ, ಇನ್ನೆಲ್ಲಿ ನೋಡಕ್ಕಾದತು ನಾವು." ...ನು ಚಾಮರಾಜನಗರದ ಶಿವಣ್ಣ ಕಣೆ. ಪಾಪ ...ದ್ನ. ಆಮೇಲೆ ಕಾಂಗ್ರೆಸ್‌ಗೋಗಿದ್ನ. ತಿಕೆಟ್ ...ಅಂತ ಕಾದ. ಕೊಡ್ಲಿಲ್ಲ, ಅದ್ಕೆ ಪಾಪ ಅಳತಾ

...ಟು ಸಿಗಲಿಲ್ಲ ಅಂದ್ರೆ ಅಳತರೇನ್ಲ?" ಎಂದ ...ಪ.

ಕಣಮಾವ, ರಾಜಕಾರಣಿಗಳು ಆ ಲ್ಯವೆಲ್ಲಿಗೆ ...ಗ್ಯವುರೆ"

...ಷ್ಟ ಸಿಗಲಿಲ್ಲ ಅಂದ್ರೆ ಶಪ್ಪಂದೋದ್ನು ಅಂತ ...ಕ್ಕಾಗದೆ. ಅದಕೆ ಅಳತ ಕುಂತವುನೆ. ಅಂದ್ರೆ ...ತ ಇವನಿದ್ದನೂ?"

...ಣ್ಣೇನೊ ತಿಕೀಟು ಸಿಗಲಿಲ್ಲ ಅಂತ ಅಳತ ... ಚಂದ್ರೇಗೌಡ ಕಾಂಗ್ರೆಸ್‌ನೆ ಬುಟ್ಟು ವಂಟವುನೆ

...ದ್ರಾಗಾಂಧಿಗೆ ಸೀಟು ಬುಟ್ಟು ...ಣ್ಣಾ ಆ ಚಂದ್ರೇಗೌಡ್ನೆ?"

ಕಣಮಾವ."

...ನಿಗೇನು ಬತ್ಲ? ಭಾಳ ತೂಕವಾಗಿ ...ಇದ್ದ."

...ಕವಾಗಿ ಮಾತಾಡಿ, ಮಾತಾಡಿದಂಗೆ ...ಗದೆ ಈಗ ಹಗುರಾಗ್ಯವುನೆ. ಅದ್ಕೆ ...ದಿಕೆ ವಂಟವುನೆ."

ಲ್ಯಕ್ಕದಲ್ಲಿ ಬಿಜೆಪಿಲಿದ್ರೆ ಹಗುರಾಗಿ ...ಬವುದು ಅನ್ನು" ಎಂದ ಸೀರ.

ಕಣೊ, ಆ ಬಿಜೆಪಿ ಯಾವನಾರ ...ಗೆ ಮಾತಾಡ್ಯನೆ? ಅಂತ ಪಾರ್ಟಿಗೆ ...ಪರವಾಗಿಲ್ಲ ಅನ್ನೊ ಸೋಮಣ್ಣನೂ ..."

...ಮಣ್ಣ ವಂಟಿರದ್ರಲ್ಲಿ ಆಶ್ಚರ್ಯ ...ಲ್ಲಾ ಕಣೊ ಉಗ್ರಿ. ಅವುನಾಗ್ಲೆ ಒಂದು ...ಕಡಿಕಿಟ್ಟಿದ್ದ. ಆತ್ಮ ಬಿಜೆಪಿಲಿ ಹಾರಾಡ್ತಯಿದ್ರೆ, ...ಶ್ ಬಾಡಿತರ ಕಾಂಗ್ರೆಸ್ಸಲಿತ್ತು ಅಷ್ಟೆ" ಎಂದ

...ಊ ನಿಜವೆ ಬುಡು. ಇವತ್ತು ಅಂಗೇ ನೋಡಿದ್ರೆ ... ಎಡೂರಪ್ಪನ ಬಾಮ್ಮೈದ ಕಂಡಂಗೆ ಕಾಣ್ತನೆ." ...ನೇನೋ ಎಡೂರಪ್ಪನ ಬಾವಮೈದನಂಗೆ ... ಚಂದ್ರೇಗೌಡ?"

...ದ್ರೇಗೌಡ ಯಾವತ್ತು ಯಾರಿಗೂ ಸಮಂದಿಯಲ್ಲ. ...ವಂಗೆ ನಡೆದುಕೊಳ್ಳೊ ಯಿಲ್ಲ" ಎಂದ ವಾಟಿಸ್ಸೆ. ...ನು ತೂಕವಾದ ಮನ್ಸಕಂಡ್ಯ, ಇದ್ದಿದ್ರಲ್ಲೆ

... ದ್ವಡಪ್ಪನಿಗೆ ಚಂದ್ರೇಗೌಡ ಮ್ಯಾಟ್ರು ಗೊತ್ತಿಲ್ಲ ...ಣ್ತದೆ. ವಸಿ ಹೇಳು."

"ನೀನೆ ಹೇಳೊ ವಾಟಿಸ್ಸೆ."

"ದ್ವಡಪ್ಪಾ, ಚಂದ್ರೇಗೌಡ ಈ ಟೇಮಲ್ಲಿ ಈ ತರ ನ್ಯಡಕತ್ತಾಯಿರದು ಹಂಡ್ರೆಡ್ ಪರಸೆಂಟ್ ಸರಿ. ಯಾಕೆ ಅಂದ್ರೆ ದೇವರಾಜ ಅರಸುಗೆ ರಾತ್ರಿ ಹನ್ನೆರಡು ಗಂಟೆಗೆ ಕೈಕೊಟ್ಟು ಹೋದೋನವುನು. ಯಾರಾರ ಹೋಗ್ಲಿ, ಚಂದ್ರೇಗೌಡ್ರು ನನ್ನ ಜ್ವತೆ ಇರತರೆ ಅಂತ ಅರಸು ನಂಬಿಕಂಡಿದ್ರು. ಆದ್ರು ಹೋದದ್ನ ನೋಡಿ ಅರಸು ಕಣ್ಣು ನೀರಾಡಿದವಂತೆ. ಅಂತ ಚಂದ್ರೇಗೌಡ ಅಧಿಕಾರ ಎಲ್ಲಿರತದೊ ಅಲ್ಲಿರತನೆ."

"ಅಂಥೊನೇನ್ಲ ಅವುನೂ?"

"ಊ ದ್ವಡಪ್ಪ, ಮನಮೋಹನ ಸಿಂಗನಂತ ಸಪ್ಪುಲು ಮನ್ಸ ತಿರಗ ಪ್ರಧಾನಿ ಆಗದಿಲ್ಲ, ಅದ್ವಾನಿ ಆಯ್ತನೆ. ಆಗ ನಾನೂ ಏನಾರ ಆಗನ ಅಂತ ಬಿಜೆಪಿ ಬಾಗಲ ಬಡದ ಅತ್ತಗೆ."

"ಅಲ್ಲಾ, ಕಾಂಗ್ರೆಸಲಿದ್ದು ಎಂಪಿಯಾಗಿ, ಮಂತ್ರಿಯಾಗಿ, ಅಮ್ಯಾಲೆ ಸ್ಪೀಕರ್ ಆಗಿ, ತಿರಗ ಮಂತ್ರಿಯಾಗಿದ್ದ ಚಂದ್ರೇಗೌಡನಿಗೆ ಕಾಂಗ್ರೆಸ್ ಪಾರ್ಟಿ ಇನ್ನೇನು



ಮಾಡಬೇಕಾಗಿತ್ತಪ್ಪ?"

"ನೆಗ್ಲೆಟ್ ಮಾಡಿದ್ರಂತೆ ಕಣೊ ಉಗ್ರಿ ಅವುನ್ನ."

"ನೆಗ್ಲೆಟ್ ಮಾಡದೆ ಇನ್ನೇನು ಮಾಡ್ತರೊ? ತೀರ್ಥಳ್ಳಿಲಿ ಎಮ್ಮೆಲ್ಲೆ ಆಗಿದ್ದೊನು ಜನಗಳತ್ರಕೋಗದೆ ಯಲ್ಲ ಬಿಜೆಪಿಗೋಗಂಗಾಯ್ತು. ಅಲ್ಲಿಂದ ಶೃಂಗೇರಿಗೆ ಬಂದ. ಅಲ್ಲೂ ಅಂಗೆ ಮಾಡಿ ಬಿಜೆಪಿ ಗೆಲ್ಲಂಗಾಯ್ತು. ಇವುನು ಹೋದ ಕಡೆಯಲ್ಲೆಲ್ಲ ಬಿಜೆಪಿ ಗೆಲ್ಲದೆ. ಆದ್ರೆ ಇವುನೇ ಬಿಜೆಪಿಗೋಗದು ವಳ್ಳೆದಲ್ಲವ್ವೆ?"

"ಬ್ರೈಸ್ಮೈಡಿಯಾ! ಕಾಂಗ್ರೆಸ್ ಗೆಲ್ಲದಾದ್ರೆ ಚಂದ್ರೇಗೌಡುನ್ನ ಬಿಜೆಪಿಗೆ ಕಳಸದೆ ವಳ್ಳೇದು."

"ಕಳಸದೇನು ಅವುನೆ ಜಾಗ ಖಾಲಿ ಮಾಡುತ್ತ ಅವುನೆ ಬುಡು. ಎಷ್ಟೇ ಆಗಲಿ ಚಿಕ್ಕಮಗಳೂರು ಬಾಬಾಬುಡನ್ ಗಿರಿಲಿ ಕುತಗಂಡು ಪೂಜೆ ಮಾಡಿ ಗಿರಿ ಸಮಸ್ಯೆ ಉರಿಯಂಗೆ ಮಾಡಿದೋನು ಇವುನೆ ಅಲವೆ? ಇವುನಿರಬೇಕಾದ್ದೆ ಬಿಜೆಪಿಲಿ. ಹೋಗ್ಲಿ ಬುಡತ್ಲಗೆ."

"ಹೋಗಬ್ಯಾಡ ಕಣಪ್ಪ ಇರು ಅಂತ ವಬ್ಬನೂ ಹೇಳಲಿಲ್ಲವಲ್ಲಾ?"

"ಕಟಿಗಳನ ಅಂದ್ರೆ ಕರ ಹಾಕದಿಲ್ಲ, ಮಾರನಾ ಅಂದ್ರೆ ಬ್ಯಲಿ ಬರದಿಲ್ಲ ಅಂತ ಗಿರಾಕಿ ಅವುನು. ಅದ್ಕೆ ಯಾರೂ ತಡಿಲಿಲ್ಲ."

"ಇವುನೇನೊ ಹೋಗ್ಲಿ, ಆ ಶ್ರೀನಿವಾಸನೂ ವಂಟಿದ್ದನಂತಲ್ಲಾ ಹೇಳು?"

"ಸೀನಿವಾಸ ಅಂದ್ಯಾ, ರ್ಯಾರ್ಲ?" ಎಂದಳು ಜುಮ್ಮಿ.

"ಅವುನು ನಿನಿಗೆ ಗೊತ್ತಿಲ್ಲ ಕಣೆ. ಅರಸು ಕಾಲ್ದಲ್ಲಿ ಮ್ಯರದೋನು. ಅವನ ಬುದ್ಧಿವಂತಿಕೆ ನೋಡಿ ದೇವರಾಜ ಅರಸು ಜ್ವತೆಲಿಟಗಂಡಿದ್ದ. ಆದ್ರೆ ಕಾಂಗ್ರೆಸಿನೋರಾಗ್ಲಿ ದಳದೋರಾಗ್ಲಿ ಅವುನ್ನ ಸರಿಯಾಗಿ ಬಳಸಿಗಳ್ಳೇಯಿಲ್ಲ" ಎಂದ ಉಗ್ರಿ.

"ಕಾಂಗ್ರೆಸಿನವು ಅಂಥೋರ್ನ ಬಳಿಸಿಗಳೊ ಕಾಲ ಹೋಯ್ತು ಕಣೊ ಉಗ್ರಿ. ಬಳಸಿಗಳದೆ ಆಗಿದ್ರೆ ಶ್ರೀನಿವಾಸನ್ನ ಸರಿಯಾಗಿ ಬಳಸಿಗಂಡು ಈಸ್ವರಪ್ಪನ್ನೆ ಸೋಲಿಸಬವುದಿತ್ತು. ಅದುಂಬುಟ್ಟು ಮುನಿಸಿಪಾಲಿಟಿಲೂ ಗೆಲ್ಲಕ್ಕಾಗದಂಥೋನಿಗೆ ಟಿಕೆಟ್ ಕೊಟ್ಟು ಶ್ರೀನಿವಾಸನಿಗೆ ಅನ್ಯಾಯ ಮಾಡಿದ್ರೆ ಅವುನ್ಯಾಕಲ್ಲಿದ್ದನೂ?"

"ಸರಿಯಪ್ಪ, ಈಗ ಬಿಜೆಪಿಲಿ ಅವುನಿಗೆ ನ್ಯಾಯ ಸಿಕ್ಯತೆ?"

"ಸಿಗದಿಲ್ಲ, ಆದ್ರು ಶ್ರೀನಿವಾಸನಂಥ ಮನ್ಸ ಅಲ್ಯಂಗಿರತನೊ ಏನೊ. ನಾನು ಅವುನತ್ರ ಒಂದ್ಯರಡ ಸತಿ ಮಾತಾಡಿದ್ದಿನಿ. ಭಾರಿ ಓದಿಕಂಡವುನೆ, ಕವಿ ಬ್ಯಾರೆ. ಅಂಥೊನು ಬಿಜೆಪಿ ಜನಗಳ ಜ್ವತೆ ಯಂಗೆ ಮಾತಾಡ್ತನೆ, ಯಂಗಿರತನೆ ಅಂತ ನನಿಗೇ ಯೋಚನೆ ಬಂದದೆ ಕಣೊ ಉಗ್ರಿ."

"ಶ್ರೀನಿವಾಸನಿಗೇ ಇಲ್ಲದ ಯೋಚನೆ ನಿನಿಗ್ಯಾಕೆ ಬುಡೊ."

"ಅದೂ ನಿಜವೆಯ. ಅಂತು ಮುಂದೆ ಬಿಜೆಪಿಲಿ ಕಾಂಗ್ರೆಸ್‌ನೋರು ಜೆಡಿಎಸ್‌ಯೋರು ಸೇರಿಕಂಡು ಹಳೆ ಚಡ್ಡಿಗಳ ಮೂಲಿಗೆ ತಳ್ಳತರೆ."

"ತಳ್ಳದೇನೊ? ಈಗಾಗ್ಲೆ ನೂಕೇಬುಟ್ಟವುರೆ ಕಣೊ. ಶಿವಪ್ಪ, ಮಲ್ಲಿಕಾರ್ಜುನಯ್ಯ, ಯತ್ನಾಳ್ ಇವುರ್ಯಲ್ಲ ಕೂಗ್ತಾಯಿರದೆ ಆದಕಲವ್ವೆ?"

"ಯತ್ನಾಳ್ ಕಣಯ್ಯ ಗಂಡು. ಅಂಗೆ ವೀರ ಸಿಂಧೂರ ಲಕ್ಷ್ಮಣ ಇಂಗ್ಲಿಷ್‌ನವರ ಎದುರಿಗೆ ತ್ವಡೆ ತಟ್ಟಿದ್ದ ನೋಡು, ಅದೇ ತರ ಎಡೂರ ಸದಾನಂದನ ವಿರುದ್ಧ ತ್ವಡೆ ತಟ್ಯವುನೆ. ಅವುನಿಗೆ ಉತ್ರ ಕೊಡಕ್ಯಾಯ್ತಾಯಿಲ್ಲ, ಹೇಳ್ತೀ ನೀನು."

"ನೋಡು ಮತ್ತೆ ಇನ್ಯಂಥಾ ಗಂಡಿದ್ದನವುನು?"

"ಅವುನ್ನ ಪಾರ್ಟಿಯಿಂದ ತಗಿಯಕ್ಕೂ ಆಯ್ತಾಯಿಲ್ಲ."

"ಅದ್ಯಾಕಾಗದಿಲ್ಲಾ?"

"ಅವುನು ಪಂಚಮಸಾಲಿ ಲಿಂಗಾಯಿತನಂತೆ. ಅವುರ ಸಂಖ್ಯೆನೆ ಜಾಸ್ತಿಯಂತೆ. ಎಡೂರ, ಸದಾನಂದ ಏನಾರ ಯತ್ನಾಳುನ್ನ ತಗುದ್ರೆ ಅವುನ ಕಡಿಯೋರು ಬಿಜೆಪಿಗಳ ಚೆಡ್ಡಿಗೇ ಕೈಯಾಕ್ತರಂತೆ. ಇದಕೇನೇಳ್ತಿ?"

"ಅಂಥೋರು ಜಾಸ್ತಿಯಾದಂಗೂ ಬಿಜೆಪಿಗೆ ಅಪಾಯಲವೇನೊ?"

"ಬಿಜೆಪಿಗೆ ಅಪಾಯಾಗದಂಗೆ ದ್ಯಾವೇಗೌಡ್ರು ನೋಡಿಕತ್ತರೆ ಕಣೊ."

"ಇದೇನೊ ಹಿಂಗಂತೀ?"

"ಅನ್ನದೇನು? ನಿನಿಗೇ ಕಾಣದಿಲವೇನೊ ಉಗ್ರೀ? ಬಿಜೆಪಿಗೆ ಬರೊ ಓಟು ಇಡಿಯಾಗಿ ಬದ್ರೆ, ಕಾಂಗ್ರೆಸಿಗೆ ಬರೋ ವೋಟಿಗೆ ದ್ಯಾವೇಗೌಡ್ರು ಕತ್ತರಿ ಹಾಕ್ತರೆ. ಅಲ್ಲಿಗೆ ದ್ಯಾವೇಗೌಡ್ರೆ ಬಿಜೆಪಿಗೆ ಹೆಲಪ್ ಮಾಡಿದಂಗಾಗದಿಲವೆ?"

"ಅದೂ ನಿಜಬುಡು. ನಾವು ಜಾತಿವಾದಿಗಳ್ಯಲ್ಲ ಒಂದಾಗಿ ಧರ್ಮಾಂಧರ ಸೋಲಿಸಬೇಕು ಅನ್ನೊ ದ್ಯಾವೇಗೌಡ್ರೆ ಬಿಜೆಪಿಗೆ ಸಪೋಟು ಮಾಡದಂಗಾಯ್ತದೆ."

"ಇಪ್ಪತ್ತೆಂಟು ಕ್ಷೇತ್ರಕೂ ಕ್ಯಾಂಡೇಟ್ ಹಾಕ್ತಿನಿ ಅನ್ನೊ ದ್ಯಾವೇಗೌಡ್ರು ಡ್ಯಪನೆಟ್ಲಿ ಇಪ್ಪತ್ತು ಸೀಟುನಾರ ಬಿಜೆಪಿ ಬುಟ್ಟಿಗೆ ಹಾಕ್ತರೆ ಅಂದಂಗಾಯ್ತು."

"ಡ್ಯಪನೆಟ್ಲಿ ನೋಡಿವಿರು."

"ಕಾಂಗ್ರೆಸಿನವು ಹೊಂದಾಣಿಕೆ ಮಾಡಿಕಬೇಕಾಗಿತ್ತು ಕಣೊ."

"ಹೊಂದಾಣಕೆ ಮಾಡಿಕಬೇಕಾಗಿತ್ತು ಸರಿಯಪ್ಪಾ. ದೇಸ ಆಳೊ ಪಾರ್ಟಿ ಕಾಂಗ್ರೆಸ್ಸು. ಅದು ಮಾಡೊ ಚೌಕಾಸಿಯ ಒಪ್ಪಿಗಬೇಕಾಯ್ತದೆ."

"ಅದೇನಾರ ಹಾಳುಬಿದ್ದೋಗಲಿ, ಈ ಸೋನಿಗಾಂಧಿ ಮನವೋಹನ್ ಸಿಂಗನೆ ಮುಂದಿನ ಪ್ರಧಾನಿ ಅನ್ನಬಾರದಿತ್ತು."

"ಯಾಕೆ?"

"ಅವುಳಂಗಂದಿದ್ರಿಂದ ಚುನಾವಣೆ ಕಥರ್‍ರ ಕಡಿಮಾಯ್ತು ಕಣೊ. ಆ ಮ್ಯಾಟ್ರ ಸೋನಿಗಾಂಧಿ ಸಸ್‌ಪೆನ್ಸಾಗಿಟ್ಟಿದ್ರೆ ಚನ್ನಾಗಿರದು."


"ಇರ್ಲಿ ಬುಡು. ಬಿಜೆಪಿಗಳು ಅದ್ವಾನಿನೆ ಮುಂದಿನ ಪ್ರಧಾನಿ ಅಂದವೆ. ಅವುರಿಗೆ ಹೋಲಿಸಿದ್ರೆ ರಂಗನ ಮುಂದೆ ಸಿಂಗನೆ ಅಂತ ಈ ಸಿಕ್ಕಣ್ಣನೆ ಪರವಾಗಿಲ್ಲ ಅನ್ನಂಗಾಗ್ಯದೆ."

"ಡ್ಯಪನೆಟ್ಲಿ!"

...ದೆ ಪರೀಕ್ಷೆ ಬರೆದವರು

...ವತ್ತಿನ ರಾಜಕಾರಣದ ದೊಡ್ಡ ಕಷ್ಟ-ಸೋತವರು ಏನನ್ನೂ ಮಾಡಲು ತೋಚದೆ ಕೈಕಟ್ಟಿ ...ಕೊಳ್ಳುವುದು; ಗೆದ್ದವರು ಅಧಿಕಾರ ಸವಿಯುವುದನ್ನು ಬಿಟ್ಟು ಬೇರೇನನ್ನೂ ಮಾಡದಿರುವುದು. ...ರಣವೆಂದರೆ ಚುನಾವಣೆ ಎಂದು ಆಗಿರುವುದು ಇದಕ್ಕೆ ಕಾರಣ. ನಿಜವಾದ ರಾಜಕಾರಣದಲ್ಲಿ ...ವಣೆ ಪರೀಕ್ಷೆ ಮಾತ್ರ, ಮಿಕ್ಕ ವೇಳೆ ವಿದ್ಯಾರ್ಥಿಯ ಶಿಕ್ಷಣ, ಸಿದ್ಧತೆಯಂತೆ.


...ಂಧೀಜಿ, ಜೆಪಿ ಚುನಾವಣೆಗೆ ನಿಲ್ಲಲಿಲ್ಲ. ಅವರು ಯಾವುದೇ ಪಕ್ಷಕ್ಕೆ ಸೇರಿದರೂ ಜನತೆಯ ಭಾಗಕ್ಕೆ, ದೇಶದ ಒಂದು ಮೂಲೆಗೆ ತಳ್ಳಲ್ಪಟ್ಟಂತೆ ಕಸಿವಿಸಿ ಅನುಭವಿಸುತ್ತಿದ್ದರು. ಅವರ ಬದಿ. ಸಹಜನೂ ಸಾಮಾನ್ಯನೂ ಆದ ಮನುಷ್ಯ ತನ್ನ ರಾಜಕೀಯವನ್ನು ತಾನು ಮತ್ತು ತನ್ನ ಸಮುದಾಯ ಜೀವಿಸುವ ರೀತಿಯಾಗಿ ತೆಗೆದುಕೊಳ್ಳಬೇಕು. ರಾಜಕೀಯ ಆತನ ಬದುಕಿನ ಒಂದು ಸಣ್ಣ ಭಾಗ ಮಾತ್ರ ಆಗಬೇಕು. ಉದಾಹರಣೆಗೆ ಒಬ್ಬ ಫೋಟೋಗ್ರಾಫರ್ ಅಥವಾ ಸಾಹಿತಿ ರಾಜಕಾರಣಿಯಾದೊಡನೆ ತಮ್ಮ ವೃತ್ತಿ ಬಿಟ್ಟುಬಿಟ್ಟರೆ ಆತನ ಬದುಕು ಬಡವಾಗುತ್ತದೆ. ಗೆದ್ದ ರಾಜಕಾರಣಿಗೆ ಮಾಡಲು ಕೆಲವು ಕೆಲಸಗಳಿದ್ದರೆ ಸೋತವನಿಗೆ ಅದಕ್ಕಿಂತ ಹೆಚ್ಚು ಕೆಲಸಗಳಿರಬೇಕು.



ಬೇಸರ, **boredom** ಬರುವುದು ಮನುಷ್ಯನ ವ್ಯಕ್ತಿತ್ವ ಪೊಳ್ಳಾದಾಗ; ನಮ್ಮ ವೃತ್ತಿ, ಹವ್ಯಾಸ, ಕಲೆ, ಸಾಹಿತ್ಯ ಯಾವುದೂ ನಮ್ಮನ್ನು ಹುಮ್ಮಸ್ಸಿನಿಂದ ತುಂಬದೆ ಇದ್ದಾಗ. ಬೇಸರಕ್ಕೆ ಇಂಗ್ಲಿಷ್‌ನಲ್ಲಿ **boredom**ಗಿಂತ ಒಳ್ಳೆಯ ಮಾತಿದೆ. ದಿಕ್ಕುತೋಚದಂತಹ, ಆತ್ಮವನ್ನು ನಾಶಮಾಡುವಂತಹ, ಆತ್ಮಹತ್ಯೆಗೆ ಪ್ರೇರೇಪಿಸುವಂತಹ ಬೇಸರದ ಕ್ಷಣಗಳನ್ನು ENNUI 'ಆನ್‌ವಿ' ಅನ್ನುತ್ತಾರೆ.

ಸೋತ ರಾಜಕಾರಣಿ ಪೊಳ್ಳು ರಾಜಕಾರಣಿಯಾಗಿದ್ದಾಗ ಮಾತ್ರ ಈ ತರಹದ ಬೇಸರ ಆಗುತ್ತದೆ.

ಇಂಗ್ಲಿಷರು




ಮುಂದಿನ ಸಲ ನಾನು ಈಚೆಗೆ ಓದಿದ ಒಂದೆರಡು ಪುಸ್ತಕಗಳ ಬಗ್ಗೆ ಟಿಪ್ಪಣಿ ಮಾಡುವುದಿದೆ. ಈ ಸಲ ಒಂದು ಹಳೇ ಪುಸ್ತಕದ ಒಂದೆರಡು ವಿಷಯಗಳ ಬಗ್ಗೆ ಮಾತ್ರ ಬರೆಯುತ್ತೇನೆ. ಹಳೇ ಪುಸ್ತಕದ ಅಂಗಡಿಯಲ್ಲಿ ಪ್ಯಾಟ್ ಬಾರ್ರ್ ಎಂಬ ವ್ಯಕ್ತಿ ಬರೆದ 'ದಿ ಮೇಮ್ ಸಾಹಿಬ್ಸ್' (ಒಡತಿಯರು) ಎಂಬ ಪುಸ್ತಕ ಸಿಕ್ಕಿತು. ಈ ಪುಸ್ತಕ ವಿವರಿಸುವುದು ಇಂಗ್ಲೆಂಡಿನಿಂದ ಮನಸ್ಸಿಲ್ಲದೆ ಭಾರತಕ್ಕೆ ಬಂದು ತಮ್ಮ ಯಜಮಾನರೊಂದಿಗೆ ನೆಲೆಸಿದ ಹೆಂಗಸರ ಬಗ್ಗೆ. ಭಾರತಕ್ಕೆ ಅಧಿಕಾರಿಗಳಾಗಿ, ಗೌರ್ನರ್‌ಗಳಾಗಿ, ಗೌರ್ನರ್ ಜನರಲ್‌ಗಳಾಗಿ ಬರುತ್ತಿದ್ದವರು ಇಂಗ್ಲೆಂಡಿನ ಶ್ರೀಮಂತ ಲಾರ್ಡ್‌ಗಳು, ಅರ್ಲ್‌ಗಳು. ಅವರ ಹೆಂಡತಿಯರಿಗೆ ಇಂಗ್ಲೆಂಡ್ ಬಿಟ್ಟು ಭಾರತಕ್ಕೆ ಬರಲು ಇಷ್ಟವಿರುತ್ತಿರಲಿಲ್ಲ. **1835** ರಲ್ಲಿ ಲಾರ್ಡ್ ಆಕ್‌ಲ್ಯಾಂಡ್ ಭಾರತದ ಗವರ್ನರ್ ಜನರಲ್ ಆದ; ಆತ ಅವಿವಾಹಿತ. ಅವನಿಗಿದ್ದ ಇಬ್ಬರು ಸೋದರಿಯರು ಎಮಿಲಿ ಮತ್ತು ಫ್ಯಾನಿ. ಅವರೂ ಅವಿವಾಹಿತರು. ಅಣ್ಣನ ಜೊತೆಗೇ ಇರುವ ಹೆಂಗಸರು. ಅಣ್ಣನ ಜೊತೆಯಲ್ಲಿ ಭಾರತಕ್ಕೆ ಹೋಗಲೇಬೇಕಾದಾಗ ಇವರು ಬೆಚ್ಚುತ್ತಾರೆ. ಆಗಿನ ಕಾಲದಲ್ಲಿ ಇಂಗ್ಲೆಂಡಿನಿಂದ ಭಾರತಕ್ಕೆ ಹಡಗಿನಲ್ಲಿ ಐದು ತಿಂಗಳ ಪ್ರಯಾಣ!

ಇಲ್ಲಿಗೆ ಬಂದು ಇಲ್ಲಿಯ ಸೆಖೆ, ಗದ್ದಲಕ್ಕೆ ಬೆಚ್ಚಿದ ಎಮಿಲಿ ಮತ್ತು ಫ್ಯಾನಿ ನಿಧಾನಿಧಾನಕ್ಕೆ ಭಾರತದಿಂದ ಸೆಳೆಯಲ್ಪಡುತ್ತಾರೆ. ಅವರನ್ನು ಮೊದಲು ಚಕಿತಗೊಳಿಸಿದ್ದು ಇಲ್ಲಿಯ ಜನರ ವಿಧೇಯತೆ, ಸೇವೆ ಮಾಡುವ ವಿಧಾನ. ಎಮಿಲಿ ಯಾವುದಕ್ಕಾಗಿಯಾದರೂ ಆಜ್ಞೆ ಮಾಡುವುದೇ ತಡ, ಆ ವಸ್ತು ಅಲ್ಲಿರುತ್ತದೆ. ಬೆರಳಿನಷ್ಟು ಇಂಗ್ಲಿಷ್ ಜನಕ್ಕೆ ಎಷ್ಟೊಂದು ಜನ ಸೇವೆ ಸಲ್ಲಿಸುತ್ತಾರೆ ಎಂದು ಉದ್ಗಾರ ತೆಗೆಯುತ್ತಾಳೆ ಎಮಿಲಿ. ಅತ್ಯಂತ ಗಣ್ಯ ಇಂಜಿನಿಯರ್ ಕೂಡ ಸೇವಕನಂತೆ ವರ್ತಿಸುತ್ತಾನಂತೆ! ... ಚಮತ್ಕಾರವೆತ್ತದೆ ಈ

ಇಂಗ್ಲಿಷ್ ಜನ ಇನ್ನೂರೈವತ್ತು ವರ್ಷ ಆಳಿದ್ದು ಯಾಕೆಂದು ಗೊತ್ತಾಯಿತೆ?

–ಜೂನ್ 30, 1991



ಕೋಮು ಪ್ರಚೋದನಾಕಾರಿ ಹೇಳಿಕೆ ನೀಡಿದ ಮುತಾಲಿಕನಿಗೆ ಯಾಕಿಲ್ಲ ಶಿಕ್ಷೆ?

ಶ್ರೀರಾಮ ಸೇನೆಯಮುಖ್ಯಸ್ಥ ಪ್ರಮೋದ್ ಮುತಾಲಿಕ್ ಮತ್ತೊಮ್ಮೆ ವಿಷ ಕಾರಿದ್ದಾನೆ. "ಹಿಂದೂ ಧರ್ಮೀಯರು ಮುಸ್ಲಿಮರ ಅಂಗಡಿಗಳಿಗೆ ಹೋಗಿ ವ್ಯಾಪಾರ ಮಾಡಬಾರದು. ಮಾತ್ರವಲ್ಲ ಮುಸ್ಲಿಮರೊಟ್ಟಿಗೆ ಬೆರೆಯಬಾರದು'' ಎಂಬ ಕೋಮು ಪ್ರಚೋದನಾಕಾರಿ ಹಾಗೂ ವಿವಾದಾತ್ಮಕ ಹೇಳಿಕೆಯನ್ನು ಮುತಾಲಿಕ್ ನೀಡಿದ್ದರೂ ಆತನ ವಿರುದ್ಧ ಪೊಲೀಸರು ಯಾವ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿಲ್ಲ. ಇದ್ಯಾವ ನ್ಯಾಯ?


ಸೌಹಾರ್ದದ ವಾತಾವರಣದಲ್ಲಿ ಬದುಕುತ್ತಿರುವ ಸರ್ವಧರ್ಮೀಯರ ನಡುವೆ ವಿಷ ಕಾರುವ ಪ್ರಯತ್ನವನ್ನು ಮುತಾಲಿಕ್ ಪದೆ ಮಾಡುತ್ತಿದ್ದರೂ ನಮ್ಮ ಕಾನೂನು ಇನ್ನೂ ಹುತ್ತದೊಳಗೆ ಕೂತಿದೆ. ಹಿಂದೂಗಳು ಮುಸ್ಲಿಮರ ಅಂಗಡಿಗಳಿಗೆ ಹೋಗಿ ವ್ಯಾಪಾರ ಮಾಡಬಾರದು ಎಂದು ಹೇಳುವಷ್ಟು ಧೈರ್ಯವನ್ನು ಶ್ರೀರಾಮ ಸೇನೆಗೆ ತುಂಬುತ್ತಿರುವುದು ರಾಜ್ಯದ ಬಿಜೆಪಿ ಸರ್ಕಾರ.

ಇದೇ ಮುತಾಲಿಕ್ "ಗೋಹತ್ಯೆ ನಿಷೇಧ ಜಾರಿಯಾಗಬೇಕೆಂದರೆ, ರಾಮಮಂದಿರ ನಿರ್ಮಾಣವಾಗಬೇಕೆಂದರೆ, ಹಿಂದುಗಳು ಮುಸ್ಲಿಮರ ಅಂಗಡಿಗಳಿಗೆ ಹೋಗಿ ವ್ಯಾಪಾರ ಮಾಡಬಾರದು'' ಎಂದೂ ಹೇಳಿದ್ದಾನೆ. ರಾಜ್ಯದ ಪೊಲೀಸರು ಕೂಡಲೇ ಮುತಾಲಿಕನ ವಿರುದ್ಧ ಕ್ರಿಮಿನಲ್ ಮುಕದ್ದಮೆ ದಾಖಲಿಸಬೇಕಿದೆ. ಇಲ್ಲದಿದ್ದರೆ ರಾಜ್ಯದಲ್ಲಿ ಕಾರಣವಿಲ್ಲದ ಸಂಘರ್ಷಗಳು ನಡೆಯುವುದನ್ನು ನೋಡಬೇಕಾದೀತು. ಇಲ್ಲಿಯವರೆಗೆ ನಡೆದಂತಹ ಕೋಮು ಗಲಭೆಗಳಿಗೆ ಇಂತಹ ಹೇಳಿಕೆಗಳೇ ಕಾರಣವಾಗಿರುವುದನ್ನು ಮರೆಯಬಾರದು. ಮುತಾಲಿಕ್‌ನನ್ನು ಹಾಗೂ ಅಲ್ಪಸಂಖ್ಯಾತರ ವಿರುದ್ಧ ಪ್ರಚೋದನಾಕಾರಿ ಹೇಳಿಕೆ ನೀಡಿರುವ ಸಂಸದ ಮತ್ತು ಬಿಜೆಪಿಯ ಅಭ್ಯರ್ಥಿ ಅನಂತಕುಮಾರ್ ಹೆಗಡೆಯನ್ನು ಬಂಧಿಸಬೇಕೆಂಬ ಆಗ್ರಹ ಕೇವಲ ಒಂದೇ ಧರ್ಮೀಯರ ಆಗ್ರಹವಲ್ಲ, ಬದಲಾಗಿ ರಾಜ್ಯದ ಎಲ್ಲಾ ಪ್ರಾಜ್ಞರ ಆಗ್ರಹವಾಗಿದೆ.

ರಾಜ್ಯದಲ್ಲಿ ಅಲ್ಪಸಂಖ್ಯಾತರ ಮೇಲೆ, ಮಹಿಳೆಯರ ಮೇಲೆ ಹಿಂದೂತ್ವವಾದಿಗಳು ದಾಳಿಗಳನ್ನು ನಡೆಸುತ್ತಿದ್ದರೂ ವಿ.ಎಸ್. ಆಚಾರ್ಯ ಎಂಬ ಬ್ರಾಹ್ಮಣಶಾಹಿಯ ನೇತೃತ್ವದಲ್ಲಿ ಗೃಹ ಇಲಾಖೆ ಕಣ್ಣುಮುಚ್ಚಿ ಕೂತಿದೆ. ಆದ್ದರಿಂದ ಜನತೆಯ ಮತ ಯಾಚಲು ಬಿಜೆಪಿಯ ಅಭ್ಯರ್ಥಿಗಳು ಬಂದಾಗ "ರಾಜ್ಯದ ಗೃಹ ಇಲಾಖೆ ಯಾವ ರೀತಿ ರಾಜ್ಯದ ಜನತೆಯ ಶಾಂತಿಯನ್ನು ಕಾಪಾಡುತ್ತಿದೆ?'' ಎಂದು ಪ್ರಶ್ನಿಸಬೇಕಿದೆ. ಇದು ಅನಿವಾರ್ಯ. ಕಾರಣ ಪ್ರಶ್ನೆ ಕೇಳುವ ಕಾಲ ಈಗ ಬಂದಿದೆ.

- ಶಂಶೀರ್ ಬುಡೋಳಿ, ಪೆರಾಜೆ ಗ್ರಾಮ, ದ.ಕ

ಹೊಗಳಿಕೆ ತೆಗಳಿಕೆ




ಏಪ್ರಿಲ್ ಏಪ್ರಿಲ್ 8, 2009 ರ ಸಂಚಿಕೆಯಲ್ಲಿ ಪಾರ್ವತೀಶ ಅವರು ಬರೆದಿದ್ದ 'ಸೂಜಿ ಮಲ್ಲಿಗೆ ಸೋನಿಯಾ' ಲೇಖನ ನನ್ನನ್ನು ಸೂಜಿಗಲ್ಲಿನಂತೆ ಸೆಳೆದು ನಿಲ್ಲಿಸಿತು. ಓದುತ್ತಾಹೋದಂತೆ ಈ ಲೇಖನವು ಎಂಥವರಲ್ಲೂ (ಅವರಲ್ಲಿ ಮನಸ್ಸು ಎನ್ನುವಂಥದ್ದು ಇದ್ದಲ್ಲಿ) ಆರ್ದ್ರಭಾವ ಜಿನುಗುವಂತೆ ಮಾಡುತ್ತದೆ ಎನಿಸಿತು. ರಾಜಕಾರಣಿಗಳಲ್ಲಿ ಹಣ, ಅಧಿಕಾರಗಳು ಒಂದೆಡೆ ಸೇರಿದಾಗ ಮನಸ್ಸು-ಭಾವನೆಗಳು ಸತ್ತೇ ಹೋಗುವ ಇಂದಿನ ದಿನಗಳಲ್ಲಿ ಸೋನಿಯಾ ಅಪವಾದವಾಗಿ ಕಾಣಿಸುತ್ತಾರೆ. ''ಆಕೆಯ ವೈಯಕ್ತಿಕ ಜೀವನದ ಅನೇಕ ವಿವರಗಳು ಭಾರತೀಯರಿಗೆ ಪೂರ್ತಿ ತಿಳಿದಿಲ್ಲ, ಆದರೂ ಜನ ಆಕೆಯ ಬಗ್ಗೆ ಅಭಿಮಾನ ಪ್ರೀತಿ ಗೌರವ ಬೆಳೆಸಿಕೊಂಡಿದ್ದಾರೆ. ಇದು ಕಾಂಗ್ರೆಸ್ ಪಕ್ಷದವರ ಅಭಿಮಾನಕ್ಕಿಂತ ತುಸು ಬೇರೆಯದ್ದೇ ಆದ ಕಾಳಜಿ'' ಎಂಬ ಪಾರ್ವತೀಶರ ಮಾತು ನೂರಕ್ಕೆ ನೂರರಷ್ಟು ಸತ್ಯ. ಅಂಥವರಲ್ಲಿ ನಾನು ಒಬ್ಬ. ಈ ಪ್ರೀತಿಯು ದೇಶ-ಭಾಷೆ, ಜಾತಿ-ಮತ, ಪಕ್ಷ-ಪಂಗಡಗಳಾಚೆಗಿನದು. ಅವರಲ್ಲಿರುವ ಸರಳತೆ, ಸಜ್ಜನಿಕೆ, ಔಚಿತ್ಯ ಪ್ರಜ್ಞೆ, ಮನುಷ್ಯ ಪ್ರೀತಿಗೆ ಎಂಥವರೂ ತಲೆ ಬಾಗಬೇಕು. ಇಂದು ದೇಶದ ಉದ್ದಗಲದಲ್ಲೂ ಮುಂಚೂಣಿಗೆ ಬರುತ್ತಿರುವ ಯಾವ ಮಹಿಳಾ ರಾಜಕಾರಣಿಗಳಲ್ಲೂ ಈ ಗುಣಗಳು ಕಾಣದಿರುವುದು ದುರಂತ.

ಇನ್ನು ಇಂದಿರಾಗಾಂಧಿಯವರು ರಾಜಕಾರಣಿಯಾಗಿ ಏನೇ ಆಗಿರಲಿ ಸೋನಿಯಾ ಅವರ ಬಗ್ಗೆ ಮೊದಲ ಭೇಟಿಯಲ್ಲಿ ನಡೆದುಕೊಂಡ ರೀತಿ ಕೋಟಿಗೊಬ್ಬರಿಂದಲೂ ಸಾಧ್ಯವಿಲ್ಲ. ದೇಶ-ಭಾಷೆ, ಧರ್ಮ, ಅಂತಸ್ತುಗಳನ್ನು ಪಕ್ಕಕ್ಕಿಟ್ಟು ಮಗನ ಭಾವನೆಗಳಿಗೆ ಬೆಲೆಯಿತ್ತು, ಗೌರವಿಸಿದ ಅಪ್ಪರೂಪದ ವ್ಯಕ್ತಿತ್ವ. ಇಂಥ ಮನಸ್ಸುಗಳನ್ನು ದುರ್ಬೀನು ಹಾಕಿ ಹುಡುಕಬೇಕಷ್ಟೇ. ಅದರಲ್ಲೂ ತಾನೊಬ್ಬ ಪ್ರಧಾನಿಯಾಗಿ ಭಾವೀ ಸೊಸೆಯ ಕಿತ್ತು ಹೋದ ಚಪ್ಪಲಿಯನ್ನು ಸರಿಪಡಿಸಿಕೊಟ್ಟದ್ದು ಅಸಾಮಾನ್ಯ ಮನಸ್ಸುಗಳಿಗೆ ಮಾತ್ರ ಸಾಧ್ಯ.

ಹಣಕ್ಕಾಗಿ, ಅಧಿಕಾರಕ್ಕಾಗಿ, ಜಾತಿ ಲಾಂಛನವನ್ನು ನೇತಾಡಿಸಿಕೊಂಡು ರಾಜಕಾರಣ ಮಾಡುವ ಇಂದಿನ ಕೊಳಕು ಮನಸ್ಸಿನ ರಾಜಕಾರಣಿಗಳು, ಇಂಥವರಿಂದ ವ್ಯಕ್ತಿ ಘನತೆಯ ಪಾಠ ಕಲಿಯಲಿ. ಅಪರೂಪದ ಈ ಅತ್ತೆ ಸೊಸೆಯರ ಬಗ್ಗೆ ಗೊತ್ತಿಲ್ಲದ ವಿವರಗಳನ್ನು ಆಪ್ತವಾಗಿ ತಿಳಿಸಿಕೊಟ್ಟ ಪಾರ್ವತೀಶರಿಗೂ, ಪ್ರಕಟಿಸಿದ ನಿಮಗೂ ಅಭಿನಂದನೆಗಳು.

- ಡಾ. ಭೂಮಿಗೌಡ, ಮಂಗಳೂರು

ಸನಾತನವಾದಿ ಸಂಸದ ಹೆಗಡೆಗೆ ಸವಾಲು



ಬಿಜೆಪಿ ಮುಖಂಡ ಹಾಗೂ ಸಂಸದ ಅನಂತ ಕುಮಾರ ಹೆಗಡೆ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದಲ್ಲಿ ಮಾರ್ಚ್ 29ರಂದು ನಡೆದ ಕಾರ್ಯಕರ್ತರ ಸಭೆಯಲ್ಲಿ 'ನನಗೆ ಹಿಂದೂಗಳ ಮತವೇ ಸಾಕು' ಎಂದು ಘೋಷಿಸಿದ್ದಾರೆ. ಮಾತ್ರವಲ್ಲ, ಈ ಹೇಳಿಕೆಗೆ ತಾವು ಬದ್ಧ ಅಷ್ಟೆ ಅಲ್ಲ; ಚುನಾವಣಾ ಆಯೋಗ ಬೇಕಿದ್ದರೆ ತಮ್ಮ ವಿರುದ್ಧ ಪ್ರಕರಣ ದಾಖಲಿಸಲಿ ಎಂದೂ ಸವಾಲು ಹಾಕಿದ್ದಾರೆ. ಆ ಮೂಲಕ ಅವರು ಬಿಜೆಪಿಯ ಹಿಡನ್ ಅಜೆಂಡಾವನ್ನು ಬಹಿರಂಗ ಪಡಿಸಿದ್ದಾರಲ್ಲದೆ ಬಹುಸಂಖ್ಯಾತ ಮನುಷ್ಯತ್ವವಾದಿಗಳು ತಲೆತಗ್ಗಿಸುವಂತೆ ಮಾಡಿದ್ದಾರೆ.

ಅದೇ ಸಭೆಯಲ್ಲಿ 'ಅಲ್ಪಸಂಖ್ಯಾತರ ಮತಕ್ಕಾಗಿ ಕೆಲವರು ಅವರನ್ನು ತುಷ್ಟೀಕರಣ ಮಾಡುವುದಾದರೆ, ನಾನು ಬಹುಸಂಖ್ಯಾತರಿಗಾಗಿ ರಾಜಕಾರಣ ಮಾಡುತ್ತೇನೆ. ಶ್ರೀರಾಮನಿಗೋಸ್ಕರ, ಶ್ರೀಕೃಷ್ಣನಿಗೋಸ್ಕರ ರಾಜಕಾರಣ ಮಾಡುತ್ತೇನೆ' ಎಂದಿದ್ದಾರೆ. ನಿಜ, ಹೆಗಡೆಯಂಥವರು ರಾಜಕಾರಣ ಮಾಡುವುದು ಅವರೇ ಒಪ್ಪಿಕೊಂಡಂತೆ, ವೈರುಧ್ಯದ ಹಾಗೂ ಕಾಲ್ಪನಿಕ ಪಾತ್ರಗಳೆನಿಸಿಕೊಂಡ ಶ್ರೀರಾಮನಿಗೋಸ್ಕರ ಮತ್ತು ಶ್ರೀ ಕೃಷ್ಣನಿಗೋಸ್ಕರ. ಅಂತವರಿಗೆ ಕಲ್ಲು, ಕಟ್ಟಿಗೆಗಳಲ್ಲಿ ಕಾಣುವ ಶ್ರೀರಾಮ, ಶ್ರೀಕೃಷ್ಣರೇ ಹೆಚ್ಚು. ಹಾದಿ-ಬೀದಿ, ಊರು-ಕೇರಿಗಳಲ್ಲಿ ತೀರಾ ಸಾಮಾನ್ಯವಾಗಿ, ದಯನೀಯ ಸ್ಥಿತಿಯಲ್ಲಿ ಬದುಕುವ ರಾಮನಾಗಲಿ ಕೃಷ್ಣನಾಗಲಿ ಕಾಣುವುದಿಲ್ಲ. ಹರಕು-ಮುರುಕು ಗುಡಿಸಲುಗಳಲ್ಲಿ ವಾಸಿಸುವ ಹಾಗೆಯೇ ತಮ್ಮಂತೆ ಉಸಿರಾಡುವ ಕೋಟ್ಯಾನುಕೋಟಿ ರಾಮ, ಕೃಷ್ಣರಿಗೆ ಒಂದು ಸೂರು ಮಾಡಿಕೊಡಬೇಕೆಂಬ ಖಬರು ಇರುವುದಿಲ್ಲ.

ಕೆಲವರು ಅಲ್ಪಸಂಖ್ಯಾತರನ್ನು ಓಲೈಸುವ ಕೆಲಸ ಮಾಡುತ್ತಿರುವುದರಿಂದ ತಾವು ಬಹುಸಂಖ್ಯಾತರನ್ನು ಓಲೈಸಿದರೆ ತಪ್ಪೇನು ಎಂದು ಹೆಗಡೆ ಮೂರೂ ಬಿಟ್ಟು ಕೇಳಿರುವುದು ಹಾಸ್ಯಾಸ್ಪದ. ಯಾರು ಈ ದೇಶದಲ್ಲಿ ಅಲ್ಪಸಂಖ್ಯಾತರು? ದೇಶದ ಪ್ರತಿ ನಾಗರಿಕನೂ ಈ ದೇಶದ ಹೆಮ್ಮೆಯ ಪುತ್ರ/ಪುತ್ರಿ. ದೇಶದ ಸಂವಿಧಾನ, ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂದಿರುವಾಗ ಎಲ್ಲಿಯದು ಈ ಭಿನ್ನ ಭೇದ ಮಾತು?

ಒಂದು ಪತ್ರ

ಹೆಗಡೆ ಮತ್ತವರ ಬಳಗ ಬಾಯಿ ಬಿಟ್ಟರೆ ಸಾಕು ತಾವು ಹಿಂದೂಪರವಾದಿಗಳು ಎಂದು ಬಡಬಡಿಸುತ್ತಾರೆ. ಆದರೆ ಹಿಂದೂ ಅಂದರೆ ಏನು? ಹಿಂದೂ ಎಂಬುದು ಒಂದು ಧರ್ಮವೇ? ಹಿಂದೂ ಎಂಬುದು ಒಂದು ಜನಾಂಗವೇ? ಇಲ್ಲಾ ಒಂದು ಜಾತಿಗೇ ಸೀಮಿತವಾದುದೇ? ಇಂತಹ ಪ್ರಶ್ನೆಗಳಿಗೆ ಹೆಗಡೆಯಂತವರ ತಾತ, ಮುತ್ತಾತನ ಕಾಲದಲ್ಲೇ ತಮಗೆ ಬೇಕಾದಂತೆ ಬರೆದುಕೊಂಡ ಸನಾತನ ಹೊತ್ತಿಗೆಗಳನ್ನೊ ಇಲ್ಲಾ ತಾಳೆಗರಿ ಓಲೆಗಳನ್ನೊ ಇಲ್ಲಾ ಮತ್ತಿನ್ನೇನೋ ತೋರಿಸಬಹುದು.

ಆದರೆ ವಾಸ್ತವವೇ ಬೇರೆ. ಈ ದೇಶದ ದಲಿತರು, ಪರಿಶಿಷ್ಟ ಜಾತಿ, ಜನಾಂಗಗಳ ಜನರು, ಹಿಂದುಳಿದವರು, ಬಡವರು, ಅಸಹಾಯಕರು, ದುಡಿಯುವ ವರ್ಗ, ರೈತರು, ಕಾರ್ಮಿಕರು, ಎಲ್ಲಾ ಮಹಿಳೆಯರು, ಲಿಂಗಾಯತರು, ಒಕ್ಕಲಿಗರು, ಕುರುಬರು, ಬೇಡರು, ದೀನರು ಒಟ್ಟಾರೆ ಈ ದೇಶದ ತೊಂಬತ್ತೈದರಷ್ಟು ಜನ ತಾವು ಮಾನಸಿಕವಾಗಿ ಹಿಂದೂಗಳಲ್ಲ ಎಂದೇ ತಿಳಿದಿದ್ದಾರೆ.

ಭೌತಿಕವಾಗಿಯೂ ಹಿಂದೂಧರ್ಮದ ಕಟ್ಟುಪಾಡುಗಳು, ಪೂಜೆ, ಪುನಸ್ಕಾರಗಳು, ಕಾಣಿಕೆ, ಬಲಿ, ಹರಕೆ, ನೀತಿಗೆಟ್ಟ ನಿಯಮಗಳು, ಅಸಮಾನತೆಯ ತತ್ವಗಳು, ಪುರುಷರು ಮತ್ತು ಮಹಿಳೆಯರ ಮಧ್ಯೆ ಕಂದಕ ಸೃಷ್ಟಿಸುವ ಆಚರಣೆಗಳು, ಇವೆಲ್ಲವನ್ನು ಕೇವಲ ಒಂದೇ ಒಂದು ಜಾತಿಯ ಜನ ಪಾಲಿಸುತ್ತಿರುವುದು. ಅವರು ಮಾತ್ರ ಹಿಂದೂಗಳು. ಆದರೆ ಅವರಲ್ಲೂ ಕೆಲವರು ತಾವು ಹಿಂದೂಗಳಲ್ಲ, ಹಾಗೆ ಕರೆಸಿಕೊಳ್ಳುವುದರಿಂದ ಈ ದೇಶದ ಸಾರ್ವಭೌಮತೆಗೆ ಧಕ್ಕೆ ತರಬೇಕಾಗುತ್ತದೆ ಎಂದೇ ಭಾವಿಸಿರುವ ಸೂಕ್ಷ್ಮ ಮನಸ್ಸಿನವರೂ ಇದ್ದಾರೆ.

ಹೆಗಡೆ ಪ್ರಕಾರ ಅಲ್ಪಸಂಖ್ಯಾತರು ಈ ದೇಶವಾಸಿಗಳಲ್ಲ. ಹಾಗೆ ನೋಡಿದರೆ ಹೆಗಡೆಯಂಥ ಹಿಂದೂಗಳು ಆರ್ಯರೆಂದೂ, ಅವರು ಮಧ್ಯ ಏಷ್ಯಾದಿಂದ ಇಂಡಿಯಾಕ್ಕೆ ವಲಸೆ ಬಂದವರೆಂದೂ ಇತಿಹಾಸದ ದಾಖಲೆಗಳು ತಿಳಿಸುತ್ತವೆ. ಭಾರತದಲ್ಲಿರುವ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಮತಾಂತರಗೊಂಡಿರುವ ಮೂಲನಿವಾಸಿಗಳೇ ಆಗಿದ್ದರೂ ಅವರ ವಿರುದ್ಧ ವಲಸೆ ಬಂದಿರುವ ಹೆಗಡೆ ತರಹದ ಹಿಂದೂವಾದಿಗಳು ಮೇಲಿಂದ ಬಡಬಡಾಯಿಸುವುದು ಹಾಸ್ಯಾಸ್ಪದವಾಗಿದೆ. ಭಾರತಕ್ಕೆ ವಲಸೆ ಬಂದ ಆರ್ಯನ್ನರು - ಅಂದರೆ ಇಂದಿನ 4-5ರಷ್ಟು ಇರುವ ಸೋಕಾಲ್ಡ್ ಹಿಂದೂಗಳು - ಇಂಡಿಯಾದ ಮೂಲನಿವಾಸಿಗಳಾದ ದ್ರಾವಿಡರ ಮೇಲೆ ಆರಂಭದಿಂದ ಇಲ್ಲಿಯವರೆಗೆ ಅನುಸರಿಸುತ್ತಿರುವುದು ಆಕ್ರಮಣಶೀಲ ನೀತಿಯಲ್ಲದೆ ಮತ್ತೇನು?

ಹೆಗಡೆಯಂತಹ ಹಿಂದೂತ್ವವಾದಿಗೆ ರಾಮ-ಕೃಷ್ಣರಷ್ಟೇ ಅಲ್ಲ, ಮನು ಋಷಿ ಎಂಬ ಪುಣ್ಯಾತ್ಮ ಬರೆದ ವಿಕೃತ್ಸ್ಮೃತಿಯೂ ಪರಮ ಪವಿತ್ರ. ಮನುಷ್ಯತ್ವವನ್ನೇ ಬೋಧಿಸದ, ಬ್ರಾಹ್ಮಣರನ್ನು ಬಿಟ್ಟು ಉಳಿದವರನ್ನು ಮನುಷ್ಯರೇ ಅಲ್ಲ ಎಂದು ಘಂಟಾಘೋಷವಾಗಿ ಸಾರಿದ ಮನುಸ್ಮೃತಿ ಹೆಗಡೆತರಹದವರ ಹಿಂದುತ್ವವಾದಕ್ಕೆ ತಳಹದಿ. ಮಹಿಳೆಯರನ್ನು, ದುಡಿಯುವ ವರ್ಗವನ್ನು ಧಿಕ್ಕರಿಸುವ, ದಲಿತರು, ದೀನರು, ಅಸಹಾಯಕರನ್ನು ಪಶುಗಳಿಗಿಂತ ಕೀಳೆಂದು ಭಾವಿಸುವ ಮನುಸ್ಮೃತಿಯೇ ಬಿಜೆಪಿಯ ಹಿಡನ್ ಅಜೆಂಡಾ.

ಹೆಗಡೆಯವರಿಗೆ ಕೇವಲ ಹಿಂದೂಗಳ ಮತಗಳೇ ಸಾಕಿದ್ದರೆ ಅವರು ತಮ್ಮ ಈ ಹಿಡನ್ ಅಜೆಂಡಾದಲ್ಲಿರುವ ಮನುಷ್ಯತ್ವ ವಿರೋಧಿ ನಿಲುವುಗಳನ್ನು ಬಹಿರಂಗಗೊಳಿಸಿ ಮತಯಾಚಿಸಲಿ. ಆಗ ಎಷ್ಟು ಜನರು ಅವರಿಗೆ ಮತ ಹಾಕುತ್ತಾರೆ ಎಂದು ಗೊತ್ತಾಗುತ್ತದೆ. ಅದರ ಬಗ್ಗೆ ನನಗೂ ಭಾರಿ ಕುತೂಹಲವಿದೆ.

-ಕಲಿಗಣನಾಥ ಗುಡದೂರು

ಸಾಂಸ್ಕೃತಿಕ ವಿಕಲತೆಗೆ ಎದುರಾಗುತ್ತಾ...

ಸಂಸ್ಕೃತಿಯ ಪಕ್ಷಾರರಂತೆ ವರ್ತಿಸುವ ಹಾದಿಬೀದಿಯ ಗೂಂಡಾಗಳು 'ಇದೇ ನಮ್ಮ ಸಂಸ್ಕೃತಿ' ಎಂದು ಹೇಳಿದಾಗ ತಲೆಯಾಡಿಸುವ ಜನರಿಗೆ ನಿಜವಾಗಿಯೂ ಸಂಸ್ಕೃತಿಯೆಂದರೇನು ಎಂದು ತಲೆಕೆಡಿಸಿಕೊಳ್ಳುವ ಕಳಕಳಿಯಿರುವುದಿಲ್ಲ. ತಮ್ಮ ಸಿದ್ಧ ಪರಿಕಲ್ಪನೆಗಳಿಗೆ ಅನಾಗರಿಕರಿಂದ, ಹೇಡಿಗಳಿಂದ ಒತ್ತು ಸಿಕ್ಕಿದಾಗೆಲ್ಲ 'ಹೌದಪ್ಪ, ಈ ಹೆಣ್ಣು ಮಕ್ಕಳು ಪಬ್ ಗಿಬ್ ಅಂತ ಯಾಕೆ ಹೋಗಬೇಕು. ಸುಮ್ಮನೆ ಮನೆಯಲ್ಲಿರುವುದು ಬಿಟ್ಟು?' ಎಂದು ಗೋಣು ಹಾಕುವ ಮನಸ್ಸುಗಳು ಇದೇ ಸ್ವಘೋಷಿತ ಸಂಸ್ಕೃತಿಯ ಪಾಲಕರು ಯಾಕೆ ಸಾರಾಯಿ ನಿಷೇಧ ಚಳವಳಿಯನ್ನು ಹಮ್ಮಿಕೊಂಡು ಲಕ್ಷಾಂತರ ಕುಟುಂಬಗಳನ್ನು ಆ ನರಕದಿಂದ ಪಾರು ಮಾಡುವುದಿಲ್ಲ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳುವುದಿಲ್ಲ? ಹೆಂಡ ಸಾರಾಯಿಯೇನು ಇವರ ವೈಭವೋಪೇತ ಸಂಸ್ಕೃತಿಯ ಭಾಗವೆ? ಹೊರಗೆ ಬಂದರೆ ಹೆಣ್ಣು ಎದುರಿಸಬೇಕಾದ ಹಲವಾರು ರೀತಿಯ ಅತ್ಯಾಚಾರಿಗಳನ್ನು ಯಾಕೆ ಸದೆ ಬಡಿಯುವುದಿಲ್ಲ?

ಫ್ಯಾಸಿಸಂ ಹರಡಲು ಯಾವುದನ್ನೂ ಸೂಕ್ಷ್ಮವಾಗಿ ನೋಡಲೊಪ್ಪದ ಸೋಮಾರಿ ಮನಸ್ಸು ಹದವಾದ ಹರವನ್ನೊದಗಿಸುತ್ತದೆ. ಸಾಮಾನ್ಯರಿಗೆ ಪ್ರಿಯವಾಗುವಂತಹ ಸಂಸ್ಕೃತಿಯ ಪರಿಕಲ್ಪನೆಯನ್ನು ಹುಟ್ಟುಹಾಕಲು ಅದು ಸೂಕ್ತವಾದ ತಾಣವಾಗಿರುತ್ತದೆ. ಹಾಗಾಗಿಯೇ ಫ್ಯಾಸಿಸಂಗೂ ಜನಪ್ರಿಯ ಸಂಸ್ಕೃತಿಗೂ ಅವಿನಾಭಾವ ಸಂಬಂಧವಿರುತ್ತದೆ. ಹತ್ತು ಹಲವಾರು ಸ್ತರದಲ್ಲಿ ಹರಿಯುವ ಆ ಜನಪ್ರಿಯ ಸಂಸ್ಕೃತಿಯೆಂಬ ಧಾರೆಯಿಂದಲೇ ಫ್ಯಾಸಿಸ್ಟ್ ಶಕ್ತಿಗಳು ತಮ್ಮ ಶಕ್ತಿಯನ್ನು ಪಡೆದುಕೊಳ್ಳುತ್ತವೆ. ಹೆಣ್ಣಿನ ಜುಟ್ಟು ಹಿಡಿದು ಎಳೆದಾಡುವ, ಮಾತೆತ್ತಿದರೆ 'ಲೇ' ಎಂದೇ ಸಂಬೋಧಿಸುವ ಸಿನಿಮಾ ನಾಯಕನೊಬ್ಬ ಜನಪ್ರಿಯನೆನ್ನಿಸಿಕೊಂಡಂತ ಸಂಸ್ಕೃತಿಯಲ್ಲಿ ಭಜರಂಗಿಗಳು ಪಬ್ ಒಂದಕ್ಕೆ ನುಗ್ಗಿ ಹೆಣ್ಣುಮಕ್ಕಳ ಜುಟ್ಟು ಹಿಡಿದು ಎಳೆದಾಡುವ ಕ್ರಿಯೆಗೂ ಬಹುಮತವಿರುತ್ತದಲ್ಲ? ಫ್ಯಾಸಿಸ್ಟ್ ಶಕ್ತಿಗಳನ್ನು ಅರ್ಥಮಾಡಿಕೊಳ್ಳಲು, ಎದುರಿಸಲು ವಿಶಿಷ್ಟ ಮನೋಭಾವವಿರಬೇಕು. ಬೃಹತ್ ಉತ್ಪಾದನೆಯೇ ಬದುಕಿನ ಶೈಲಿಯಾಗಿರುವ, ಸಂಸ್ಕೃತಿಯೂ ಒಂದು ಸರಕಾಗಿರುವ ಸರಕು ಸಂಸ್ಕೃತಿಯಲ್ಲಿ ಅಂತಹ ಮನೋಭಾವ ವಿರಳವೇ. ವೈಯಕ್ತಿಕವಾಗಿ ತಮ್ಮತನವನ್ನು ರೂಪಿಸಿಕೊಳ್ಳಲು ವಿಫಲವಾದ ಮನಸ್ಸುಗಳಿಗೆ ಜನಪ್ರಿಯ ವಿಚಾರಧಾರೆಗೆ 'ಜೈ' ಎನ್ನುತ್ತಾ ಪಲಾಯನ ಮಾಡುವುದು ಸುಲಭವೆನ್ನಿಸುತ್ತದೆ. ಸಿದ್ಧಮಾದರಿಗಳನ್ನು ವೈಭವೀಕರಿಸುವುದು ಫ್ಯಾಸಿಸಂನ ಒಂದು ಬಹುಮುಖ್ಯ ಅಜೆಂಡಾ. 'ಮುಸ್ಲಿಮರೆಲ್ಲ ಭಯೋತ್ಪಾದಕರು. ಕ್ರಿಶ್ಚಿಯನ್ನರೆಲ್ಲ ಮತಾಂತರಿಗರು, ಸ್ತ್ರೀವಾದಿಗಳೆಲ್ಲ ಮನೆಮುರುಕರು. ಪ್ರಗತಿಪರರೆಲ್ಲ ಸಂಸ್ಕೃತಿಹೀನರು. ಪಬ್‌ಗೆ ಹೋದ ಹೆಣ್ಣುಮಕ್ಕಳೆಲ್ಲ ಕುಲಟೆಯರು...' ಪಟ್ಟಿ ಹೀಗೇ ಬೆಳೆಯುತ್ತಾ ಹೋಗುತ್ತದೆ. ಎಲ್ಲ ರೀತಿಯ ಸೂಕ್ಷ್ಮವನ್ನೂ ಕಳೆದುಕೊಂಡ ಜಡಮನಸ್ಸು ಹುಂಬತನದಲ್ಲಿ, ಹೇಡಿತನದಲ್ಲಿ ವಿಜೃಂಭಿಸಲು ಹವಣಿಸುತ್ತದೆ.


ವ್ಯಾಲೆಂಟೈನ್ ದಿನದಂದು ಕಾಣಸಿಗುವ ಜೋಡಿಗಳಿಗೆ 'ರಾಖಿ ಇಲ್ಲಾ ತಾಳಿ' ಎಂದು ಗರ್ಜಿಸಿರುವ ಸಂಸ್ಕೃತಿ ವಿಕಲ ಹೆಂಬೇಡಿಗಳು ಯಾವ ರೀತಿಯ ಸ್ವವಂಚನೆಯಲ್ಲಿ ಮುಳುಗಿದ್ದಾರೋ! ರಾಖಿ, ತಾಳಿಗಳೂ ಸಂಕೇತಗಳೇ. ಅರ್ಥವನ್ನು ಅವಕ್ಕೆ ಹಚ್ಚಿದಾಗ ಮಾತ್ರ ಅವಕ್ಕೆ ಬೆಲೆಯಿರುತ್ತದೆ ಎಂಬುದು ಸಂಸ್ಕೃತಿಯ ಗಂಧವೇ ಇಲ್ಲದವರಿಗೆ ಗೊತ್ತಿರುವುದಿಲ್ಲ. ನನ್ನ ಅಜ್ಜಿಯ ವಾರಗೆಯ ಪತಿವ್ರತೆಯೊಬ್ಬರು ಕುತ್ತಿಗೆಯಲ್ಲಿ ಬಾವೆದ್ದಾಗಲೂ ತಾಳಿಯನ್ನು ತೆಗೆಯಲು ವಿರೋಧಿಸಿದ್ದರು. ಅರವತ್ತೈದರ ಮುದಿವಯಸ್ಸಿನ ಗಂಡನ ಕಚ್ಚೆಹರುಕತನವನ್ನು ಕಣ್ಣಾರೆ ನೋಡಿದಾಗ ಮನಸ್ಸು ಅದೇಗೆ ಹುಚ್ಚಾಯಿತೋ, ತಾಳಿಯನ್ನು ಹರಿದು ರಪ್ಪನೆ ಗಂಡನ ಮೂತಿಗೆ ಬೀಸಿದಾಗ ಗಂಡನೆಂಬ ಪ್ರಾಣಿಯ ಕಣ್ಣು ಹರಿದು ರಕ್ತ ಹರಿದಿತ್ತು. ಮತ್ತೆ ಆ ತಾಳಿಯನ್ನು ಆಕೆ ಯಾವತ್ತೂ ಧರಿಸಲಿಲ್ಲ. ಅಷ್ಟೇ ಅಲ್ಲ, ಗಂಡನನ್ನು ಮಾತಾಡಿಸಲೂ ಇಲ್ಲ. ಬಂಧುಗಳ ಮನೆಗೆ ಹೋದಾಗ 'ನೋಡಿ, ಬರೀ ಕುಂಕುಮವಿಟ್ಟುಕೊಳ್ಳುತ್ತೇನೆ. ಅದು ನನಗೆ ಹುಟ್ಟನಿಂದ ಬಂದದ್ದು. ಅರಿಸಿನಕ್ಕೆ ತಾಳಿಯಿಲ್ಲ. ಆ ನೇಣನ್ನು ಕಿತ್ತೊಗೆದ ಮೇಲೆಯೇ ನಾನು ಹಾಯಾಗಿ ಉಸಿರಾಡುತ್ತಿರುವುದು' ಎಂದು ಹೇಳಿ ಎಲ್ಲರನ್ನೂ ಬೆಚ್ಚಿಬೀಳಿಸುತ್ತಿದ್ದ ಆಕೆಯ ವರ್ತನೆ ಬೌದ್ಧಿಕವಾಗಿ ಕಣ್ತೆರೆಯುತ್ತಿದ್ದ ನನ್ನನ್ನು ಸಂಕೇತವೆಂದರೇನು ಎಂದು ಯೋಚಿಸುವಂತೆ ಮಾಡಿತ್ತು. ಹಾದಿಬೀದಿಯ ಗೂಂಡಾಗಳು ಕಟ್ಟಿಸಿದ ತಾಳಿಗೆ, ರಾಖಿಗೆ ಬೆಲೆ ಕೊಟ್ಟರೆ ಕುಂದುವುದು ನಮ್ಮ ಆತ್ಮಗೌರವವೇ. ವ್ಯವಸ್ಥೆಯ ಯಥಾಸ್ಥಿತಿಯನ್ನು ಕಾಪಾಡಲು, 'ಯಾರು ಯಾರು ಎಲ್ಲಿರಬೇಕೋ ಅಲ್ಲೇ ಇರಿಸಲು' ಎಲ್ಲ ತರದ ಗೂಂಡಾಗಿರಿಯಂತೆ ಸಾಂಸ್ಕೃತಿಕ ಗೂಂಡಾಗಿರಿಯೂ ಸನ್ನದ್ಧವಾಗಿರುತ್ತದೆ. 'ಸಂಸ್ಕೃತಿ'ಯೆನ್ನುವುದು ಅಂತಹ ಪುನ್ನಾರಕ್ಕೆ ಒದಗಿಬರುವ ಒಂದು ಆಯುಧ ಅಷ್ಟೇ. ರಾಮ ಒದಗಿ ಬಂದಂತೆ, ಅಯೋಧ್ಯೆ ಒದಗಿ ಬಂದಂತೆ.

ಸಮೂಹ ಮನೋಭಾವ ಪಾಲುವುದು ಹುರುಳಿಲ್ಲದ ಹಗುರವಾದದ್ದಕ್ಕೆ, ಸೂಕ್ಷ್ಮವೆಲ್ಲವೂ ಸೋರಿಹೋಗಿರುವ ಜಡತ್ವಕ್ಕೆ. ಅಂತಹದು ಸುಲಭವಾಗಿ ಲಭ್ಯವಷ್ಟೇ ಅಲ್ಲ, ಅರಗಿಸಿಕೊಳ್ಳುವುದೂ ಸುಲಭ. ಪರ್ಯಾಯಗಳೆಲ್ಲವನ್ನೂ ನಾಶಪಡಿಸಿ, ಬದಲಾವಣೆಯನ್ನು ಧಿಕ್ಕರಿಸಿ ಒಂದೇ ರೀತಿಯ ಮನೋಭಾವವನ್ನು ಸ್ಥಾಪಿಸುವುದು ಫ್ಯಾಸಿಸ್ಟರಿಗೆ ಪ್ರಿಯವಾದ, ಅನಿವಾರ್ಯವಾದ ಕೆಲಸ. ಗಾಂಧಿ ಹೇಳಿದ 'ಸಂಸ್ಕೃತಿಯಲ್ಲಿ ಮೀಯಬೇಕು, ಉಸಿರು ಕಟ್ಟಿ ಮುಳುಗಬಾರದು' ಎಂಬುದನ್ನು ಅರ್ಥಮಾಡಿಕೊಳ್ಳಲು ಹುಂಬತನಕ್ಕೆ ಸಾಧ್ಯವಿರುವುದಿಲ್ಲ.

● ಸುಕನ್ಯಾ ಕನಾರಳ್ಳಿ

ಜಾಲಿ ಮುಳ್ಳು

ಚುಚ್ಚಿಸಿಕೊಂಡವರ ಗೋಳು!



ವಂಚಕ ನಿರ್ದೇಶಕ ಜಾಲಿ ಬಾಸ್ಟಿನ್

...ಲಿ ಬಾಸ್ಟಿನ್ ಎಂಬ ಮಲಯಾಳಿ ಕಳ್ಳ ತನ್ನ ...ನದ ಮೊದಲ ಚಿತ್ರದಲ್ಲೇ ಮಾಡಬಾರದ ಎಲ್ಲಾ ...ಸಗಳನ್ನೂ ಮಾಡಿ ಸಿಕ್ಕಾಪಟ್ಟೆ ರಾಡಿ ಎಬ್ಬಿಸಿದ್ದಾರೆ. ...ಚಂದ್ರನ್ ಜೊತೆಗೆ ಗುರುತಿಸಿಕೊಂಡು ಅವರ ...ನ್ನು ಸಿನಿಮಾಗಳಿಗೆ ಸಾಹಸ ಸಂಯೋಜನೆ ...ಂಡಿದ್ದ ಈ ಜಾಲಿ ಎಂಬ ಫೈಟ್ ಮಾಸ್ಟರ್‌ಗೆ ... ಘಳಿಗೆಯಲ್ಲಿ ಸಿನಿಮಾ ನಿರ್ದೇಶಕನಾಗಬೇಕು ...ಟ್ಟಿ ಆಲೋಚನೆ ಬಂತೋ ಗೊತ್ತಿಲ್ಲ.

...ದಲಿಗೆ 'ಯಾರೇ ನೀ ಯಾಮಿನಿ' ಅನ್ನೋ ... ಈತ ಆರಂಭಿಸಿದನಾದರೂ ಈತನ ಕಿರಾತಕ ...ನ್ನು ಕಂಡ ಅದರ ನಿರ್ಮಾಪಕ ಮುಹೂರ್ತದ ...ಲೇ ಚಿತ್ರವನ್ನು ರದ್ದುಮಾಡಿ ಕೈತೊಳೆದು ...ರು. ಅನಂತರ ಐವತ್ತು ಲಕ್ಷದಲ್ಲಿ ಸಿನಿಮಾ ...ಡುತ್ತೀನಿ ಎಂದು ನ್ಯೂ ತಿಪ್ಪಸಂದ್ರದ ಬಿಲ್ಡರ್ ...ಬಾಬು ಎಂಬುವವರಿಗೆ ಗಂಟುಬಿದ್ದ. ಹೇಗೂ ...ಬಾಬುಗೂ ಹಲವಾರು ವರ್ಷಗಳಿಂದ ಚಿತ್ರ ...ಶಕನಾಗಬೇಕೆಂಬ ಆಸೆ ಇದ್ದಿದ್ದರಿಂದ ಜಾಲಿಯ ...ಅವರ ಬೇಲಿಗೆ ಸಿಲುಕಿಕೊಂಡಿತು.

...ಜಾ ಗಾಂಧಿ ಮತ್ತು ವಿಶಾಲ್ ಹೆಗಡೆ ...ಂದ 'ನಿನಗಾಗಿ ಕಾದಿರುವೆ' ಎಂಬ ಚಿತ್ರ ...ಗೇ ಬಿಟ್ಟಿತು. ಆದರೆ ಚಿತ್ರದ ಆರಂಭದೊಂದಿಗೆ ... ಐಲಾಟಗಳೂ ಪ್ರಾರಂಭವಾದವು.

...ದಲು ಐವತ್ತು ಲಕ್ಷದಲ್ಲಿ ಸಿನಿಮಾ ಮಾಡಿ ...ತ್ತೀನಿ ಎಂದು ನಂಬಿಸಿದ್ದ ಜಾಲಿ ...ತೆ ಬಜೆಟ್‌ಅನ್ನು ಇನ್ನೂ ಹತ್ತು ...ನಾಪಾಯಿಗಳಿಗೆ ಹೆಚ್ಚಿಸಿದ. ... ಸತೀಶ್ ಬಾಬು ಅದು ... ಹಣ ಹೊಂದಿಸಿ ಜಾಲಿಯ ... ಹೀಗೆ ನಿರ್ಮಾಪಕರಿಂದ ...ಣ ಪೀಕಿದ ಜಾಲಿ ಚಿತ್ರದ ...ರಿಗಾದರೂ ನಿಯತ್ತಾಗಿ ... ಕೊಟ್ಟನಾ ಎಂದರೆ ಅದೂ

... ಕೇಳಿದವನ ...ಗೇ ಗನ್!

...ನ ಚಿತ್ರದ ... ...ಂದರಲ್ಲಿ ...ಅರ್ಜುನ್ ...ಯುವಕ ತನ್ನ ... ...ಯನ್ನು ...ಬಂಬ ಒಂದೇ

ಚಿತ್ರೀಕರಣದ ನಡುವೆಯೇ ಆತನ ಹಣೆಗೆ ರಿವಾಲ್ವರ್ ಇಟ್ಟು ಬೆದರಿಕೆ ಒಡ್ಡಿದ್ದ ಜಾಲಿ. ಹಿರಿಯ ನಾಟಕಕಾರ ಎ.ಎಸ್. ಮೂರ್ತಿ ಅವರ ಗರಡಿಯಲ್ಲಿ ಕಲಿತಿರುವ ಅರ್ಜುನ್ ಈಗಷ್ಟೇ ಹೊಸ ಅವಕಾಶಗಳ ನಿರೀಕ್ಷೆಯಲ್ಲಿರುವ ಹೊಸ ಹುಡುಗ. ಈ ಕಮಂಗಿ ಜಾಲಿ ಆತನ ಹಣೆಗೆ ಗನ್ ಇಟ್ಟಿದ್ದರಿಂದ ಗಾಬರಿಗೊಂಡ ಆ ಹುಡುಗ ಒಂದು ವಾರ ಚಿತ್ರೀಕರಣಕ್ಕೂ ಬರಲಾಗದಂತೆ ಚಳಿ ಜ್ವರದಿಂದ ಹಾಸಿಗೆ ಹಿಡಿದಿದ್ದ. ಮಾಧ್ಯಮಗಳಲ್ಲಿ ಈ ಪ್ರಕರಣದ ವರದಿಗಳೂ ಪ್ರಕಟಗೊಂಡವು. ಆದರೂ ಜಾಲಿಯ ತಿಮಿರು ಕಡಿಮೆಯಾಗಲಿಲ್ಲ.


ಈ ಜಾಲಿ ಎಂತಹ ಹುಚ್ಚ ಎಂಬುದಕ್ಕೆ ಒಂದು ಉದಾಹರಣೆ ನೀಡಬಹುದು. ಚಿತ್ರೀಕರಣಕ್ಕೆ ಬರುವಾಗ ಈತ ಪ್ರತಿದಿನವೂ ತನ್ನ ಪ್ಯಾಂಟಿನ ಕಿಸೆಯಲ್ಲಿ ಎಲ್ಲರಿಗೂ ಕಾಣುವಂತೆ ರಿವಾಲ್ವರ್ ಇಟ್ಟುಕೊಂಡು ಬರುವ ವಿಲಕ್ಷಣ ಶೋಕಿಲಾಲ. "ಇದ್ಯಾಕಯ್ಯಾ ಹೀಗೆ ದಿನಾ ರಿವಾಲ್ವರ್ ಇಟ್ಕೊಂಬರ್ತೀಯ?" ಅಂತ ಯಾರಾದರೂ ಕೇಳಿದರೆ "ಜೇಬಲ್ಲಿ ಗನ್ ಇದ್ರೆ ಲೆವೆಲ್ ಮೇಂಟೇನ್ ಮಾಡ್‌ಬೋದು" ಅಂಥ ಥೇಟು ಅಂಡರ್‌ವರ್ಲ್ಡ್ ಡಾನ್‌ನಂತೆ ಮಾತನಾಡುತ್ತಾನೆ. ಇದನ್ನೆಲ್ಲ ನೋಡಿದರೆ ಜಾಲಿ ಕೀಚಕ ಮದನ್ ಮಲ್ಲು, ಕೊಲೆಗಡುಕ ಗೋವರ್ಧನ ಮೂರ್ತಿಯ ಮತ್ತೊಂದು ಸಂತಾನವಿದ್ದಂತೆ ಕಾಣುತ್ತಿದ್ದಾನೆ.



ಪೂಜಾ ಗಾಂಧಿಗೂ ಪಂಗನಾಮ!

ಪೂಜಾ ಗಾಂಧಿಗೆ 14 ಲಕ್ಷ ಸಂಭಾವನೆ ನೀಡುವುದಾಗಿ ಒಪ್ಪಂದ ಮಾಡಿಕೊಂಡ ಈತ ಆಕೆಗೆ ಕೊಟ್ಟಿದ್ದು ಬರೀ 6 ಲಕ್ಷ. ಉಳಿದ ಹಣಕ್ಕೆ ಮೂರು ಲಕ್ಷ ರೂಪಾಯಿಯ ಚೆಕ್ ನೀಡಿದ್ದನಾದರೂ ಪೂಜಾ ಗಾಂಧಿ ಬ್ಯಾಂಕಿಗೆ ಚೆಕ್ ಹಾಕೋ ವೇಳೆಗಾಗಲೇ ಜಾಲಿಯ ಅಕೌಂಟೇ ಕ್ಲೋಸಾಗಿತ್ತಾದ್ದರಿಂದ ಚೆಕ್ಕು ಬೌನ್ಸ್ ಆಗಿತ್ತು. ಸಿನಿಮಾದ ಚಿತ್ರೀಕರಣ ಮುಗಿದು ಈಗ ಐದಾರು ತಿಂಗಳೇ ಕಳೆದಿದ್ದರೂ ಇವತ್ತಿನ ತನಕ ಪೂಜಾಳಿಗೆ ಸಂದಾಯವಾಗಬೇಕಿದ್ದ ಬಾಕಿ ಹಣ ಸಿಕ್ಕಿಲ್ಲ. ಇದರಿಂದ ನಖ ಶಿಖಾಂತ ಕೋಪಗೊಂಡಿರುವ ಪಂಜಾಬಿ ಬೆಡಗಿ ಪೂಜಾ ಗಾಂಧಿ ಬೌನ್ಸ್ ಆದ ಚೆಕ್ ಅನ್ನು ಹಿಡಿದು ಜಾಲಿಯ ವಿರುದ್ಧ ಕೇಸು ಜಡಿಯಲು ಮುಂದಾಗಿದ್ದಾಳೆ.

ಬರೀ ಪೂಜಾಗಾಂಧಿಗೆ ಮಾತ್ರವಲ್ಲ, ಕ್ಯಾಮರಾಮನ್ ರಾಜನ್, ಸಂಗೀತ ನಿರ್ದೇಶಕ ರಾಬಿನ್ ಸೇರಿದಂತೆ ಚಿತ್ರಕ್ಕೆ ದುಡಿದ ಯಾವೊಬ್ಬ ತಂತ್ರಜ್ಞನಿಗೂ ಈತ ಪ್ರಾಮಾಣಿಕವಾಗಿ ಕಾಸು ಕೊಟ್ಟ ಮಾತುಗಳೇ ಕೇಳಿಬರುತ್ತಿಲ್ಲ. ಇನ್ನು 'ನಿನಗಾಗಿ ಕಾದಿರುವೆ' ಚಿತ್ರಕ್ಕೆ ಅರವತ್ತು ಲಕ್ಷ ರೂಪಾಯಿಗಳ ಇಡುಗಂಟನ್ನು ಸುರಿದಿರುವ ನಿರ್ಮಾಪಕ ಸತೀಶ್ ಬಾಬು ಛೇಂಬರ್‌ನಲ್ಲಿ ಜಾಲಿಯ ವಿರುದ್ಧ ದೂರು ದಾಖಲಿಸಿ ನ್ಯಾಯಕ್ಕಾಗಿ ಅಲೆಯುತ್ತಿದ್ದಾರೆ.



ಸತೀಶ್

ಬಿ.ಕೆ. ಶಿವರಾಂ ಮಗನೇ ಸಾಕ್ಷಿ!

'ನಿನಗಾಗಿ ಕಾದಿರುವೆ' ಚಿತ್ರಕ್ಕೆ ಅಸೋಸಿಯೇಟ್ ಡೈರೆಕ್ಟರ್ ಆಗಿ ಕೆಲಸ ಮಾಡಿರುವುದು ಬೇರೆ ಯಾರೂ ಅಲ್ಲ, ಮಾಜಿ ಪೊಲೀಸ್ ಅಧಿಕಾರಿ ಬಿ.ಕೆ. ಶಿವರಾಂ ಅವರ ಸುಪುತ್ರ ರಕ್ಷಿತ್. ನಟ ವಿಜಯ ರಾಘವೇಂದ್ರನ ಭಾವ ಮೈದುನನೂ ಆಗಿರುವ ರಕ್ಷಿತ್ ಸಿನಿಮಾ ನಿರ್ದೇಶಕನಾಗಬೇಕೆಂದು ಅಪಾರ ಬಯಕೆ ಹೊತ್ತಿರುವ ಯುವಕ. ಸ್ವತಂತ್ರ ನಿರ್ದೇಶನಕ್ಕೆ ಮೊದಲು ಯಾರೊಬ್ಬರ ಬಳಿಯಾದರೂ ಸಹಾಯಕನಾಗಿ ದುಡಿಯಬೇಕು ಎಂದು ಜಾಲಿಯ ಬಳಿ ಸೇರಿದಾತ. ಈ ಜಾಲಿ ಎಂಬ ಐಲು ಮನುಷ್ಯನಿಂದ ರಕ್ಷಿತ್ ಇನ್ನೆಂಥಾ ಕೆಲಸ ಕಲಿಯಲು ಸಾಧ್ಯ? ಆದರೆ ಜಾಲಿಯ ಕುಕೃತ್ಯಗಳಿಗೆ ರಕ್ಷಿತ್ ಸಾಕ್ಷಿಯಾಗಿದ್ದಾನೆ.



ರಕ್ಷಿತ್

ವಿತರಕರಿಗಾಗಿ 'ಕಾದಿರುವೆ'!


ಗೋಲ್‌ಮಾಲ್ ಕೆಲಸಗಳಲ್ಲೇ ನಿರತನಾಗಿರುವ ಜಾಲಿ ಬಾಸ್ಟಿನ್ ನಿರ್ದೇಶಿಸಿರುವ ಚಿತ್ರದ ಗುಣಮಟ್ಟವಾದರೂ ಉತ್ತಮವಾಗಿರಲು ಹೇಗೆ ಸಾಧ್ಯ? ಮಲ್ಲೇಶ್ವರದ ರೇಣುಕಾಂಬ ಸ್ಟುಡಿಯೋದಲ್ಲಿ ಚಿತ್ರದ ಪ್ರಿವ್ಯೂ ನೋಡಿದ ವಿತರಕರೆಲ್ಲಾ ಹಿಂಬಾಗಿಲಿನಿಂದ ಎಸ್ಕೇಪ್ ಆಗುತ್ತಿದ್ದಾರೆಂದರೆ ಚಿತ್ರ ಅದಿನ್ನೆಷ್ಟು ಚೆನ್ನಾಗಿ ಬಂದಿರಬಹುದು ಲೆಕ್ಕಹಾಕಿ. ಹೀಗಾಗಿ ಸೊಟ್ಟಗೋ, ನೆಟ್ಟಗೋ ಸಿನಿಮಾ ಸಿದ್ದಗೊಂಡಿದೆಯಾದರೂ ಬಿಡುಗಡೆಗೊಳ್ಳುವ ಯಾವ ಕುರುಹೂ ಕಾಣುತ್ತಿಲ್ಲ.

ಈತನಿಂದ ಅನ್ಯಾಯಕ್ಕೊಳಗಾದವರು "ಹಣ ಕೊಡದಿದ್ದರೆ ಛೇಂಬರ್‌ಗೆ ಕಂಪ್ಲೇಂಟ್ ಕೊಡ್ತೀವಿ" ಎಂದು ಹೇಳಿದರೆ "ಛೇಂಬರ್ ಸೆಕ್ರೆಟರಿ ಸೇರಿದಂತೆ ರಾಕ್‌ಲೈನ್ ವೆಂಕಟೇಶ್, ರವಿಚಂದ್ರನ್ ಎಲ್ಲರೂ ನನ್ನ ಕಡೇನೇ ಇದಾರೆ. ಏನ್ ಮಾಡ್ಕೋತೀರೋ ಮಾಡ್ಕಳಿ" ಎಂದು ಆವಾಜ್ ಹಾಕುತ್ತಿದ್ದಾನೆ.

ವಂಚಿಸಲು ಸರ್ವಸನ್ನದ್ಧನಾಗಿ ಬಂದ ಜಾಲಿ ಬಾಸ್ಟಿನ್ ಎಂಬ ಸ್ಟಂಟ್‌ಮನ್‌ನನ್ನು ನಂಬಿ ಸಿನಿಮಾ ಮಾಡಲು ಹೋದ ನಿರ್ಮಾಪಕ ಸತೀಶ್ ಬಾಬು ಮತ್ತು ಈತನ ಚಿತ್ರದಲ್ಲಿ ನಟಿಸಿದ ಕಲಾವಿದರು ಮತ್ತು ಕೆಲಸ ಮಾಡಿದ ತಂತ್ರಜ್ಞರು ಎಲ್ಲರೂ ಇವತ್ತು ಜಾಲಿಗೆ ಹಿಡಿ ಶಾಪ ಹಾಕುತ್ತಿದ್ದಾರೆ.

ಇದು ಬಿಟ್ಟು ಅವರಿಗೆ ಬೇರೆ ದಾರಿಯಾದರೂ ಯಾವುದಿದೆ?

● ಅರುಣ್



ಎಕ್ಕಡಾ...? ಎನ್ನಡಾ...? ಕನ್ನಡ...!

... ಈ ವಾರ ಬಿಡುಗಡೆಯಾಗಲಿರುವ ಸಿನಿಮಾಗಳ ಕುರಿತು.

ಈ ವಾರವೂ ಗಾಂಧಿನಗರದ ಗರ್ಭದಿಂದ ಮೂರು ...ಚು ಬಿಡುಗಡೆಯ ಭಾಗ್ಯ ಕಾಣುತ್ತಿವೆ. ಪಂಚಕೋಟಿ ...ವಾಗಿ ನಮ್ಮ ಸಿನಿಮಾ ಜನರು ವಾರಕ್ಕೆ ಮೂರು ...ಮಾಗಳನ್ನು ಬೆಳ್ಳಿತೆರೆಯ ಮೇಲೆ ತೋರಿಸುತ್ತಲೇ ...ಈ ವರ್ಷ ಅದ್ಯಾಕೋ ಪ್ರೇಕ್ಷಕ ಮಹಾಪ್ರಭು ...ಂಡಿದ್ದಾನೆ. ಯಾವ ಚಿತ್ರಕ್ಕೂ ಆತ ಇಲ್ಲಿಯತನಕ ...ದಿಲ್ಲ.

...ಯ್ ನಟಿಸಿರುವ 'ಜಾಜಿ ಮಲ್ಲಿಗೆ', ಪ್ರೇಮ್ ... 'ಗೌತಮ್' ಮತ್ತು ಆದಿ ಲೋಕೇಶ್ ದ್ವಿಪಾತ್ರದಲ್ಲಿ ...ಸಿರುವ 'ನಿಷೇಧಾಜ್ಞೆ' ಈ ಮೂರು ಚಿತ್ರಗಳು ... ಕನ್ನಡಿಗರ ಮನವನ್ನು ತಣಿಸಲು ರೆಡಿಯಾಗಿವೆ. ...ಷವೆಂದರೆ ಈ ಮೂರರಲ್ಲಿ ಒಂದು ತೆಲುಗಿನ ...ಕ್, ಮತ್ತೊಂದು ತಮಿಳಿನ ರಿಮೇಕ್, ಇನ್ನೊಂದು ಸ್ವಂತ ...

...ಮ್ ನಟಿಸಿರುವ 'ಗೌತಮ್' ಚಿತ್ರ ತೆಲುಗಿನ 'ಆಹಾ' ಚಿತ್ರದ ...ವತರಣಿಕೆ. ತೆಲುಗಿನಲ್ಲಿ ಈ ಚಿತ್ರವನ್ನು ಸುರೇಶ್ ಕೃಷ್ಣ ...ದ್ದರು. ಅಜಯ್ ನಟಿಸಿರುವ 'ಜಾಜಿ ಮಲ್ಲಿಗೆ' ಕಥೆ ಮೈಸೂರು ...ನ್ನು, ಬದಲಾಗಿ ತಮಿಳು ಮಲ್ಲಿಗೆ. 'ದೇವತೆಯ ಕಂಡೇನ್' ...ಸ್ಥಿಯ ತಮಿಳು ಚಿತ್ರವನ್ನು ನಿರ್ದೇಶಕ ಅನಂತರಾಜ್ ...ಟ್ಟ ಇಳಿಸಿದ್ದಾರೆ.

...ಜೆಂದರೆ 'ನಿಷೇಧಾಜ್ಞೆ' ಚಿತ್ರದ ಕಥೆ-ವ್ಯಥೆ ಕುತೂಹಲ ...ತೆ. ಇದು 1984ರಲ್ಲಿ ಇಂದಿರಾ ಗಾಂಧಿ ಹತ್ಯೆಯ ಸುತ್ತ ...ಡಿಯುತ್ತೆ. ಅಂದರೆ 25 ವರ್ಷಗಳ ನಂತರ ಕನ್ನಡಿಗರು ಈ ಕಥೆಯನ್ನು ಚಿತ್ರ ಮಾಡುತ್ತಿದ್ದಾರೆಂದರೆ, ನಾವೆಷ್ಟು ಮುಂದುವರೆದಿದ್ದೇವೆ? ಎಂದು ನೀವೇ ಊಹಿಸಿ. ಅದೇನೇ ಇರಲಿ, ಪದ್ಮನಾಭ ಎಂಬ ಹೊಸ ನಿರ್ದೇಶಕ ರಿಮೇಕ್ ಬದಲು ಹೊಸತನಕ್ಕೆ ಕೈ ಹಾಕಿದ್ದನ್ನು ಮೆಚ್ಚಬೇಕು. ಆದರೆ ಈ ಚಿತ್ರದಲ್ಲಿ ಮಾಜಿ ಪೊಲೀಸ್ ಆಫೀಸರ್ ಹಾಲಿ ರಾಜಕಾರಣಿ ಅಬ್ದುಲ್ ಅಜೀಂ ನಟಿಸಿರುವುದರಿಂದ ಈ ಚಿತ್ರ ಚುನಾವಣೆ ನೀತಿಸಂಹಿತೆಗೆ ಒಳಪಟ್ಟರೆ ಚಿತ್ರ ಬಿಡುಗಡೆಯಾಗುವುದು ಡೌಟ್. ಅಲ್ಲಿಗೆ ಕನ್ನಡಿಗರಿಗೆ ಈ ವಾರ ಉಳಿದೆರಡು 'ಚಿತ್ರಾ'ನ್ನವೇ ಗತಿ!



ಇಲ್ಲೊಂದು ವಿಶೇಷವೆಂದರೆ 'ಜಾಜಿ ಮಲ್ಲಿಗೆ' ಗೆದ್ದರೆ ನಾಯಕ ಅಜಯ್‌ಗೆ ಇನ್ನಷ್ಟು ತಾರಾಮೌಲ್ಯ ವೃದ್ಧಿಸುತ್ತದೆ. 'ತಾಜ್‌ಮಹಲ್' ಚಿತ್ರದ ಯಶಸ್ಸು ಅನಿರೀಕ್ಷಿತ ಅಲ್ಲವೆಂಬುದನ್ನು ಅಜಯ್ ಪ್ರದರ್ಶಿಸಬೇಕಾಗಿದೆ. ಸ್ವಲ್ಪ ಎಡವಿದರೂ ಆತನ ಭವಿಷ್ಯಕ್ಕೆ ತೊಂದರೆಯಾಗಬಹುದು. ಹೀಗಾಗಿ ಅಜಯ್ ಪಾಲಿಗೆ ಮಲ್ಲಿಗೆ ಸುವಾಸನೆ ಬೀರಲೇ ಬೇಕಿದೆ.

ಕಳೆದ ವರ್ಷವಿಡೀ ಸೋಲನ್ನೇ ಕಂಡ ಪ್ರೇಮ್‌ಗೂ 'ಗೌತಮ'ನ ಗೆಲುವು ಮುಖ್ಯವಾಗಿದೆ. ಇದು ಗೆದ್ದರೆ ಈತ ನಟಿಸಿದ ಇನ್ನು ಮೂರು ಚಿತ್ರಗಳು ತೆರೆ ಕಾಣಲು ರೆಡಿಯಾಗಿವೆ. ಅಕಸ್ಮಾತ್ ಸೋತರೆ ಆ ಮೂರು ಚಿತ್ರಗಳ ಗತಿ ಗೋವಿಂದಾ...! ಹೀಗಾಗಿ ಪ್ರೇಮ್ ಮತ್ತು ಅಜಯ್‌ಗೆ ಈ ಶುಕ್ರವಾರ ಶುಭ ತರುತ್ತದೋ? ನೋಡೋಣ.



● ಶಣೈ

ಅನಿರುದ್ಧ ಹಾಡಿದ ಕಥೆ



ವಿಷ್ಣುವರ್ಧನ್ ಅವರ ಅಳಿಯ ಅನಿರುದ್ಧ್ ಈಗ ನಟನೆಯಿಂದ ಹಿನ್ನೆಲೆ ಗಾಯನದ ಕಡೆಗೆ ಒಲವು ತೋರಿಸಿದ್ದಾರೆ. 'ಗೌತಮ್' ಚಿತ್ರದಲ್ಲಿ ನಾಯಕ ಪ್ರೇಮ್‌ಗಾಗಿ ಅನಿರುದ್ಧ್ ಒಂದು ಹಾಡನ್ನು ಹಾಡಿದ್ದಾರೆ. ನೋ ಡೌಟ್ ಅನಿರುದ್ಧ್‌ಗೆ ಸಂಗೀತದ ಬಗ್ಗೆ ಒಳ್ಳೆಯ ಅಭಿರುಚಿ ಮತ್ತು ಒಲವು ಇದೆ. ಆದರೆ ಖಂಡಿತವಾಗಿಯೂ ಸಿನಿಮಾದಲ್ಲಿ ಹಿನ್ನೆಲೆ ಗಾಯನ ಮಾಡುವಷ್ಟು ಅನಿರುದ್ಧ್ ಪ್ರಬುದ್ಧ ಗಾಯಕರಲ್ಲ. ಏನಿದ್ದರೂ ಟಿವಿಯಲ್ಲಿ ಸಂಗೀತ ಕಾರ್ಯಕ್ರಮದಲ್ಲಿ ತೀರ್ಪುಗಾರರಾಗಿ ಕಾರ್ಯನಿರ್ವಹಿಸಲು ಮಾತ್ರ ಸರಿ. ಆದರೂ 'ಗೌತಮ್' ಚಿತ್ರದಲ್ಲಿ ಹಾಡಿರುವುದಕ್ಕೆ ಗಾಂಧಿನಗರದ 'ಚಿಂತನಾ ತಂಡ' ವಿಶೇಷ ಅರ್ಥ ನೀಡುತ್ತಿದೆ. ಆ ಚಿತ್ರದ ವ್ಯವಸ್ಥಾಪಕ ನಿರ್ಮಾಪಕ ಸೂರಪ್ಪ ಬಾಬು ಅವರ ಅತ್ಯುತ್ಸಾಹದ ಫಲವಾಗಿಯೇ ಅನಿರುದ್ಧ್‌ಗೆ ಇಲ್ಲಿ ಹಿನ್ನೆಲೆ ಗಾಯಕನಾಗಿ ಅವಕಾಶ ಸಿಕ್ಕಿದೆ. ಇದು ಒಂದು ರೀತಿಯಲ್ಲಿ ಬಾಬು ಮತ್ತು ವಿಷ್ಣು ನಡುವಿನ 'ಮೌನ-ಜಗಳ' ಮುರಿಯುವ ದಿಕ್ಕಿನಲ್ಲಿ ಹೊಸಹೆಜ್ಜೆ ಎಂದೇ ಹೇಳಲಾಗುತ್ತಿದೆ. ವಿಷ್ಣು ಅಳಿಯ ಅನಿರುದ್ಧ್‌ಗೆ ಹಾಡಲು ಅವಕಾಶ ನೀಡುವ ಮುಖಾಂತರ ಬಾಬು ಮತ್ತೆ ಜಯನಗರದ ಹೆಡ್ ಆಫೀಸ್ ಕಡೆಗೆ ಸ್ನೇಹಹಸ್ತ ಚಾಚಿದ್ದಾರೆ. ಬಾಬುಗೆ ಒಳ್ಳೆಯದಾಗಲಿ.

ಓವರ್ ಟು ಮಲೆಯಾಳಂ ತಂಗಿ



ರಾಧಿಕಾ ಬಣ್ಣದ ಲೋಕದಿಂದ ನಿಗೂಢ ಲೋಕಕ್ಕೆ ಕಾಲಿಟ್ಟ ನಂತರ ಹೆಚ್ಚು ಕಷ್ಟಪಡುತ್ತಿರುವವರು ನಿರ್ದೇಶಕ ಸಾಯಿಪ್ರಕಾಶ್. ಅವರ ನಿರ್ದೇಶನದ 'ತವರಿಗೆ ಬಾ ತಂಗಿ' ಚಿತ್ರ ಬಾಕ್ಸಾಫೀಸ್‌ನಲ್ಲಿ ಗೆದ್ದ ನಂತರ ಶಿವರಾಜ್‌ಕುಮಾರ್ ಮತ್ತು ರಾಧಿಕಾ ಜೋಡಿಯನ್ನು ಹಾಕಿಕೊಂಡು ಕನಿಷ್ಠ ಹತ್ತು ಕಣ್ಣೀರು ಸುರಿಸುವ ಚಿತ್ರಗಳನ್ನು ಮಾಡಬೇಕೆಂದು ಸ್ಕೆಚ್ ಹಾಕಿದ್ದರು. ಆದರೆ ಪಾಪ, ಈ ಹಿರಿಯ ನಿರ್ದೇಶಕನ ಫೋನ್ ಕರೆಯನ್ನು ಸ್ವೀಕರಿಸುವ ಸ್ಥಿತಿಯಲ್ಲಿ ಈಗ ರಾಧಿಕಾ ಇಲ್ಲ. ರಾಧಿಕಾಳಿಗಾಗಿ ಕಳೆದ ಎರಡು ವರ್ಷಗಳಿಂದ ಕಾದು ಕುಳಿತ ಸಾಯಿಪ್ರಕಾಶ್, ಕೊನೆಯಲ್ಲಿ ಮೀರಾ ಜಾಸ್ಮಿನ್‌ಳನ್ನು ಶಿವಣ್ಣನ ತಂಗಿಯಾಗಿ ತಮ್ಮ ಮುಂದಿನ ಚಿತ್ರಕ್ಕೆ ಆಯ್ಕೆ ಮಾಡಿದ್ದಾರೆ. ರಾಧಿಕಾ ನಂತರ ಮಧ್ಯದಲ್ಲೊಮ್ಮೆ ಹರಿಪ್ರಿಯಾ ಕೂಡಾ ತಂಗಿಯಾಗಿ ನಟಿಸಿದರೂ ಅಷ್ಟೇನೂ ವರ್ಕ್‌ಔಟ್ ಆಗಲಿಲ್ಲ. ಹೀಗಾಗಿ ಕನ್ನಡದ ಚಿತ್ರಕ್ಕೆ ಈಗ ಮಲೆಯಾಳಂ ತಂಗಿ ಅನಿವಾರ್ಯವಾಗಿದ್ದಾಳೆ. ಆ ಚಿತ್ರದ ಹೆಸರು 'ದೇವರು ಕೊಟ್ಟ ತಂಗಿ'. ಅಂದಹಾಗೆ ಸಾಯಿ ಪ್ರಕಾಶ್ [illegible] 'ಬಳೆಗಾರ' ಚಿತ್ರದಲ್ಲೂ ಶಿವಣ್ಣನಿಗೆ ಮಲೆಯಾಳಂ ಹುಡುಗಿ ನವ್ಯನಾಯರ್ ನಾಯಕಿ.

R B P LANKESH, Kannada Weekly Price Rs. 12/- 15-04-2009 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4.

ತಾರಾಳ ಹೊಸ ವೇಷ!



ಕಲಾತ್ಮಕ ಚಿತ್ರ ಮತ್ತು ಕಮರ್ಷಿಯಲ್ ಚಿತ್ರ ಜಗತ್ತಿನಲ್ಲಿ ಯಾವುದೇ ಪಾತ್ರ ನೀಡಿದರೂ ಅದನ್ನು ಲೀಲಾಜಾಲವಾಗಿ ನಿರ್ವಹಿಸುವ ತಾರಾ ರಾಜಕೀಯರಂಗದಲ್ಲೂ ಇದೇ ರೀತಿ ವರ್ಷಕ್ಕೊಂದು ಹೊಸ ಪಾತ್ರವನ್ನು ನಿರ್ವಹಿಸುತ್ತಾ ಮತದಾರ ಪ್ರಭುಗಳಿಗೆ ಪುಕ್ಕಟೆ ಮನರಂಜನೆ ನೀಡುತ್ತಿದ್ದಾರೆ.

ಕಳೆದ ವರ್ಷ ಹೆಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಉಳ್ಳಾಲ ಉಪಚುನಾವಣೆ ಸಂದರ್ಭದಲ್ಲಿ ಇದೇ 'ತಾರಮ್ಮ' ಕರಾವಳಿಯ ಉರಿಬಿಸಿಲನ್ನು ಲೆಕ್ಕಿಸದೆ ಕುಮಾರಸ್ವಾಮಿಯ ಅಭ್ಯರ್ಥಿಯ ಪರವಾಗಿ ಬಿರುಸಿನ ಪ್ರಚಾರ ಕೈಗೊಂಡಿದ್ದರು. ಆ ಸಂದರ್ಭದಲ್ಲೇ ತಾರಾ ಜೆಡಿಎಸ್‌ನ ಏಕೈಕ ಪ್ರಬಲ ಆಕರ್ಷಣೆಯಾಗಿ ಮಿಂಚಿದ್ದರು. ಅಷ್ಟೇ ಅಲ್ಲ, ಈಕೆಗೆ ದಳದಲ್ಲಿ ಬಹಳ ಪ್ರಮುಖವಾದ ಹುದ್ದೆ ಸಿಗುತ್ತದೆಯೆಂಬ ಗಾಳಿ ಸುದ್ದಿಯೂ ಕೇಳಿಬಂದಿತ್ತು.

ಈಗ ನೋಡಿದರೆ ಈ ವರ್ಷ ದಿಢೀರನೆ ಅದೇ ತಾರಮ್ಮ ಹೊಸ ವೇಷ, ಡೈಲಾಗ್‌ಗಳೊಂದಿಗೆ ಮಂಗಳೂರಿನ ಕರಾವಳಿಯಲ್ಲಿ ಓಡಾಡುತ್ತಿದ್ದಾರೆ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅಭಿವೃದ್ಧಿಯಾಗುತ್ತಿದೆ; ಎಲ್ಲರಿಗೂ ರಕ್ಷಣೆ ಸಿಗುತ್ತಿದೆ ಎಂದು ಯಾರೋ ಬರೆದುಕೊಟ್ಟ ಡೈಲಾಗನ್ನು ಚುನಾವಣೆ ಸಭೆ ಸಮಾರಂಭಗಳಲ್ಲಿ ತಾರಮ್ಮ ಹೇಳುತ್ತಿದ್ದಾರೆ.

ಆಕೆಯ ಮುಖಚರ್ಯೆ, ಎತ್ತರ ಮತ್ತು ಮೈಕಟ್ಟು ಒಂದು ರೀತಿಯಲ್ಲಿ ಬಿಜೆಪಿಯ ಮಾಜಿ ನಾಯಕಿ ಉಮಾ ಭಾರತಿಯನ್ನು ಹೋಲುತ್ತದೆ. ಮಾತ್ರವಲ್ಲ, ಇತ್ತೀಚೆಗೆ ತಾರಾ ಕೂಡ ಉಮಾಭಾರತಿಯ ಶೈಲಿಯಲ್ಲೇ ಉದ್ದುದ್ದ ನಿಲುವಂಗಿಯನ್ನು ಕೂಡಾ ಧರಿಸುತ್ತಿದ್ದಾರೆ. ಉಮಾ ತರಹ ಕೇಸರಿ ಬಣ್ಣದ ನಿಲುವಂಗಿಯನ್ನೇ ಧರಿಸಿದರೆ ಆಕೆ ಡಿಟ್ಟೋ ಉಮಾಭಾರತಿಯೇ!

ಈ ತಾರಾ ಪ್ರತಿ ಚುನಾವಣಾ ಸಂದರ್ಭದಲ್ಲಿ ಈ ರೀತಿ ಯಾವುದಾದರೊಂದು ರಾಜಕೀಯ ಪಕ್ಷಕ್ಕೆ ತಾಕಿಕೊಳ್ಳುತ್ತಾಳೆ. ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ ಈಕೆ ಕಾಂಗ್ರೆಸ್ ಪರ ಚುನಾವಣೆಯಲ್ಲಿ ಪ್ರಚಾರ ಮಾಡಿದ್ದರು. ಆನಂತರ ಜೆಡಿಎಸ್ ನೊಂದಿಗಿದ್ದು ಈಗ ಚಡ್ಡಿಗಳ ಪಕ್ಷ ಹೊಕ್ಕಿದ್ದಾರೆ. ಯಾವುದೇ ತತ್ವ ಸಿದ್ಧಾಂತಗಳಿಗೆ ಬದ್ಧವಾಗಿರದ ತಾರಾ ಗಾಳಿ ಬಂದ ಕಡೆ ತೂರುವ ಮಹಿಳೆ. ಇಂತಹ ಬಣ್ಣದ ವ್ಯಕ್ತಿಗಳಿಂದ ಈ ದೇಶದ ಭವಿಷ್ಯದ ಬಗ್ಗೆ ಭಾಷಣ ಕೇಳಬೇಕಾಗಿ ಬಂದಿರುವುದು ಕನ್ನಡಿಗರ ದುರಂತ.

ಈಗಾಗಲೇ ಮೂರು ಪಕ್ಷಗಳನ್ನು ಬದಲಾಯಿಸಿರುವ ತಾರಾ ಮುಂದಿನ ಚುನಾವಣೆಯಲ್ಲಿ ಯಾವ ಪಕ್ಷದ ಪರ ಪ್ರಚಾರ ಆರಂಭಿಸಬಹುದು ಎಂಬ ಜೋಕ್ ಕೂಡಾ ಈಗ ಆರಂಭವಾಗಿದೆ. ಆದರೆ ಬಿಜೆಪಿ ಪಕ್ಷದವರು ಹೇಳುವುದೇ ಬೇರೆ. ಈ ಬಾರಿ ಆ ಪಕ್ಷದಲ್ಲಿರುವ ತೆಲುಗು ಲಾಬಿ ಈ ತೆಲುಗು ಪಿಲ್ಲಾಳನ್ನು ಕೈಬಿಡುವುದಿಲ್ಲವಂತೆ! ಕಳೆದ ಬಾರಿ ಅಸೆಂಬ್ಲಿ ಚುನಾವಣೆಗೆ ಪ್ರಚಾರ ಮಾಡಿದ ಶ್ರುತಿಗೆ ಈಗಾಗಲೇ ಒಂದು ಹುದ್ದೆ ಮತ್ತು ಕೆಂಪು ಗೂಟದ ಕಾರು ನೀಡಲಾಗಿದೆ! ಅದೇ ರೀತಿ ಲೋಕಸಭಾ ಚುನಾವಣೆಯ ನಂತರ ತಾರಾಳಿಗೂ ಒಂದು ಕೆಂಪು ಗೂಟದ ಕಾರು ಸಿಗಲಿದೆಯಂತೆ.

ಬಿಜೆಪಿಗೆ ಈ ಇಬ್ಬರು ಸ್ಟಾರ್‌ಗಳಿಂದ ಏನು ಲಾಭವಾಯಿತೋ ಗೊತ್ತಿಲ್ಲ, ಆದರೆ ಜನರ ದುಡ್ಡಿನಲ್ಲಿ ಎರಡು ಕಾರು ನಷ್ಟವಾಗಿದ್ದಂತೂ ಸತ್ಯ! ■

ಕಳ್ಳ-ಕಳ್ಳಿ ಪೊಲೀಸ್ ಆಟ





ಇಂತಹ ಜೋಕ್ಸ್‌ಗಳು ಕನ್ನಡ ಚಿತ್ರರಂಗದಲ್ಲಿ ಮಾತ್ರ ಸಾಧ್ಯ!

ಕಳೆದ ವಾರ ಮಾಲಾಶ್ರೀ ನಟಿಸಿದ 'ಕಿರಣ್ ಬೇದಿ' ಮತ್ತು ಅದರ ಹಿಂದಿನ ವಾರ ಸುದೀಪ್ ನಟಿಸಿದ 'ವೀರ ಮದಕರಿ' ಚಿತ್ರದ ಕಥಾವಸ್ತುಗಳು ಏಕರೂಪದ್ದಾಗಿದ್ದು ಪ್ರೇಕ್ಷಕರನ್ನು ನಗೆಗಡಲಲ್ಲಿ ದೂಡಿದೆ.

ಅಲ್ಲಿ ಕಳ್ಳ-ಇನ್ಸ್‌ಪೆಕ್ಟರ್, ಇಲ್ಲಿ ಕಳ್ಳಿ-ಇನ್ಸ್‌ಪೆಕ್ಟರ್. ಚಿತ್ರದ ಆರಂಭ, ಮಧ್ಯಂತರ, ಕೊನೆ ಇವೆಲ್ಲವೂ ಬಹುತೇಕ ಒಂದೇ ಆಗಿದೆ. ಮಧ್ಯೆ ಮಧ್ಯೆ ಸ್ವಲ್ಪ ಬೇರೆ ಬೇರೆ ಮಸಾಲೆ ತುರುಕಿದ್ದಾರಷ್ಟೇ.

ಆದರೆ ಅಪರೂಪಕ್ಕೆ ಕನ್ನಡ ಚಿತ್ರರಂಗದಲ್ಲಿ ಮಹಿಳೆ ಕೂಡಾ ಪುರುಷ ಸಮಾನವಾಗಿ ಹೊಡಿ-ಬಡಿ-ಕಡಿಯಲ್ಲಿ ಕಾಣಿಸಿಕೊಳ್ಳಲು ಸಾಧ್ಯ ಎಂದು ಮಾಲಾಶ್ರೀ ಕೃಪೆಯಿಂದ ನಿರೂಪಿಸಲ್ಪಟ್ಟಿದೆ. ಈ ಚಿತ್ರಗಳ ಪೈಪೋಟಿಯಿಂದ ಇಬ್ಬರಿಗೂ ಈಗ ಸಾಕಷ್ಟು ನಷ್ಟ-ಕಷ್ಟಗಳುಂಟಾಗಿದೆ. ಆದರೂ ಬಾಕ್ಸಾಫೀಸ್ ಗಳಿಕೆ ದೃಷ್ಟಿಯಿಂದ ವೀರ ಮದಕರಿಯೇ ಮಹಿಳಾ ಮದ ಕರಿಣಿಗಿಂತ ಮುಂದಿದ್ದಾನೆ.

ಗಿಮಿಕ್ ರಾಜನ ತಮಾಷೆ



ಪ್ರೇಮ್ ನಿರ್ದೇಶನದ, ಪುನೀತ್ ರಾಜ್‌ಕುಮಾರ್ ಅಭಿನಯದ 'ರಾಜ್' ಚಿತ್ರದ ಆಡಿಯೋ ಕ್ಯಾಸೆಟ್‌ಗಳು ಬಿಡುಗಡೆಯಾಗಿವೆ. ಇನ್ನೇನು ಕೆಲವೇ ದಿನಗಳಲ್ಲಿ ಚಿತ್ರ ಕೂಡಾ ತೆರೆ ಕಾಣಲಿದೆ.

ಈ ಮಧ್ಯೆ ಎಂದಿನಂತೆ ಚಿತ್ರ ಬಿಡುಗಡೆ ಮಾಡುವ ಮೊದಲು ಗಿಮಿಕ್ ರಾಜ ಪ್ರೇಮ್ ಗಿಮಿಕ್ ಮಾಡಲು ಶುರುಮಾಡಿದ್ದಾರೆ. ಮೊನ್ನೆ ಕ್ಯಾಸೆಟ್ ಬಿಡುಗಡೆ ಸಮಾರಂಭಕ್ಕೆ ಡೀಲರ್ಸ್‌ಗಳನ್ನು ಕರೆಸಿ ಅವರಿಂದಲೇ ಎಷ್ಟೆಷ್ಟು ಕ್ಯಾಸೆಟ್ ಮಾರಾಟವಾಗಿದೆಯೆಂದು ಪತ್ರಕರ್ತರ ಎದುರು ಗಿಣಿಪಾಠ ಮಾಡಿಸಿದರು.

ಅಷ್ಟೇ ಅಲ್ಲ, ಮನೆ ಬಾಗಿಲಿಗೆ 'ರಾಜ್' ಟಿಕೆಟ್ ಎಂಬ ಹೊಸ ಪ್ರಚಾರ ತಂತ್ರವನ್ನು ಪ್ರೇಮ್ ಆರಂಭಿಸಿದ್ದಾರೆ. ಚಿತ್ರದ ಟಿಕೆಟ್ ನಿಮಗೆ ಬೇಕೆ? ಎಂದು ಸ್ವಯಂಸೇವಕರು ಮನೆಬಾಗಿಲಿಗೆ ಬರುತ್ತಾರಂತೆ! ಇದರಿಂದ ಹೆಚ್ಚು ಜನ ಸಿನಿಮಾಕ್ಕೆ ಬರಬಹುದು ಎಂಬುದು ಪ್ರೇಮ್ ಲೆಕ್ಕಾಚಾರ. ಇವರ ಈ ವಾದವನ್ನು ನೋಡಿದಾಗ ನಿಜವಾಗಲೂ ನಗುಬರುತ್ತದೆ. ಇವತ್ತು ಮನೆ ಬಾಗಿಲಿಗೆ ಗಾಡಿ ತಳ್ಳಿಕೊಂಡು ತರಕಾರಿಯವನು ಬಂದರೂ ಅದರ ಬದಲಿಗೆ ಮಾಲ್‌ಗಳಿಗೆ ಹೋಗಿ ತರಕಾರಿ ಖರೀದಿಸುವ ಫ್ಯಾಷನ್ ಇದೆ. ಅಂತಹದರಲ್ಲಿ ಮನೆಗೆ ಬಂದ ಸಿನಿಮಾ ಟಿಕೆಟ್‌ಅನ್ನು ಖರೀದಿಸಿ ಥಿಯೇಟರ್‌ಗೆ ಯಾರಾದರೂ ಹೋಗುತ್ತಾರೆಯೇ?

ಸಿನಿಮಾ ನೋಡುವುದು ಕೂಡಾ ಇಂದು ಪ್ರೇಕ್ಷಕರಿಗೆ ಒಂದು ಈವೆಂಟ್. ಅದಕ್ಕಾಗಿ ಮನೆ, ಆಫೀಸ್, ಇನ್ನಿತರ ಕೆಲಸ ಮುಗಿಸಿ, ಬಿಡುವು ಮಾಡಿಕೊಂಡು ಥಿಯೇಟರ್‌ಗೆ ಹೋಗುವುದು, ಟಿಕೆಟ್‌ಗಾಗಿ ಕ್ಯೂ ನಿಲ್ಲುವುದು ಜನ ಇಷ್ಟಪಡುತ್ತಾರೆ.

ಇವೆಲ್ಲವನ್ನೂ ಹೊರತುಪಡಿಸಿ ನೋಡಿದರೂ ಪುನೀತ್ ತರಹದ ಸ್ಟಾರ್ ನಟನ ಚಿತ್ರಕ್ಕೆ ಈ ತರಹದ ಚೀಪ್ ಪಬ್ಲಿಸಿಟಿ ಗಿಮಿಕ್‌ಗಳು ಬೇಕಾ?

ತಾರಾಳ ಎಮ್ಮೆ ಹಾಡು



ಇನ್ನು ಮುಂದೆ ಕನ್ನಡದಲ್ಲಿ 'ಸಂಪತ್ತಿಗೆ ಸವಾಲ್' ಚಿತ್ರದ ಎಮ್ಮೆ ಹಾಡಿನಂತಹ ಹಾಡು ಬರಲು ಸಾಧ್ಯವೇ? "ಸಾಧ್ಯವಿಲ್ಲ" ಎನ್ನುತ್ತಾರೆ ಐದು ಭಾಷೆಗಳಲ್ಲಿ ಕೆಲಸ ಮಾಡಿ, ಸುಮಾರು ಮೂರು ಸಾವಿರಕ್ಕೂ ಹೆಚ್ಚು ಚಿತ್ರಗಳಿಗೆ ನೃತ್ಯ ನಿರ್ದೇಶನ ಮಾಡಿರುವ ನೃತ್ಯ ನಿರ್ದೇಶಕಿ ತಾರಾರವರು.

"ಕಳೆದ ಎಂಟ್ಹತ್ತು ವರ್ಷಗಳಿಂದ ಬಂದಿರುವ ನೃತ್ಯ ನಿರ್ದೇಶಕರಿಗೆ ಸಂಸ್ಕೃತಿ ಗೊತ್ತಿಲ್ಲ. ಉತ್ತಮ ಜೀವನಾನುಭವದ ಕೊರತೆಯಿರುವುದರಿಂದ ಅವರ ನೃತ್ಯಗಳು ಏಕತಾನತೆಯಿಂದ ಕೂಡಿದೆ" ಎಂದು ತಾರಾ ನೇರವಾಗಿ ಆಪಾದಿಸುತ್ತಾರೆ. "ನೃತ್ಯ ನಿರ್ದೇಶನ ಮಾಡುವುದೆಂದರೆ ಬರೀ ಸೊಂಟ ಅಲ್ಲಾಡಿಸುವುದು, ದೇಹದ ಉಬ್ಬುತಗ್ಗುಗಳನ್ನು ಪ್ರಚೋದನಾಕಾರಿಯಾಗಿ ತೋರಿಸುವುದಷ್ಟೇ ಅಲ್ಲ" ಎಂದೂ ಅವರು ಹೇಳುತ್ತಾರೆ.

ಆದರೆ ಈ ತಾರಾ ಮೇಡಂಅನ್ನು ಗಾಂಧಿನಗರದವರು ಸೆಕ್ಸಿ ಮೂವ್‌ಮೆಂಟ್ ನೃತ್ಯಕ್ಕಾಗಿ ಕರೆತರುತ್ತಿದ್ದಾರೆ ಎಂಬುದೇ ಸೋಜಿಗದ ವಿಷಯ!



'ಜೀವ' ಋತುವಾ

ಜಂಗ್ಲಿ ಮತ್ತು ಅಗ್ಲಿ



'ಜಂಗ್ಲಿ' ಮತ್ತು 'ಅಂಬಾರಿ' ಚಿತ್ರಗಳು ಐವತ್ತು ದಿನಗಳನ್ನು ಪೂರೈಸಿವೆ. ಇವೆರಡರಲ್ಲಿ ಒಂದು ಸ್ವಮೇಕು ಇನ್ನೊಂದು ರಿಮೇಕು. ಕೇವಲ ಒಂದೇ ವಾರಕ್ಕೆ ಇತ್ತೀಚೆಗೆ ಕನ್ನಡ ಚಿತ್ರಗಳು ಎತ್ತಂಗಡಿಯಾಗುತ್ತಿರುವ ಈ ಸಂಕ್ರಮಣ ಕಾಲಘಟ್ಟದಲ್ಲಿ ಈ ಎರಡು ಚಿತ್ರಗಳು ಐವತ್ತು ದಿನ ಪೂರೈಸಿರುವುದು ವಿಶೇಷವೇ ಸರಿ.

ಆದರೆ ಅದಕ್ಕಿಂತ ವಿಶೇಷವೆಂದರೆ ಈ ಎರಡೂ ಚಿತ್ರಗಳು ಐವತ್ತರ ಗಡಿಯನ್ನು ಬಲವಂತವಾಗಿ ದಾಟಿಸಿದ್ದು! ಹೀಗಾಗಿ ಈ ಚಿತ್ರದ ಯಶಸ್ಸು ನಿರ್ದೇಶಕ ಅಥವಾ ಕಲಾವಿದರಾರಿಗೂ ದಕ್ಕಿಲ್ಲ.

ಐವತ್ತು ದಿನಗಳ ಬಲವಂತ ಪ್ರದರ್ಶನ ಕಂಡಿರುವ ಇವೆರಡೂ ಚಿತ್ರಗಳೇ ಈ ವರ್ಷದ ಸೂಪರ್ ಹಿಟ್ ಚಿತ್ರಗಳು ಎಂಬ ಗೌರವಕ್ಕೆ ಪಾತ್ರವಾಗಿರುವುದು ವಿಪರ್ಯಾಸವೇ ಸರಿ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44